
# ದೆಹಲಿ ಕರ್ನಾಟಕ ಸಂಘದ ಅಭಿಮತ

ಏಪ್ರಿಲ್ 2013
ಬೆಲೆ ರೂ. 1



# ನಟ ದ್ವಾರಕೀಶ್ ಅವರಿಗೆ ದಾದಾ ಸಾಹೇಬ್ ಫಾಲ್ಕೆ ಅಕಾಡೆಮಿ ಪ್ರಶಸ್ತಿ



ಕನ್ನಡ ಚಿತ್ರರಂಗದ ಹಿರಿಯ ಕಲಾವಿದ, ನಿರ್ದೇಶಕ, ನಿರ್ಮಾಪಕ ದ್ವಾರಕೀಶ್ ಅವರು ದಾದಾ ಸಾಹೇಬ್ ಫಾಲ್ಕೆ ಅಕಾಡೆಮಿ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಜೀವಮಾನದ ಸಾಧನೆಗಾಗಿ ಅವರಿಗೆ ಈ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ. ಏಪ್ರಿಲ್ 30ರಂದು ಮುಂಬಯಿಯಲ್ಲಿ ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುತ್ತದೆ. ಈ ಹಿಂದೆ ಇದೇ ಪ್ರಶಸ್ತಿಗೆ ಪಾರ್ವತಮ್ಮ ರಾಜ್‌ಕುಮಾರ್,ಕೆ.ಸಿ.ಎನ್.ಗೌಡ, ಎ.ಆರ್.ರಾಜು ಅವರು ಭಾಜನರಾಗಿದ್ದಾರೆ.

ಜಂಗಲ್ ಶಾಮಾರಾವ್ ಮತ್ತು ಜಯಮ್ಮ ದಂಪತಿಗಳ ಪುತ್ರನಾದ ದ್ವಾರಕಾನಾಥ್ ಅವರು ಆಗಸ್ಟ್ 19, 1942ರಲ್ಲಿ ಹುಣಸೂರಿನಲ್ಲಿ ಜನಿಸಿದರು. ಚಲನಚಿತ್ರ ರಂಗಕ್ಕೆ ಬಂದಮೇಲೆ ಅವರಿಗೆ ಕನ್ನಡ ಚಿತ್ರ ನಿರ್ಮಾಪಕ ಸಿ.ವಿ.ಶಿವಶಂಕರ್ ಅವರು 'ದ್ವಾರಕೀಶ್' ಎಂದು ನಾಮಕರಣ ಮಾಡಿದರು. ಮೈಸೂರಿನ ಇಟ್ಟಿಗೆಗೂಡಿನಲ್ಲಿ ತಮ್ಮ ಬಾಲ್ಯ, ವಿದ್ಯಾಭ್ಯಾಸವನ್ನು ಪಡೆದ ದ್ವಾರಕೀಶ್ ಅವರು ಚಿತ್ರರಂಗದ ಕಡೆಗೆ ಒಲವು ತೋರಿದರು. ಅವರ ಸೋದರ ಮಾವ ಖ್ಯಾತ ನಿರ್ದೇಶಕ ಹುಣಸೂರು ಕೃಷ್ಣಮೂರ್ತಿಯವರ ಬೆಂಬಲದೊಡನೆ 1963ರಲ್ಲಿ ಚಿತ್ರರಂಗವನ್ನು ಪ್ರವೇಶಿಸಿದರು.

1969ರಲ್ಲಿ ದ್ವಾರಕೀಶ್ ಸ್ವತಂತ್ರವಾಗಿ 'ದ್ವಾರಕಾ ಫಿಲ್ಮ್ಸ್' ಬ್ಯಾನರ್‌ನಡಿಯಲ್ಲಿ ತಮ್ಮ ಮೊಟ್ಟ ಮೊದಲ ಚಿತ್ರ 'ಮೇಯರ್ ಮುತ್ತಣ್ಣ' ನಿರ್ಮಿಸಿದರು. ಡಾ.ರಾಜ್ ಕುಮಾರ್ ಹಾಗೂ ಭಾರತಿ ಜೋಡಿಯ ಈ ಚಿತ್ರ ಅತ್ಯಂತ ಜನಪ್ರಿಯವಾಯಿತು. ಆನಂತರ, ದ್ವಾರಕೀಶ್ ಮುಂದಿನ ಎರಡು ದಶಕಗಳಲ್ಲಿ ಕನ್ನಡ ಸಿನಿಮಾ ರಂಗದ ಗಲ್ಲಾ ಪೆಟ್ಟಿಗೆಯ ಯಶಸ್ವಿನ ಸರಣಿಯ ಚಿತ್ರಗಳನ್ನು ನೀಡಿದರು. ಅಲ್ಲದೇ 'ಸಿನಿಮಾ ನಿರ್ಮಾಪಕರ ರಾಜ' ಎಂದೇ ಖ್ಯಾತರಾದರು.

ಯಶಸ್ವಿ ನಿರ್ಮಾಪಕರಾದ ದ್ವಾರಕೀಶ್ 1985ರಲ್ಲಿ 'ನೀ ಬರೆದ ಕಾದಂಬರಿ' ಚಿತ್ರದ ಮೂಲಕ ನಿರ್ದೇಶಕರಾದರು. ಅವರು ಶೃತಿ, ಶೃತಿ ಹಾಕಿದ ಹೆಜ್ಜೆ, ರಾಯರು ಬಂದರು ಮಾವನ ಮನೆಗೆ, ಕಿಲಾಡಿಗಳು ಮೊದಲಾದ ಯಶಸ್ವಿ ಚಿತ್ರಗಳನ್ನು ನಿರ್ದೇಶಿಸಿದರು. ಕೆಲವು ಚಿತ್ರಗಳ ಸೋಲಿನಿಂದ 'ದ್ವಾರಕೀಶ್ ಚಿತ್ರ' ಸಮಸ್ಯೆಗಳನ್ನು ಎದುರಿಸಬೇಕಾಯಿತು. ನಿರಂತರ ಗಲ್ಲಾಪೆಟ್ಟಿಗೆಯ ಸೋಲಿನಿಂದ ಬೃಹತ್ ನಷ್ಟದಿಂದ ದ್ವಾರಕೀಶ್ ಅವರು ಕನ್ನಡ ಚಿತ್ರರಂಗದಿಂದ ದೂರ ಸರಿಯಬೇಕಾಯಿತು. ಅವರೇ ಹೇಳುವಂತೆ ಸುಮಾರು 32 ಕೋಟಿ ರೂಪಾಯಿಗಳ ನಷ್ಟವನ್ನು ಎದುರಿಸಬೇಕಾಯಿತು. ಆದರೆ ಈ ವಿಫಲತೆಯಿಂದ ದ್ವಾರಕೀಶ್ ಹತಾಶರಾಗಲಿಲ್ಲ. ವಿಫಲತೆಗಳ ನಡುವೆಯೂ ಎದೆಗುಂದದೇ ಅವರು ಕನ್ನಡ ಚಿತ್ರರಂಗಕ್ಕೆ ಹೊಸ ಮುಖಗಳನ್ನು ಪರಿಚಯಿಸುವ ಸಿನಿಮಾ ಮಾಡಲು ಮುಂದುವರೆದರು.

ನಿರ್ಮಾಪಕರಾಗಿ ದ್ವಾರಕೀಶ್ ಅವರು ಚಿತ್ರರಂಗಕ್ಕೆ ಹಲವಾರು ಹೊಸ ನಟ, ನಟಿಯರು, ನಿರ್ದೇಶಕರು ಹಾಗೂ ತಂತ್ರಜ್ಞರಿಗೆ ಅವಕಾಶಗಳನ್ನು ನೀಡಿ 'ಗಾಡ್ ಫಾದರ್' ಎನಿಸಿಕೊಂಡಿದ್ದಾರೆ. ಈ ಜನರ ಬೆಂಬಲ ಹಾಗೂ ಅವರ ಚಿತ್ರರಂಗದ ಸಂಪೂರ್ಣ ಸಮರ್ಪಣೆ ಅವರಿಗೆ ಮುಂದೆ ಬಹು ನಿರೀಕ್ಷಿತ ಯಶಸ್ವಿನ ಕ್ಷಣಗಳನ್ನು ನೀಡಿತು. 2004ರಲ್ಲಿ ಅವರು ವಿಷ್ಣುವರ್ಧನ್ ಅಭಿನಯದ 'ಆಪ್ತಮಿತ್ರ' ಚಿತ್ರವನ್ನು ನಿರ್ಮಿಸಿದರು. ಕನ್ನಡ ಚಿತ್ರ ಜಗತ್ತಿನ ಅಭೂತ ಪೂರ್ವ ಯಶಸ್ಸು ಕಂಡ ಈ ಚಿತ್ರದ ಮೂಲಕ 'ಕನ್ನಡ ಸಿನಿಮಾ ನಿರ್ಮಾಪಕರ ರಾಜ' ಎನಿಸಿಕೊಂಡಿದ್ದ ದ್ವಾರಕೀಶ್ ಮತ್ತೆ ಸಿಂಹಾಸನವನ್ನು ಏರಿದರು.

ಹಾಸ್ಯನಟರಾಗಿಯೇ ಖ್ಯಾತರಾದ ದ್ವಾರಕೀಶ್ ಅವರು 'ಕುಳ್ಳ' ಎಂದೇ ಜನಪ್ರಿಯರು. 'ಸಿಂಗಾಪೂರದಲ್ಲಿ ರಾಜಾ ಕುಳ್ಳ' ಚಿತ್ರವನ್ನು ಭಾರತದ ಹೊರಗೆ ಚಿತ್ರೀಕರಿಸಿದ ಮೊದಲ ಕನ್ನಡ ಚಿತ್ರ ಎಂಬ ಹೆಗ್ಗಳಿಕೆ ಇವರದ್ದು. ಈ ಚಿತ್ರ ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ಮೈಲುಗಲ್ಲಾಗಿದೆ. ಅವರು ಒಟ್ಟು 49 ಕನ್ನಡ ಚಿತ್ರಗಳನ್ನು ನಿರ್ಮಿಸಿ, 300ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದಾರೆ, ಹಲವಾರು 'ಪ್ರಥಮ'ಗಳ ದಾಖಲೆ ನಿರ್ಮಿಸಿದ ದ್ವಾರಕೀಶ್ ನಿಜಕ್ಕೂ 'ಸೋಲಿಲ್ಲದ ಸರದಾರ'.

ಅವರ 'ಆಪ್ತಮಿತ್ರ' ಚಿತ್ರ ಕನ್ನಡ ಚಿತ್ರರಂಗದಲ್ಲಿ ಹೊಸ ಭಾಷ್ಯವನ್ನು ಬರೆಯಿತು. ನಾಲ್ಕು ಪ್ರದರ್ಶನಗಳೊಡನೆ ಪೂರ್ಣ ಒಂದು ವರ್ಷ ಪ್ರದರ್ಶಿತವಾದ ಮೊದಲ ಕನ್ನಡ ಚಿತ್ರ ಹಾಗೂ ಮೈಸೂರು ಮತ್ತು ಬೆಂಗಳೂರಿನಲ್ಲಿ ಎರಡು ಚಿತ್ರ ಮಂದಿರಗಳಲ್ಲಿ ಪೂರ್ಣ ಒಂದು ವರ್ಷ ಪ್ರದರ್ಶಿತವಾದ ಮೊದಲ ಚಿತ್ರ ಎಂಬ ದಾಖಲೆ ನಿರ್ಮಿಸಿದೆ. ಅಲ್ಲದೇ 52 ವರ್ಷಗಳ ಸಿನಿಮಾ ಇತಿಹಾಸದಲ್ಲಿ ಒಂದು ನಿರ್ದಿಷ್ಟ ಭಾಷೆಯ ಚಿತ್ರಗಳಲ್ಲಿ ನೀಡಿದ ಎಲ್ಲಾ ಪ್ರಶಸ್ತಿಗಳನ್ನು ಗೆದ್ದ ಮೊದಲ ಚಿತ್ರ ಎಂಬ ಹೆಗ್ಗಳಿಕೆ ಈ ಚಿತ್ರದ್ದು.

2012ರ ದಾದಾ ಸಾಹೇಬ್ ಫಾಲ್ಕೆ ಅಕಾಡೆಮಿ ಪ್ರಶಸ್ತಿ ಗರಿ ಜೀವನದ ಏಳು–ಬೀಳುಗಳ ನಡುವೆಯೂ ಫೀನಿಕ್ಸ್ ನಂತೆ ಮೇಲೆದ್ದ ದ್ವಾರಕೀಶ್ ಅವರ ಮುಡಿಗೇರಿದೆ. ಇದು ನಿಜಕ್ಕೂ ಕನ್ನಡಿಗರೆಲ್ಲರಿಗೂ ಹೆಮ್ಮೆ ತರುವ ಸಂಗತಿ. ಅವರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾಗೂ ಸಮಸ್ತ ಕನ್ನಡಿಗರ ಪರವಾಗಿ ಆತ್ಮೀಯ ಅಭಿನಂದನೆಗಳು. ಅವರ ಯಶಸ್ವಿ ಸಿನಿಮಾ ಪಯಣ ನಿರಂತರವಾಗಿ ಸಾಗಲಿ, ಕೀರ್ತಿಯ ಉತ್ತುಂಗ ಶಿಖರಕ್ಕೇರಲಿ ಎಂದು ಶುಭ ಹಾರೈಸುತ್ತೇವೆ.

**ಏಪ್ರಿಲ್ 5ರಂದು ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರು ರಾಹುಲ್ ದ್ರಾವಿಡ್ ಅವರಿಗೆ ಪದ್ಮಭೂಷಣ ಹಾಗೂ ಬಿ.ಜಯಶ್ರೀ ಅವರಿಗೆ ಪದ್ಮಶ್ರೀ ಪುರಸ್ಕಾರ ಪ್ರದಾನ ಮಾಡಿದರು**





ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 23 ಸಂಚಿಕೆ 7

ಏಪ್ರಿಲ್ 2013, ಬೆಲೆ ರೂ. 1

**ಪ್ರಧಾನ ಸಂಪಾದಕರು**
ಉಷಾ ಭರತಾದ್ರಿ

**ಸಂಪಾದಕ ಮಂಡಳಿ**
ಚೆನ್ನು ಎಸ್. ಮಠದ
ರೇಣುಕಾ ಎಸ್. ನಿಡಗುಂದಿ
ಸಂತೋಷ್ ಕುಮಾರ್ ಉಪಾಧ್ಯಾಯ

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ

**ಅಧ್ಯಕ್ಷರು**
ಡಾ. ವೆಂಕಟಾಚಲ ಜಿ. ಹೆಗಡೆ

**ಉಪಾಧ್ಯಕ್ಷರು**
ಉಷಾ ಭರತಾದ್ರಿ
ಬಿ.ಕೆ. ಬಸವರಾಜು

**ಪ್ರಧಾನ ಕಾರ್ಯದರ್ಶಿ**
ಸಿ.ಎಂ. ನಾಗರಾಜ

**ಖಜಾಂಚಿ**
ಕೆ.ಆರ್. ರಾಮಮೂರ್ತಿ

**ಜಂಟಿ ಕಾರ್ಯದರ್ಶಿಗಳು**
ಎನ್.ಆರ್. ಶ್ರೀನಾಥ್
ರೇಣುಕಾ ಎಸ್. ನಿಡಗುಂದಿ

**ಸಮಿತಿ ಸದಸ್ಯರು**
ಆಂಜನಿ ಗೌಡ
ಎಸ್.ಸಿ. ಹೇಮಲತ
ಟಿ.ಎಂ. ಮೈಲಾರಪ್ಪ
ಪಿ.ಸಿ. ಶ್ರೀನಿವಾಸ
ಸಿ.ಆರ್. ಶ್ರೀನಿವಾಸ
ಜಿ.ಬಿ. ಹೆಗಡೆ
ಆನಂದ ಈಶ್ವರಪ್ಪ ಮುರಗೋಡ
ಬಿ. ನಾರಾಯಣ
ಆರ್. ರೇಣುಕುಮಾರ್
ಎಸ್. ಕೃಷ್ಣ ಭಟ್
ಶಶಿಕಾಂತ್ ಪಾಟೀಲ್

ಮುಖಪುಟ ಚಿತ್ರ : ಬಸ್ತಿ ದಿನೇಶ್ ಶೆಣೈ

**DELHI KARNATAKA SANGHA**
Rao Tularam Marg, Sector-12, R K Puram,
New Delhi-110022.
Phone: 011-26109615. 011-65643615
email:dksangha@gmail.com
website : www.delhikarnatakasangha.com

# ಮನದ ಮಾತು

ರೋಗ ಬಂದರೆ ಶ್ರೀಮಂತರಿಗೆ ಬರಲಿ, ಬಡವರಿಗೆ ಮಾತ್ರ ಬೇಡ – ಇದು ಎಲ್ಲರ ಪ್ರಾರ್ಥನೆ. ಏಕೆಂದರೆ ರೋಗ ನಿವಾರಣೆಗೆ ತಗಲುವ ಅಧಿಕ ವೆಚ್ಚವನ್ನು ಶ್ರೀಮಂತರು ನಿಭಾಯಿಸಬಲ್ಲರೇ ಹೊರತು ಬಡವರಿಗಂತೂ ಖಂಡಿತ ಸಾಧ್ಯವಿಲ್ಲ. ಉದಾಹರಣೆಗೆ ಕ್ಯಾನ್ಸರ್ ಬಂದಿತೆಂದರೆ ಪ್ರತಿ ತಿಂಗಳು ಒಂದು ಲಕ್ಷದಿಂದ ಹಿಡಿದು ಐದು ಲಕ್ಷದವರೆಗೆ ಬರೀ ಔಷಧಕ್ಕಾಗಿಯೇ ರೋಗಿ ತೆರಬೇಕು – ಅದೂ ಕ್ಯಾನ್ಸರ್ ಯಾವ ಥರದ್ದು ಎಂಬುದನ್ನು ಆಧರಿಸಿ. ಇದಕ್ಕೆ ಕಾರಣ ಬಹುರಾಷ್ಟ್ರೀಯ ಔಷಧ ಕಂಪೆನಿಗಳು ಈ ಅಪರೂಪದ ಔಷಧಗಳ ಪೇಟೆಂಟ್ ಹೊಂದಿದ್ದುದು. ವಾಸ್ತವದ ಸಂಗತಿಯೆಂದರೆ 4 ಲಕ್ಷದ 36 ಸಾವಿರ ರೂನ ಔಷಧಿಯ ನಿಜ ಬೆಲೆ ಕೇವಲ 47,160/–ರೂಪಾಯಿ ಮಾತ್ರ! ಔಷಧಕ್ಕಾಗಿ ಬಳಸುವ ಮೂಲ ದ್ರವ್ಯ (Generic) ಅತ್ಯಂತ ಅಗ್ಗ. ಆದರೆ ಆ ಮೂಲ ದ್ರವ್ಯವನ್ನು ಅಂದ ಚೆಂದದ ಗುಳಿಗೆಯಾಗಿಸಿ ಅದಕ್ಕೆ ಆಕರ್ಷಕ ಹೊದಿಕೆ ಹೊದಿಸಿ ಕಂಡು ಕೇಳರಿಯದ ನಾಮಕರಣ ಮಾಡಿ, ಬಹುರಾಷ್ಟ್ರೀಯ ಕಂಪೆನಿಗಳು ದುರಾಶೆಯ ವೈದ್ಯರ ಮೂಲಕ ರೋಗಿಗಳ ಮನೆ ಮಠ ಮಾರಿಸುವ ಹುನ್ನಾರ ಮಾಡುತ್ತಿದ್ದರು. ನಮ್ಮ ದೇಶದ ಔಷಧ ಕಂಪೆನಿಗಳೂ 'ಅಯ್ಯೋ ಈ ಔಷಧ ಕೆಲವೇ ಸಾವಿರಗಳಲ್ಲಿ ಲಭ್ಯ' ಎಂದು ಬೊಬ್ಬೆ ಹಾಕಿದರೂ ಆ ಕೂಗಿಗೆ ದಾತಾರರಿರಲಿಲ್ಲ. ಏಕೆಂದರೆ ಅವರ ತಲೆಗಳ ಮೇಲೆ ಬಹುರಾಷ್ಟ್ರೀಯ ಕಂಪೆನಿಗಳ ಪೇಟೆಂಟ್ ಕತ್ತಿ ಝಳಪಿಸುತ್ತಿತ್ತು. ಈ ಎರಡೂ ಕಡೆ ಹರಿತವಾದ ಕತ್ತಿಯನ್ನು ನಿರ್ವೀರ್ಯಗೊಳಿಸಿದ್ದು ಐತಿಹಾಸಿಕ ಸುಪ್ರೀಂ ಕೋರ್ಟ್‌ನ ತೀರ್ಪು. ಕ್ಯಾನ್ಸರ್‌ನ ಅಪರೂಪದ ಔಷಧ ತನ್ನ ಆಸ್ತಿ ಎಂದು ಕೋಟ್ಯಾಂತರ ಹಣ ಗಳಿಸುತ್ತಿದ್ದ ನೊವಾರ್ಟಿಸ್ ಎಜಿ ಎಂಬ ಬಹುರಾಷ್ಟ್ರೀಯ ಔಷಧ ಕಂಪೆನಿಗೆ ಸುಪ್ರೀಂ ಕೋರ್ಟ್ ಕೆಂಗಣ್ಣು ಬೀರಿ – ರೋಗಕ್ಕೆ ರಾಮಬಾಣವಾಗಬಲ್ಲ ಮೂಲದ್ರವ್ಯವನ್ನು ಬಳಸಿ ಭಾರತದ ಔಷಧ ಕಂಪೆನಿಗಳು ಗುಳಿಗೆಗಳನ್ನು ತಯಾರು ಮಾಡಲು ಮಾರ್ಗ ಕಲ್ಪಿಸಿದೆ. ಹೀಗಾಗಿ 1,20,000/– ರೂಪಾಯಿಗೆ ಸಿಗುತ್ತಿದ್ದ ಕ್ಯಾನ್ಸರ್ ಔಷಧ ಈಗ ಕೇವಲ 8000 ರೂಗಳಿಗೆ ಲಭ್ಯವಾಗಬಲ್ಲುದು. ಕಳೆದ 7 ವರ್ಷಗಳಿಂದ ಈ ಔಷಧದ ಸ್ವಾಮ್ಯಕ್ಕೆ ಕಾನೂನಿನ ಯುದ್ಧ ಮಾಡಿದ್ದ ನೊವಾರ್ಟಿಸ್ ಈಗ ಪೆಚ್ಚುಮೋರೆ ಹಾಕಿಕೊಂಡು ಬೆಲೆ ಇಳಿಸಬೇಕು, ಇಲ್ಲವೇ ಭಾರತದಿಂದ ಕಾಲ್ತೆಗೆಯಬೇಕು ಎನ್ನುವ ದ್ವಂದ್ವಕ್ಕೆ ಸಿಲುಕಿದೆ. ಈ ಕಾನೂನು ಸಮರದಲ್ಲಿ ಛಲದಿಂದ ಹೋರಾಡಿದ ಕೀರ್ತಿ ಕ್ಯಾನ್ಸರ್ ಪೀಡಿತರ ನೆರವಿನ ಸಂಸ್ಥೆಯ ವಕೀಲ ಶ್ರೀ ಆನಂದ್ ಗ್ರೋವರ್ ಅವರಿಗೆ ಸಲ್ಲಬೇಕು. ಅಲ್ಲದೆ ಈ ಹೋರಾಟಕ್ಕೆ ನೈತಿಕ ಬೆಂಬಲ ನೀಡಿ, ಇಡೀ ಸಂಚಿಕೆಯೊಂದನ್ನು ಇದಕ್ಕಾಗಿಯೇ ಮೀಸಲಿರಿಸಿದ 'ಸತ್ಯಮೇವ ಜಯತೆ' ಕಾರ್ಯಕ್ರಮದ ರೂವಾರಿ, ಪ್ರಸಿದ್ಧ ನಟ ಅಮೀರ್ ಖಾನ್ ಅಭಿನಂದನಾರ್ಹರು. ಸುಪ್ರೀಂ ಕೋರ್ಟಿನ ಈ ತೀರ್ಪು ನಮ್ಮ ದೇಶದಲ್ಲಿ ಹಾಲಿ ಇರುವ ಮೂರು ಲಕ್ಷ ಕ್ಯಾನ್ಸರ್ ಪೀಡಿತರ ಮನಸ್ಸಿಗೆ ನಿಜಕ್ಕೂ ನೆಮ್ಮದಿಯ ನಿಟ್ಟುಸಿರು ತಂದಿದೆ. ಅಷ್ಟೇ ಅಲ್ಲ, ಈ ಭಯಾನಕ ರೋಗಕ್ಕೆ ಪ್ರತಿವರ್ಷ 20,000 ಹೊಸ ರೋಗಿಗಳೂ ಸೇರ್ಪಡೆಯಾಗುತ್ತಿದ್ದಾರೆ. ರೋಗ ಬಂದರೆ ಅದು ಶ್ರೀಮಂತ, ಬಡವ ಎಂಬ ಭೇದ ಭಾವ ಮಾಡುವುದಿಲ್ಲ. ಬರಸಿಡಿಲಿನಂತೆ ಅಪ್ಪಳಿಸುತ್ತದೆ, ಸರ್ವಸ್ವವನ್ನೂ ಕಬಳಿಸುತ್ತದೆ. ಇಂಥಲ್ಲಿ ಸುಪ್ರೀಂ ಕೋರ್ಟ್‌ನ ಈ ತೀರ್ಪು ಒಂದು ಆಶಾ ಕಿರಣ.

ಮೇ 5ರಂದು ನಮ್ಮ ಕರ್ನಾಟಕದಲ್ಲಿ ಚುನಾವಣೆ. ಚುನಾವಣೆಯ ದಿನಾಂಕದ ಘೋಷಣೆಯಾಗುತ್ತಿದ್ದಂತೆ ರಾಜಕೀಯ ಧ್ರುವೀಕರಣಗಳು, ಆಯಾರಾಂ ಗಯಾರಾಂಗಳು ಬಿರುಸಿನಿಂದ ಸಾಗಿವೆ. ಎಲ್ಲಿ ನೋಡಿದರೂ ಲೆಕ್ಕಾಚಾರಗಳು, ಗೆಲವು ಸೋಲುಗಳ ಊಹೆಗಳು, ಜಾತಿ ಆಧಾರಿತ ಏರಿಳಿತಗಳ ಸಮೀಕ್ಷೆಗಳು....ಇವೆಲ್ಲವನ್ನೂ ಜನತಾ ಜನಾರ್ಧನ ಅತ್ಯಂತ ಜಾಗರೂಕತೆಯಿಂದ ಗಮನಿಸುತ್ತಿದ್ದಾನೆ. ರಾಜ್ಯದ ಹಿತಕ್ಕೆ ಧಕ್ಕೆ ತರದಂತೆ ಅರ್ಹರನ್ನು ಚುನಾಯಿಸುವ ಸದ್ವಿವೇಕವನ್ನು ಮತದಾರ ಪ್ರಭು ತೋರುತ್ತಾನೆ ಎಂಬ ನಿರೀಕ್ಷೆ ನಮ್ಮದು. ಚುನಾವಣೆ ಶಾಂತಿಯುತವಾಗಿ ಜರುಗಲಿ, ಸುಭದ್ರ ಸರಕಾರ ರಚನೆಯಾಗಲಿ, ಹೊಸ ಸರಕಾರ ಹೊಸ ಆಶೋತ್ತರಗಳನ್ನು ಕ್ರಿಯೆಗಿಳಿಸಲಿ, ನಮ್ಮ ರಾಜ್ಯ ದೇಶದಲ್ಲಿಯೇ ಮಾದರಿ ರಾಜ್ಯವಾಗಲಿ – ಎಂಬುದು ನಮ್ಮ ಆಶಯ.

ಕೆಲವೇ ಕೆಲವು ಸದಸ್ಯರಿಂದ ಅತ್ಯಂತ ಕಿರಿದಾಗಿ ಶುರುವಾಗಿ, ಕ್ರಮೇಣ ದೇಶದ ಅತ್ಯಂತ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಒಂದು ಎಂಬ ಹೆಗ್ಗಳಿಕೆ ಪಡೆದಿರುವುದು ದೆಹಲಿ ಕರ್ನಾಟಕ ಸಂಘ. 1948ರಲ್ಲಿ ಪ್ರಾರಂಭಗೊಂಡು, 1956ರಲ್ಲಿ ನೋಂದಣಿ ಆದ ಸಂಘದ ಸಂವಿಧಾನ ಕಾಲಕ್ಕೆ ತಕ್ಕಂತೆ, ವೈಶಾಲ್ಯಕ್ಕೆ ಅನುಗುಣವಾಗಿ ತಿದ್ದುಪಡಿಗಳನ್ನು ಕಂಡಿದೆ. ಆದರೆ 1990ರಿಂದ ಈ ತನಕ ಬೃಹದಾಕಾರವಾಗಿ ಬೆಳೆದಿದ್ದರೂ, ಗುಣಾತ್ಮಕ ಅನಿವಾರ್ಯ ತಿದ್ದುಪಡಿಗಳಾಗಿರಲಿಲ್ಲ. ಈ ಬಗೆಗಿನ ಅಗತ್ಯತೆಯನ್ನು ಮನಗಂಡು ಪ್ರಸ್ತುತ ಆಡಳಿತ ಮಂಡಳಿ ಸಂವಿಧಾನ ತಿದ್ದುಪಡಿ ಸಮಿತಿಯನ್ನು ರಚಿಸಿತು. ಚರ್ಚೆ, ತರ್ಕ, ಸಮಾಲೋಚನೆಗಳ ನಂತರ ಹಿರಿಯ ವಕೀಲರ ಹಾಗೂ ಲೆಕ್ಕ ಪರಿಶೋಧಕರ ಸಲಹೆಗಳನ್ನು ಗರ್ಭೀಕರಿಸಿ ಕರಡನ್ನು ಈ ಸಮಿತಿ ಸಿದ್ಧಪಡಿಸಿತು. ಕಾರ್ಯಕಾರಿ ಸಮಿತಿಯಲ್ಲಿ ಸುದೀರ್ಘ ಚಿಂತನ–ಮಂಥನಗಳ ನಂತರ ಮಾರ್ಚ್ 31ರಂದು ಸಂವಿಧಾನ ತಿದ್ದುಪಡಿಯ ವಿಶೇಷ ಮಹಾಸಭೆಯಲ್ಲಿ ಕರಡನ್ನು ಚರ್ಚೆಗೆ ಇಡಲಾಯಿತು. ಸುದೀರ್ಘ ಚರ್ಚೆಯ ಜೊತೆಗೆ ಮಹಾಸಭೆಯ ಆದೇಶ, ಸಲಹೆ, ಸೂಚನೆಗಳೊಂದಿಗೆ ಮತ್ತಷ್ಟು ಸ್ಪಷ್ಟನೆ ಪಡೆಯಿತು; ಅಂಗೀಕಾರವೂ ಆಯಿತು. ಮೇ ತಿಂಗಳ ಮೊದಲ ವಾರದಲ್ಲಿ ಮತ್ತೊಂದು ಮಹಾಸಭೆಯಲ್ಲಿ ಅಧಿಕೃತ ಅನುಮೋದನೆ ಮಾತ್ರ ಈಗ ಬಾಕಿ. ಈ ಮಹಾನ್ ಕಾರ್ಯವನ್ನು ಈಡೇರಿಸಿದ ಮಹಾಸಭೆಯ ಸರ್ವ ಸದಸ್ಯರಿಗೆ ಕಾರ್ಯಕಾರಿ ಸಮಿತಿಯ ಪರವಾಗಿ ಹೃತ್ಪೂರ್ವಕ ಕೃತಜ್ಞತೆಗಳು.

*ಸರ್ವರಿಗೂ ವಿಜಯ ನಾಮ ಸಂವತ್ಸರ ಯುಗಾದಿಯ ಹಾರ್ದಿಕ ಶುಭಾಶಯಗಳು. ರಾಮ ನವಮಿ, ಅಂಬೇಡ್ಕರ್ ಜಯಂತಿ, ದೇವರ ದಾಸಿಮಯ್ಯ ಜಯಂತಿ ಹಾಗೂ ಮಹಾವೀರ ಜಯಂತಿಯ ಶುಭಹಾರೈಕೆಗಳು.*

❑ ಉಷಾ ಭರತಾದ್ರಿ

# ಸಂಘದ ಸಂವಿಧಾನ ತಿದ್ದುಪಡಿ ಕುರಿತಾಗಿ...

ದೆಹಲಿ ಕರ್ನಾಟಕ ಸಂಘದ ಸಂವಿಧಾನ ತಿದ್ದುಪಡಿಯ ಮೊದಲ ಹಂತದ ವಿಸ್ತಾರವಾದ ಚರ್ಚೆ ಹಾಗೂ ಒಪ್ಪಿಗೆ ಮಾರ್ಚ್ 31 ರಂದು ನಡೆದ ವಿಶೇಷ ಸರ್ವಸದಸ್ಯರ ಸಭೆಯಲ್ಲಿ ಪೂರ್ಣಗೊಂಡಿದೆ. ಇದು ತಮ್ಮೆಲ್ಲರ ಸಹಕಾರದ ಫಲ. ಇದಕ್ಕಾಗಿ ನಾನು ಆಭಾರಿಯಾಗಿದ್ದೇನೆ. ಅಂದಿನ ಸಭೆಯಲ್ಲಿ ಸದಸ್ಯರು ನೀಡಿದ ಎಲ್ಲ ಸಲಹೆಗಳನ್ನು ಸರಿಯಾಗಿ ನಮೂದಿಸುವ ಕೆಲಸ ಈಗ ನಡೆಯುತ್ತಿದೆ. ಒಮ್ಮೆ ಅದು ಮುಗಿದ ಮೇಲೆ ಅದರ ಪ್ರತಿಯನ್ನು ತಮಗೆಲ್ಲರಿಗೂ ಕಳುಹಿಸಿಕೊಡಲಾಗುವುದು. ಅದರಲ್ಲಿ ನಾವು ಚರ್ಚಿಸಿದ ವಿಚಾರಗಳು ಸರಿಯಾಗಿ ನಿರ್ಣಯದ ರೂಪದಲ್ಲಿ ಸಾಕಾರಗೊಂಡಿವೆಯೆ ಎಂಬುದನ್ನು ತಾವು ಹೇಳಬೇಕು. ಜೊತೆಗೆ ಒಟ್ಟಾರೆ ನಿಯಮಾವಳಿಗಳು ಯಾವ ರೀತಿಯಲ್ಲೂ ಸಂಘದ ಒಟ್ಟಾರೆ ಹಿತಾಸಕ್ತಿಗೆ ಧಕ್ಕೆ ತರುವಂತಿರಬಾರದು. ಮೇ ತಿಂಗಳ ಮೊದಲ ವಾರದಲ್ಲಿ ಇನ್ನೊಂದು ವಿಶೇಷ ಸರ್ವಸದಸ್ಯರ ಸಭೆಯನ್ನು ಕರೆದು ಈ ಎಲ್ಲ ನಿಯಮಾವಳಿಗಳಿಗೆ ಆದ ಬದಲಾವಣೆಗಳಿಗೆ ಕೊನೆಯ ಒಪ್ಪಿಗೆಯನ್ನು ಸರ್ವಸದಸ್ಯರಿಂದ ಪಡೆಯುವುದು. ಇದು ಕಾನೂನುರೀತ್ಯಾ ಆಗಬೇಕಾದ ಕೆಲಸ. ಇದೆಲ್ಲ ಆದ ಮೇಲೆಯೇ ನಾವು ಸಂಘದ ಬದಲಾದ ನಿಯಮಾವಳಿಗಳನ್ನು ಊರ್ಜಿತಗೊಳಿಸಬಹುದು.

ಕಾಲಕಾಲಕ್ಕೂ ಸಂಘದ ನಿಯಮಾವಳಿಗಳಿಗೆ ಬದಲಾವಣೆಯ ಉಡಿಗೆ ತೊಡಿಸಲಾಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅರವತ್ತು ವರುಷಗಳ ಇತಿಹಾಸವಿರುವ ನಮ್ಮ ಸಂಘಕ್ಕೆ ಈ ನಿಯಮಾವಳಿಗಳು ಭದ್ರತೆಯ ಬುನಾದಿ. ಸಂಘ ಪ್ರಾರಂಭವಾದಾಗ ಸದಸ್ಯರುಗಳ ಸಂಖ್ಯೆ ಕಡಿಮೆ. ಹಾಗೆಯೆ ಹಣಕಾಸಿನ ಬಗ್ಗೆಯೂ ಅಷ್ಟೊಂದು ಸಮಸ್ಯೆಗಳಿರಲಿಲ್ಲ. ಸಂಘ ಕಾಲಕಾಲಕ್ಕೂ ಬೆಳೆದು ಒಂದು ಹಂತವನ್ನು ಮುಟ್ಟಿದ ಹಾಗೆ ಅದರ ನಿಯಮಾವಳಿಗಳಲ್ಲೂ ಬಿಗಿಯನ್ನು ತರುವ ಸಾಧ್ಯತೆಗಳನ್ನು ನಮ್ಮ ಹಿರಿಯರು ಕಂಡಿದ್ದರು. ಈ ಕೆಲಸ ತುಂಬಾ ಉಪಯುಕ್ತವಾಗಿ 1990ರಲ್ಲಿ ನಡೆಯಿತು. ಎರಡು ದಶಕಗಳಿಗೂ ಮೀರಿ ಸಂಘ ಈ ನಿಯಮಾವಳಿಗಳ ನೆರಳಿನಲ್ಲಿ ನಡೆದುಕೊಂಡು ಬಂದಿದೆ. ಕಳೆದ ಹತ್ತಾರು ವರ್ಷಗಳಲ್ಲಿ ಸಂಘದ ಒಟ್ಟಾರೆ ರೂಪುರೇಷೆಗಳಲ್ಲಿ ಅಗಾಧವಾದ ಬದಲಾವಣೆಗಳಾಗಿವೆ. ಬೆರಳೆಣಿಕೆಯಲ್ಲಿದ್ದ ಸಂಘದ ಸದಸ್ಯರ ಸಂಖ್ಯೆ ಈಗ ನಾಲ್ಕು ಸಾವಿರ ದಾಟಿ ಐದು ಸಾವಿರದತ್ತ ದಾಪುಗಾಲಿಡುತ್ತಿದೆ. ಅದರಲ್ಲಿ ದೆಹಲಿಯ ಹಾಗೂ ಆಸುಪಾಸಿನ (ಅಂದರೆ ಗುರುಗಾಂವ್, ನೊಯಿಡಾ, ಫರಿದಾಬಾದ್) ಸದಸ್ಯರ ಪ್ರೀತಿಯ ಬಂಧನದಿಂದ ಸಂಘ ಜಾರಿಹೋಗುತ್ತಿರುವ ಪರಿಸ್ಥಿತಿ ಉದ್ಭವವಾಗುತ್ತಿದೆ. ಇದು ಸಂಘದ ಮೂಲಭೂತ ಉದ್ದೇಶಗಳಿಗೆ ಧಕ್ಕೆ ತರುವಂತಹದು. ಇದನ್ನು ನಿಲ್ಲಿಸುವ ಕೆಲಸವನ್ನು ನಾವು ಬದಲಾಯಿಸಿರುವ ನಿಯಮಾವಳಿಗಳು ಮಾಡುತ್ತಿವೆ. ಇದೆಲ್ಲ ಹೇಗೆ ಸಾಧ್ಯವಾಗಬಹುದು ಎಂಬುದನ್ನು ಮಾರ್ಚ್ 31ರ ಸರ್ವಸದಸ್ಯರ ಸಭೆ ವಿವರವಾಗಿ ಚರ್ಚಿಸಿದೆ. ಈ ಚರ್ಚೆಯ ಮುಖ್ಯ ಅಂಶಗಳನ್ನು ತಮ್ಮ ಮುಂದೆ ಇಡುವ ಪ್ರಯತ್ನ ಮಾಡುತ್ತಿದ್ದೇನೆ.

ಕನ್ನಡ ಸಂಘಕ್ಕೆ ಸದಸ್ಯರಾಗ ಬಯಸುವವರ ಶುಲ್ಕವನ್ನು ಏರಿಸುವುದರ ಬಗ್ಗೆ ಸಾಕಷ್ಟು ಚರ್ಚೆ ನಡೆಯಿತು. ಈ ಶುಲ್ಕವನ್ನು ತೀರಾ ಹೆಚ್ಚಿಸಬಾರದೆಂಬುದು ಸರ್ವಸದಸ್ಯರ ಅಭಿಮತವಾಗಿತ್ತು. ತಿದ್ದುಪಡಿ ಸಮಿತಿ ಐದು ಸಾವಿರ ರೂಪಾಯಿಗಳ ಮಿತಿ ಹಾಕಿತ್ತು. ಅದನ್ನು ಸರ್ವಸದಸ್ಯರು ಒಪ್ಪದೆ, ಶುಲ್ಕವನ್ನು ಕಡಿಮೆ ಮಾಡಲು ತಾಕೀತು ಮಾಡಿತು. ಹೀಗಾಗಿ ಶುಲ್ಕವನ್ನು ಸಾಕಷ್ಟು ಕಡಿಮೆ ಮಾಡಲಾಯಿತು. ಆದರೆ ಆಜೀವ ಸದಸ್ಯರಾಗಬಯಸುವವರು ಮೊದಲು ಕೆಲ ವರ್ಷಗಳ ಕಾಲ ವಾರ್ಷಿಕ ಸದಸ್ಯರಾಗಿ ನೊಂದಾಯಿಸಿಕೊಂಡ ನಂತರವೇ ಅವರಿಗೆ ಆಜೀವ ಸದಸ್ಯತ್ವವನ್ನು ನೀಡಬಹುದು ಎಂಬುದರ ಬಗ್ಗೆ ಒಮ್ಮತ ಮೂಡಿತು. ಸದಸ್ಯರಾಗುವವರಿಗೆ ಸಂಘದ ಕಾರ್ಯಚಟುವಟಿಕೆಗಳ ಹಾಗೂ ಆಶಯಗಳ ಅರಿವಿರಬೇಕೆಂಬುದೇ ಇದರ ಉದ್ದೇಶವಾಗಿತ್ತು. ಹತ್ತು ವರ್ಷಗಳ ನಂತರ ಅಜೀವ ಸದಸ್ಯರಾಗಿರುವವರು ತಮ್ಮ ಸದಸ್ಯತ್ವವನ್ನು ಪರಿಷ್ಕರಿಸಿಗೊಳ್ಳುವುದರ ಬಗ್ಗೆ ಸಾಕಷ್ಟು ಚರ್ಚೆ ನಡೆಯಿತು. ಆಜೀವ ಸದಸ್ಯರೆಂದರೆ ಆಜೀವ ಸದಸ್ಯರು. ಈ ಹತ್ತು ವರ್ಷದ ಗಡಿ ಯಾಕೇ? ಈ ಬಗೆಯ ಗಡಿ ಹಾಕಿದರೆ ಅದನ್ನು ಆಜೀವ ಸದಸ್ಯತ್ವವೆಂದು ಹೇಗೆ ಕರೆಯಬಹುದು? ಆದರೆ ಈ ಬಗೆಯ ಗಡಿ ಅಗತ್ಯವೆಂದು ಕೊನೆಯಲ್ಲಿ ಒಮ್ಮತ ಮೂಡಿತು. ಈ ಗಡಿಗೆ ಬೇಲಿಗಳಿಲ್ಲ. ಹತ್ತು ವರ್ಷಗಳ ನಂತರ (ಸಂಘದಿಂದ ನೆನಪಿನ ಓಲೆ ಬಂದ ನಂತರ) ಸಂಘಕ್ಕೆ ಎರಡು ಸಾಲು ಬರೆದು ನಾನು ಸಂಘದ ಆಜೀವ ಸದಸ್ಯನಪ್ಪ ಎಂದರಾಯಿತು. ಜೊತೆಗೆ ಐವತ್ತು ರೂಪಾಯಿಗಳನ್ನು ಈ ಎರಡು ಸಾಲುಗಳೊಂದಿಗೆ ಕಳಿಸಿದರಾಯಿತು. ಸಂಘವೇ ಈ ಹತ್ತು ವರ್ಷ ಮೀರಿದ ಎಲ್ಲ ಸದಸ್ಯರಿಗೆ ಪತ್ರ ಬರೆದು ಇದರ ನೆನಪನ್ನು ಮಾಡಿಸುವುದೆಂದು ನಿಶ್ಚಯವಾಯಿತು. ಜೊತೆಗೆ ಈ ಹತ್ತು ವರ್ಷದ ಅವಧಿಯು ತಿದ್ದುಪಡಿ ಜಾರಿಗೆ ಬಂದ ಮೇಲೆ ಪ್ರಾರಂಭವಾಗುವುದೆಂದು ಕೂಡಾ ನಿಶ್ಚಯವಾಯಿತು. ಇದರಿಂದಾಗಿ ಸಂಘದ ಸದಸ್ಯರ ಪಟ್ಟಿ ಕಾಲಕಾಲಕ್ಕೂ ಪರಿಷ್ಕಾರವಾದಂತಾಯಿತು.

ದೆಹಲಿ ಕರ್ನಾಟಕ ಸಂಘದ 1956ರ ಮೂಲಭೂತ ಒಡಂಬಡಿಕೆಯ ಪ್ರಕಾರ ಅದರ ನಿಯಂತ್ರಣ ಹಾಗೂ ಆಗುಹೋಗುಗಳಲ್ಲಿ ದೆಹಲಿಯಲ್ಲಿರುವ ಸದಸ್ಯರಿಗೆ ಆದ್ಯತೆ. ಈಗ ದೆಹಲಿಯ ನಕಾಶೆ ವಿಸ್ತರಿಸಿ ಅದು ಈಗ ದೆಹಲಿಯ ಆಸುಪಾಸಿನ ಜಾಗೆಗಳನ್ನೂ ಒಳಗೊಳ್ಳುತ್ತದೆ. ಈ ಮೂಲಭೂತ ನಿಯಮಕ್ಕೆ ಅನುಸಾರವಾಗಿ ದೆಹಲಿಯ ರಾಷ್ಟ್ರ ರಾಜಧಾನಿಯ ವ್ಯಾಪ್ತಿಯಲ್ಲಿರುವ ಹಾಗೂ ವಾಸಿಸುತ್ತಿರುವ ಸದಸ್ಯರಿಗೆ ಮಾತ್ರ ಮತದಾನದ ಹಕ್ಕು. ದೆಹಲಿಯ ಪರಿಧಿಯಿಂದ ಹೊರನಡೆದು ಊರಿನಲ್ಲೊ ಅಥವ ಇನ್ನೆಲ್ಲೊ ಗಟ್ಟಿಯಾಗಿ ವಾಸಿಸುತ್ತಿರುವ ಸದಸ್ಯರಿಗೆ ಈ ಹಕ್ಕು ಇರುವುದಿಲ್ಲ. ಈ ಎಲ್ಲ ಸದಸ್ಯರು ದೆಹಲಿಗೆ ಮತ್ತೆ ಬಂದರೆ ಅವರಿಗೆಲ್ಲ ಮತದಾನದ ಹಕ್ಕು ತಾನಾಗಿಯೇ ದೊರೆಯುತ್ತದೆ. ಅಂದರೆ ದೆಹಲಿಯ ರಾಷ್ಟ್ರ ರಾಜಧಾನಿಯ ಪರಿಸರದಲ್ಲಿ ವಾಸವಾಗಿರುವುದರ ಕುರಿತಾಗಿ ಗುರುತಿನ ಚೀಟಿ ಅಥವಾ ಮಾಹಿತಿ ಸದಸ್ಯರ ಬಳಿ ಇರಬೇಕು. ಇದಕ್ಕೆ ಸರ್ವಸದಸ್ಯರ ಸಭೆ ಅಂಗೀಕಾರ ನೀಡಿತು.

ಸಂಘದ ಹಣಕಾಸಿನ ವಿಚಾರಗಳಲ್ಲಿ ಬಿಗಿ ತರಲು ಕೆಲವೊಂದು ಬದಲಾವಣೆಗಳನ್ನು ಮಾಡಲಾಗಿದೆ. ಸಂಘ ತನ್ನ ಮುಂಬರುವ ವರ್ಷಗಳಲ್ಲಿ ಬರುವ ಅದಾಯದ ನಿರ್ದಿಷ್ಟವಾದ ಭಾಗವನ್ನು ಮುಂದೆ ಕೈಗೆತ್ತಿಕೊಳ್ಳಬೇಕಾದ ಯೋಜನೆಗಳಿಗೆ ಕಾದಿರಿಸಬೇಕೆಂದು ನಿಯಮಾವಳಿ ಈಗ ತಾಕೀತು ಮಾಡುತ್ತದೆ. ಉಳಿದ ಅದಾಯದ 50ರಷ್ಟು ಭಾಗವನ್ನು ಸ್ಥಳಿಯ ಕಾರ್ಯಕ್ರಮಗಳಿಗೆ ಉಪಯೋಗಿಸಬೇಕೆಂದು ನಿಯಮಾವಳಿ ಹೇಳುತ್ತದೆ. ಇಲ್ಲಿಯ ತನಕ ಈ ವಿಚಾರಗಳು ಸರ್ವಸದಸ್ಯರ ಸಭೆಯ ನಿರ್ಣಯಗಳಾಗಿದ್ದವು. ಈಗ ಅವು ನಿಯಮಾವಳಿಗಳ ರೂಪದಲ್ಲಿ ಸರ್ವಸದಸ್ಯರ ಸಭೆಯಲ್ಲಿ ಅಂಗೀಕಾರವಾಗಿದೆ. ಸಂಘದ ಹಣಕಾಸಿನ ಖರ್ಚುವೆಚ್ಚಗಳನ್ನು ಸಹ ಒಂದು ನಿರ್ದಿಷ್ಟ ರೀತಿಯಲ್ಲಿ ಮಾಡಲು ಹಲವಾರು ನಿಯಮಗಳನ್ನು ರೂಪಿಸಲಾಗಿದೆ. ಇವೆಲ್ಲವನ್ನು ಸರ್ವಸದಸ್ಯರ ಸಭೆ ಒಪ್ಪಿಕೊಂಡಿದೆ. ಕಾಲಕಾಲಕ್ಕೂ ಲೆಕ್ಕಪತ್ರಗಳನ್ನು ಪರಿಶೋಧಿಸುವ ಹಾಗೂ ಅವುಗಳನ್ನು ಕಾರ್ಯಕಾರಿ ಸಮಿತಿಯ ಮುಂದೆ ನಿಯಮಿತವಾಗಿ ತರುವ ಬಗ್ಗೆ ನಿಯಮಾವಳಿಗಳು ರೂಪುಗೊಂಡಿವೆ.

ಸಂಘದ ಚುನಾವಣೆ ಹಾಗೂ ನೀತಿಸಂಹಿತೆಗಳ ಕುರಿತಾಗಿಯೂ ಬದಲಾವಣೆ ಹಾಗೂ ಬಿಗಿಯನ್ನು ತರಲಾಗಿದೆ. ಸಂಘದ ಸದಸ್ಯರಾಗಿ, ಅದರಲ್ಲೂ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ನಡೆದುಕೊಳ್ಳಬೇಕಾದ ರೀತಿನೀತಿಗಳನ್ನೂ ರೂಪಿಸಲಾಗಿದೆ. ಸಂಘದ ಚುನಾವಣೆಗಳಲ್ಲಿ ಭಾಗವಹಿಸುವವರಿಗೆ ಸಂಘ ಅಂದರೇನು? ಯಾರೆಲ್ಲ ಹೇಗೆ?? ಎಂಬುದರ ಬಗ್ಗೆ ತಿಳಿದುಕೊಂಡ ಮೇಲೆ ಸ್ಪರ್ಧೆಗೆ ಇಳಿಯಲು ಅನುವು ಮಾಡಿಕೊಡುವಂತೆ ಕೆಲ ನಿಯಮಗಳನ್ನು ರೂಪಿಸಲಾಗಿದೆ.

ಅತ್ಯಂತ ಪ್ರಮುಖವಾದ ಒಂದು ಬದಲಾವಣೆಯೆಂದರೆ, ಈಗಿರುವ ಎಂಟು ಕಾರ್ಯಕಾರಿ ಸಮಿತಿಯ ಸದಸ್ಯರಲ್ಲಿ ಎರಡು ಸದಸ್ಯರ ಸ್ಥಾನಗಳನ್ನು ಮಹಿಳೆಯರಿಗಾಗಿ ಕಾದಿರಿಸಲಾಗಿದೆ. ಈಗಾಗಲೇ ಉಪಾಧ್ಯಕ್ಷ ಹಾಗೂ ಜಂಟಿ ಕಾರ್ಯದರ್ಶಿಗಳ ಒಂದೊಂದು ಸ್ಥಾನಗಳನ್ನು ನಿಯಮಾವಳಿಗಳು ಮಹಿಳೆಯರಿಗೆ ಕಾದಿರಿಸಿದ್ದನ್ನು ತಮ್ಮ ಗಮನಕ್ಕೆ ತರಲು ಬಯಸುತ್ತೇನೆ. ಒಟ್ಟು ನಾಲ್ಕು ಸ್ಥಾನಗಳನ್ನು (ಎರಡು ಪದಾಧಿಕಾರಿಗಳಲ್ಲಿ, ಎರಡು ಸದಸ್ಯರಲ್ಲಿ) ಮಹಿಳೆಯರಿಗಾಗಿ ಕಾದಿರಿಸಲಾಗಿದೆ. ಇದನ್ನು ಸರ್ವಸದಸ್ಯರ ಸಭೆ ಸರ್ವಾನುಮತದಿಂದ ಒಪ್ಪಿದೆ.

ಸಂಘದ ಒಟ್ಟಾರೆ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಕಾವಲು ಸಮಿತಿಯನ್ನು (ಓಮ್ ಬಡ್ಸ್ ಮನ್) ನಿಯಮಾವಳಿಗಳಲ್ಲಿ ಸೇರಿಸಲಾಗಿದೆ. ಮೂವರು ಸದಸ್ಯರುಳ್ಳ ಈ ಸಮಿತಿಯನ್ನು ಮೂರು ವರ್ಷಗಳಿಗೊಮ್ಮೆ ಸರ್ವಸದಸ್ಯರ ಸಭೆಯೇ ಚುನಾಯಿಸುತ್ತದೆ. ಸಂಘದ ಹಿರಿಯ ಸದಸ್ಯರು ಹಾಗೂ ಅದರ ಆಗುಹೋಗುಗಳ ಮಾಹಿತಿ ಹೊಂದಿದ್ದವರನ್ನೇ ಈ ಕಾವಲು ಸಮಿತಿಗೆ ಸರ್ವಸದಸ್ಯರ ಸಭೆ ಆರಿಸಬೇಕು. ಈ ಕಾವಲು ಸಮಿತಿಗೆ ಸಾಕಷ್ಟು ಶಕ್ತಿಯನ್ನು ನೀಡಲಾಗಿದೆ.

ಇವೆಲ್ಲ ಬದಲಾವಣೆಯ ಝಲಕುಗಳು ಸಂಕ್ಷಿಪ್ತವಾಗಿ ತಮ್ಮೆದುರು ಈ ಬದಲಾವಣೆಗಳ ರೂಪುರೇಷೆಗಳನ್ನು ಇಡುವ ಪ್ರಯತ್ನ ಮಾಡಿದ್ದೇನೆ. ಈ ಬದಲಾವಣೆಗಳು ಸಂಘದ ಮುಂಬರುವ ದಿನಗಳ ಆತಂಕಗಳನ್ನು ದೂರಮಾಡಬಹುದೆಂಬ ಆಶಯದೊಂದಿಗೆ ನಾವು ಮುಂದುವರಿಯುತ್ತಿದ್ದೇವೆ. ಸಂಘದ ಕಾರ್ಯಕಾರಿ ಸಮಿತಿ ಹಾಗೂ ಸಂವಿಧಾನ ತಿದ್ದುಪಡಿ ಸಮಿತಿ ಈ ಎಲ್ಲ ಬದಲಾವಣೆಗಳ ಮೇಲೆ ಸವಿಸ್ತಾರವಾಗಿ ಕೆಲಸ ಮಾಡಿದೆ. ಅವರೆಲ್ಲರಿಗೂ ನನ್ನ ಧನ್ಯವಾದಗಳು ಮತ್ತು ಅಭಿನಂದನೆಗಳು.

❑ ಡಾ.ವೆಂಕಟಾಚಲ ಹೆಗಡೆ

## ಮುನ್ನೋಟ

ಪ್ರಸ್ತುತ ಕಾರ್ಯಕಾರಿ ಸಮಿತಿ ತನ್ನ ಎರಡು ವರ್ಷಗಳ ಅವಧಿಯಲ್ಲಿ ಒಳ್ಳೆಯ ಕಾರ್ಯಕ್ರಮಗಳನ್ನು ಹಾಗೂ ಕೆಲಸಗಳನ್ನು ಮಾಡಿದೆ ಎಂಬುದು ನಮ್ಮ ನಂಬಿಕೆ. ದೆಹಲಿ ಕರ್ನಾಟಕ ಸಂಘದ ಸಂವಿಧಾನದ ತಿದ್ದುಪಡಿಯ ಮಹತ್ತರವಾದ ಕಾರ್ಯಕ್ಕೆ ಮಾರ್ಚ್ 31ರಂದು ಸರ್ವ ಸದಸ್ಯರ ವಿಶೇಷ ಸಭೆಯನ್ನು ಕರೆದು ತಿದ್ದುಪಡಿಯ ಪ್ರಸ್ತಾವನೆಯನ್ನು ಇಡಲಾಗಿದೆ. ಮುಂದಿನ ಸರ್ವಸದಸ್ಯರ ಸಭೆಯಲ್ಲಿ ಇದಕ್ಕೆ ಒಪ್ಪಿಗೆ ಪಡೆದು ತಿದ್ದುಪಡಿಗೆ ಅಂತಿಮ ರೂಪ ನೀಡಲಾಗುವುದು. ಸಂವಿಧಾನ ತಿದ್ದುಪಡಿಯಿಂದ ನೂತನ ಸಾಂಸ್ಕೃತಿಕ ಸಮುಚ್ಚಯಕ್ಕೆ ಭದ್ರ ಬುನಾದಿ ದೊರೆತು ಸಂಘ ಇನ್ನಷ್ಟು ಬಲಿಷ್ಠವಾಗಿ ಹೆಮ್ಮರವಾಗಿ ಬೆಳೆದು ಹೊರನಾಡ ಕನ್ನಡ ಸಂಘ–ಸಂಸ್ಥೆಗಳಲ್ಲಿ ಒಳ್ಳೆಯ ಸಂಸ್ಥೆಯೆಂದು ಮುಂದಿನ ದಿನಗಳಲ್ಲಿ ಹೆಸರು ಗಳಿಸಲಿ ಎಂಬ ಆಶಯ ನಮ್ಮದು. ಶಾಲಾ ಮಕ್ಕಳಿಗೆ ಬೇಸಿಗೆಯ ರಜೆಯ ನಂತರ ಮತ್ತು ಸಂವಿಧಾನ ತಿದ್ದುಪಡಿಯ ಎಲ್ಲ ಕೆಲಸಗಳು ಮುಗಿದ ನಂತರ ಕಾರ್ಯಕಾರಿ ಸಮಿತಿಯ ಮುಂದಿನ ಅವಧಿಗೆ ಚುನಾವಣೆಯ ಪ್ರಕ್ರಿಯೆಯನ್ನು ಕೂಡಲೇ ಪ್ರಾರಂಭಿಸಲಾಗುವುದು.

ಅಂಬಿಕೇಶ್ ಕ್ರಿಕೆಟ್ ಪಂದ್ಯಾವಳಿ ಮುಗಿದಿದೆ. ವಿಜಯಗಳಿಸಿದ ಬೆಳ್ಳಿಯಪ್ಪ ತಂಡ ಹಾಗೂ ಸೌತ್ ಕೆನರಾ ಕ್ಲಬ್ ಹಾಗೂ ಈ ಪಂದ್ಯಾವಳಿಯಲ್ಲಿ ಭಾಗವಹಿಸಿದ ಎಲ್ಲ ತಂಡಗಳಿಗೂ ಕೃತಜ್ಞತೆಗಳು.

ಸಮಸ್ತ ಕನ್ನಡಿಗರಿಗೆ ಯುಗಾದಿಯ ಶುಭಾಶಯಗಳು.

❑ **ಸಿ.ಎಂ.ನಾಗರಾಜ**

## ಓದುಗರ ಪತ್ರ

ಅಭಿಮತ ಮಾರ್ಚ್ 2013ರ ಸಂಚಿಕೆಯು ನನ್ನನ್ನು ತುಂಬ ಸಂತೋಷಗೊಳಿಸಿದೆ. ಅದರಲ್ಲಿ 'ನನ್ನ ಹುಡುಗನಿಗೆ' ಬರೆದ ಪತ್ರ ಓದಿದ ಮೇಲೆ, ಒಂದು ಕ್ಷಣ ಅಂತರ್ಮುಖಿಯಾಗಿ ಸ್ತಂಭೀಭೂತನಾದೆ. ಎಳೆಯ ಮುಗ್ಧ ಮನಸ್ಸು ತುಂಬಿಕೊಂಡ ನಿರ್ಮಲ ಪ್ರೀತಿಯ ಸಂವೇದನೆಗೆ ಭಾಷೆ ಬರಬೇಕಾದರೆ ವಿಸ್ಮಯದ ಆಚೆಯ, ಆಚೆಗಿರುವ ನೆಮ್ಮದಿಯ ಭಾಷೆಯೇ ಭಾಷೆಯಾಗಿರುತ್ತದೆ. ಆ ಭಾಷೆಯಲ್ಲಿ ನಿರ್ವ್ಯಾಜ ದೈವೀಕತೆ ಇರುತ್ತದೆ. ಅದನ್ನು ಅನುಭವಿಸುವವರಿಗೆಲ್ಲ 'ನಿರ್ಭಯದಿ ನಗುತಿರು ನೀ ನಿರಂತರ' ಎಂದು ಹೇಳಿ ಆದರ್ಶವನ್ನು ಪಡೆಯುವುದೇ ಅಪರೂಪದ ಸಾಧನೆ. ಇಂತಹ ಸಾಧನೆಗೆ ಮಾರ್ಚ್ 2013ರ ಅಭಿಮತದ ರಕ್ಷಾಪುಟದ ಚಿತ್ರವು ತುಂಬಿಕೊಂಡಿರುವ ನಗೆಯೇ ಸರ್ವ ಭಾಷಾ ಸರಸ್ವತಿಯಾಗಿ ಅರಳಿದೆ. ಅಭಿನಂದನೆಗಳು.

❑ **ವಸಂತ ಕುಷ್ಟಗಿ, ಗುಲಬರ್ಗ**

ಮನಸೆಳೆಯುವ ಆಕರ್ಷಕ ಮುಖಪುಟ....ಅರ್ಥಪೂರ್ಣವಾದ ಸಂದೇಶಗಳು.... ಹೂ ನಗೆಯಲಿ ಜಗವೆಲ್ಲ ನಲಿಯುತಿರಲಿ...ನಿರ್ಭಯದಿ ನಗುತಿರು ನೀ ನಿರಂತರ... ಸಚಿತ್ರವಾದ ವರದಿಗಳು... ನಿಜಕ್ಕೂ ಅಭಿಮತವನ್ನು ಪ್ರತಿ ತಿಂಗಳೂ ಕಾತುರದಿಂದ ಕಾಯುವಂತೆ ಮಾಡಿದೆ. ಹತ್ತಾರು ವರ್ಷಗಳ ಕಾಲ ದೆಹಲಿಯಲ್ಲಿ ಇದ್ದ ನಮಗೆ ಕರ್ನಾಟಕ ಸಂಘ, ಲೇಡಿಸ್ ಅಸೋಸಿಯೇಶನ್ ಅಲ್ಲದೇ ದೆಹಲಿಯ ಎಲ್ಲ ಸಂಘ ಸಂಸ್ಥೆಗಳ ಕಾರ್ಯಕ್ರಮದ ವರದಿಯನ್ನು ನೋಡಿ ಕಣ್ಣಾರೆ ಕಂಡಷ್ಟು ಸಂತಸವಾಗುತ್ತದೆ. ದೆಹಲಿ ಕರ್ನಾಟಕ ಸಂಘದ ಬಗ್ಗೆ ಅಭಿಮಾನದಿಂದ ನಾನು ಪೂನಾದ ಕನ್ನಡಿಗರಿಗೆ ಅಭಿಮತ ತೋರಿಸಲು ಹೆಮ್ಮೆಪಡುತ್ತೇನೆ. ತಮಗೆಲ್ಲಾ ಅಭಿನಂದನೆಗಳು ಹಾಗೂ ಯುಗಾದಿಯ ಶುಭಾಶಯಗಳು.

❑ **ಗೀತಾ ಹವಾಲ್ದಾರ್, ಪೂನಾ**

"ಕೈ ಬೀಸಿ ಕರೆಯುತ್ತಿದೆ ಕರ್ನಾಟಕ – ಸೂರಜ್ ಕುಂಡ್ ಮೇಳದಲ್ಲಿ" ಫೆಬ್ರವರಿ ತಿಂಗಳ ಅಭಿಮತ ನೋಡಿ ಸೂರಜ್ ಕುಂಡ್ ಮೇಳದಲ್ಲಿ ಸ್ವತ: ಓಡಾಡಿದ ಅನುಭವವಾಯಿತು. ಕರ್ನಾಟಕದ ಈ ಮೇಳವನ್ನು ನೋಡಲಾಗಲಿಲ್ಲವೆಂಬ ನನ್ನ ಕೊರಗನ್ನು ದೂರ ಮಾಡಿತು. ಸಚಿತ್ರವಾದ ವರದಿ ತುಂಬಾ ಚೆನ್ನಾಗಿ ಮೂಡಿ ಬಂದಿದೆ. ಅಭಿನಂದನೆಗಳು. ಕೊಡಗಿನಲ್ಲಿ ಕುಳಿತು ದೂರದ ದೆಹಲಿಯ ಬಗ್ಗೆ ಓದಿ ಆನಂದಪಡುವುದೇ ನಿಜಕ್ಕೂ ವಿಭಿನ್ನ ಅನುಭವ. ಧನ್ಯವಾದಗಳು.

❑ **ಲೀಲಾ ಅಪ್ಪಯ್ಯ, ಮಡಿಕೇರಿ**

# ಭರತನಾಟ್ಯ ಯುವ ಪ್ರತಿಭೆ–ತೃಪ್ತಿ ಮಾನಕಾಪುರೆ



ಕನ್ನಡ ಭೂಮಿ ಬೆಳಗಾವಿಯಲ್ಲಿ ಜನಿಸಿ ದೆಹಲಿಯಲ್ಲಿ ಶಿಕ್ಷಣ ಪಡೆಯುತ್ತಿರುವ ಕು. ತೃಪ್ತಿ ಮಾನಕಾಪುರೆ ಕಳೆದ ಹದಿನಾಲ್ಕು ವರ್ಷಗಳಿಂದ ಭರತನಾಟ್ಯವನ್ನು ಕಲಿಯುತ್ತಿದ್ದಾಳೆ. ಗುರು ಶ್ರೀಮತಿ ಪದ್ಮಾ ಸಂಪತ್ ಕುಮಾರನ್ ಅವರಿಂದ ನೃತ್ಯವನ್ನು ಕಲಿಯುತ್ತಿದ್ದು ತನ್ನ ಹದಿನಾಲ್ಕನೇ ವಯಸ್ಸಿನಲ್ಲಿ ಭರತನಾಟ್ಯ ಅರಂಗೇಟ್ರಂ ಮೂಲಕ ಕಲೆಯನ್ನು ಪ್ರದರ್ಶಿಸಿ ಎಲ್ಲರ ಮೆಚ್ಚುಗೆಗೆ ಪಾತ್ರಳಾಗಿದ್ದಾಳೆ.

ರಾಷ್ಟ್ರಪತಿ ಭವನದಲ್ಲಿ ನೃತ್ಯವನ್ನು ಪ್ರದರ್ಶಿಸಿ ಮಾಜಿ ರಾಷ್ಟ್ರಪತಿ ಡಾ. ಅಬ್ದುಲ್ ಕಲಾಂ ಅವರಿಂದ ಪ್ರಶಂಸೆ ಪಡೆದಿರುವಳು. ಈಕೆಯ ಕಲೆಯನ್ನು ಕಂಡು ಆಕೆಗೆ ಒಳ್ಳೆಯ ಭವಿಷ್ಯವಿದೆ ಎಂದು ಬೆನ್ನು ತಟ್ಟಿ ಹಸ್ತಾಕ್ಷರವನ್ನು ನೀಡಿದ್ದಾರೆ.

ಭರತನಾಟ್ಯದಲ್ಲಿ ಸಂಗೀತ ವಿಶಾರದ ಪೂರ್ತಿಗೊಳಿಸಿದ ತೃಪ್ತಿ ರಷ್ಯನ್ ಕಲ್ಚರಲ್ ಸೊಸೈಟಿ, ಬಾಲಭವನ, ತ್ರಿವೇಣಿ ಕಲಾ ಸಂಗಮ, ಕರ್ನಾಟಕ ಸಂಘ ಮತ್ತು ಸಿರಿಫೋರ್ಟ್ ಇತರ ಹಲವಾರು ಕಾರ್ಯಕ್ರಮಗಳಲ್ಲಿ ತನ್ನ ಕಲೆಯನ್ನು ಪ್ರದರ್ಶಿಸಿ ಪ್ರಶಸ್ತಿಗಳನ್ನು ಪಡೆದಿದ್ದಾಳೆ.

ಇತ್ತೀಚೆಗೆ ದೆಹಲಿ ದೂರದರ್ಶನದಲ್ಲಿ ಗುರುಗಳೊಂದಿಗೆ ವಾರ್ತಾಲಾಪದ ಜೊತೆಗೆ ಭರತನಾಟ್ಯವನ್ನು ಮಾಡಿರುವಳು. ಚಿತ್ರಕಲೆಯಲ್ಲೂ ಅತೀವ ಆಸಕ್ತಿ ಹೊಂದಿದ ತೃಪ್ತಿ NIFT ದೆಹಲಿಯಲ್ಲಿ ಪದವಿಯನ್ನು ಮಾಡುತ್ತಿದ್ದಾಳೆ. ಕಲೆಯ ಮಡಿಲಲ್ಲಿ ಮೊಗ್ಗಾಗಿ ಬೆಳೆದ ತೃಪ್ತಿ ಸುಪ್ರಸಿದ್ಧ ಚಿತ್ರಕಾರ ಹಾಗೂ ಛಾಯಾಚಿತ್ರಕಾರರಾದ ಶ್ರೀ ಸಫಲ ಮಾನಕಾಪುರೆ ಅವರ ಜೇಷ್ಠ ಪುತ್ರಿ ಹಾಗೂ ಅನಂತ ಮಾನಕಾಪುರೆ ಅವರ ಮೊಮ್ಮಗಳು.

ಯುವ ಪ್ರತಿಭೆ ತೃಪ್ತಿ ಮಾನಕಾಪುರೆ ಅವರಿಗೆ ಹಾರ್ದಿಕ ಅಭಿನಂದನೆಗಳು. ಅವರ ಕಲಾ ಸೇವೆ ಮುಂದುವರಿಯಲಿ, ಯಶಸ್ಸು ಪಡೆಯಲಿ ಎಂದು ಶುಭ ಹಾರೈಸುತ್ತೇವೆ.

# ‘ವಿಜಯ’ ದುಂಧುಬಿ ಮೊಳಗಲಿರುವ ಯುಗಾದಿ

ವಿಶ್ವಕ್ಕೆ ವಿಜಯ ವಿರಾಜಮಾನವಾಗಿರಲೆಂದು ಹಾರೈಸುತ್ತಾ ಈ ಬಾರಿಯ ವಿಜಯನಾಮ ಸಂವತ್ಸರವನ್ನು ಸ್ವಾಗತಿಸೋಣ.

ಯುಗಾದಿ ಅನಾದಿ ಕಾಲದಿಂದಲೂ ತನ್ನ ವೈಶಿಷ್ಟತೆಯನ್ನು ಮೆರೆಯುತ್ತಾ ಸಂಸ್ಕೃತಿಯನ್ನು ಬೆಳಗಿಸುತ್ತಾ ಮೂಡಿ ಬಂದಿದೆ. ಕಾರಣ ವಸಂತ ಮಾಸದ ಲಕ್ಷಣವೇ ಯುಗಾದಿಯನ್ನು ಮೆರಗುಗೊಳಿಸುತ್ತಾ ಮೂಡಿ ಕೇವಲ ಆದಿಯಾಗಿಯೇ ರಾರಾಜಿಸುತ್ತಿರುತ್ತದೆ. ಯುಗಾದಿಯನ್ನು ಸಂಸ್ಕೃತಿಯ ನೆಲೆಗಟ್ಟಿನಲ್ಲಿ ಸಂಸ್ಕಾರದ ರೂಪುರೇಷೆಗಳನ್ನು ಹೊತ್ತು ಜ್ವಲಂತದಲ್ಲಿಯೂ ವೈಭವೀಕರಿಸುವಂತಹ ಘಟ್ಟವನ್ನು ತಲುಪಿದೆ.

ಯುಗಾದಿ ಆಚರಣೆಯನ್ನು ಪ್ರಕೃತಿ ನಮಗೆ ಸೂಚನೆಯ ಮೂಲಕ ತಿಳಿಸುತ್ತದೆ. ಮಾವಿನ ಮಿಡಿಯ ಕಂಪು, ಆಲೆಮನೆಯ ಅಂಗಳದಲ್ಲಿ ಹೊಸ ಬೆಲ್ಲದ ಘಮಲು, ಸಿಹಿ ಕಹಿಯ ಸಿಂಚನ ಬೆರೆಸಲು ಬೇವಿನ ಎಸಳು ಮರಗಳಲ್ಲಿ ಸೂಚಿಸುತ್ತವೆ. ಕೊರೆಯುವ ಚಳಿಯಿಂದ ಮುಕ್ತಿಗೊಳಿಸುವ ಪೂರ್ವದ ಭರವಸೆ ಯುಗಾದಿ.

ಯುಗಾದಿಯನ್ನು ಕೇವಲ ದಕ್ಷಿಣ ಭಾರತದಲ್ಲಿ ಮಾತ್ರ ಆಚರಿಸದೆ ಭಾರತದಾದ್ಯಂತ ಹಲವಾರು ಹೆಸರುಗಳಿಂದ ಆಚರಿಸಲಾಗುತ್ತದೆ. ವಸಂತನ ಆಗಮನ ಕವಿ ಮನಸ್ಸುಳ್ಳವರಿಗೆ ಜಾಗೃತಗೊಳಿಸುತ್ತದೆ. ದಕ್ಷಿಣ ಭಾರತದ ಪ್ರಾದೇಶಿಕತೆಗೆ ಅನ್ವಯಿಸುವಂತೆ ಯುಗಾದಿಯನ್ನು ಮೂರು ಹೆಸರುಗಳಿಂದ ಆಚರಿಸಲಾಗುತ್ತದೆ. ‘ಚಂದ್ರಮಾನ’ ‘ಸೌರಮಾನ’, ‘ಭಾರಸ್ವತ್ಯ ಮಾನ’ ಯುಗಾದಿ ಎಂದು ಹೆಸರಿಸಲಾಗಿದೆ. ಸೌರಮಾನ ಸೂರ್ಯನ ಚಲನೆಯನ್ನು ಆಧರಿಸಿ ಬಂದರೆ ಚಂದ್ರಮಾನ ಯುಗಾದಿ ಚಂದ್ರನ ಚಲನೆಯನ್ನು ಆಧರಿಸಿದೆ. ಬೃಹಸ್ಪತಿ (ಗುರುಗ್ರಹ) ಚಲನೆಯನ್ನು ಆಧರಿಸಿರುವುದು ಭಾರಸ್ವತ್ಯ ಯುಗಾದಿ. ಇದು ಸಾಮಾನ್ಯವಾಗಿ ದೀಪಾವಳಿ ವೇಳೆಯಲ್ಲಿ ಬರುತ್ತದೆ. ಇದನ್ನು ಯಾರೂ ಆಚರಣೆ ಮಾಡುವುದಿಲ್ಲ. ಕರ್ನಾಟಕ, ಮಹಾರಾಷ್ಟ್ರ, ಆಂಧ್ರ ಪ್ರದೇಶದಲ್ಲಿ ಚಂದ್ರಮಾನ ಯುಗಾದಿ ಆಚರಿಸಿದರೆ ಕೇರಳದಲ್ಲಿ ಸೌರಮಾನ ಯುಗಾದಿ ಆಚರಿಸುತ್ತಾರೆ. ಕೆಲವು ಮಾಹಿತಿಗಳ ಪ್ರಕಾರ ಇದನ್ನು ವಿಷು ಸಂಕ್ರಮಣ ಎಂದೂ ಕರೆಯುವರು. ಸಿಂದ್ ಪ್ರಾಂತ್ಯಗಳಲ್ಲಿ ಯುಗಾದಿಯನ್ನು ‘ಚೆಟ್–ಚಾಂದ್’ ಎಂದು ಚಂದ್ರಮಾನ ಯುಗಾದಿ ಆಚರಣೆ ಮಾಡುತ್ತಾರೆ. ಮಹಾರಾಷ್ಟ್ರದವರಿಗೆ ಈ ಹಬ್ಬ ಗುಡಿಪಾಡ್ವಾ. ಪಾಸಿ ಸಮುದಾಯದವರೂ ತಮ್ಮ ವರ್ಷಾರಂಭವನ್ನು ಚೈತ್ರ ಶುಕ್ಲ ಪಕ್ಷದಿಂದಲೇ ‘ಸೌರೋಜ್’ ಎಂದು ಕರೆದು ಆಚರಿಸುತ್ತಾರೆ. ಉತ್ತರ ಭಾರತದಲ್ಲಿ ಶಾಲಿವಾಹನ ಹೆಸರಿನಲ್ಲಿರುವ ಶಕೆ ಆರಂಭವಾಗುವುದು ಈ ಚೈತ್ರ ಶುಕ್ಲ ಪ್ರತಿಪದೆಯಿಂದಲೇ ಎಂಬುದು ಪ್ರತೀತಿ.

ಇನ್ನು ಪುರಾಣೇತಿಹಾಸವನ್ನು ಗಮನಿಸಿದರೆ ಯುಗಾದಿ ದಿನದಂದು ಬ್ರಹ್ಮ ದೇವನು ಸೃಷ್ಟಿ ಕಾರ್ಯ ಆರಂಭಿಸಿದನು. ದ್ವಾಪರದ ಅಂತ್ಯ ಕಲಿಯುಗದ ಆರಂಭ ದಿನದ ಸಂಧಿಕಾಲದಲ್ಲಿ ಕೃಷ್ಣ ಪರಮಾತ್ಮ ತನ್ನ ದೇಹ ತ್ಯಜಿಸಿದ ಎಂಬುದು ಪುರಾಣಗಳಿಂದ ತಿಳಿದು ಬಂದಿದೆ.

ಬ್ರಹ್ಮ ಪುರಾಣದಲ್ಲೂ ಯುಗಾದಿ ಬಗ್ಗೆ ವಿವರಗಳು ಲಭ್ಯ. ಅಂದು ರೇವತಿ ನಕ್ಷತ್ರದ ನಿಷ್ಕಂಬ ಯೋಗದ ಹಗಲಿನಲ್ಲಿ ಭಗವಂತನು ಮತ್ಸ್ಯಾವತಾರ ಮಾಡಿದನು ಎಂದು ಸ್ಮೃತಿ ಕೌಸ್ತುಭ ಹೇಳುತ್ತದೆ. ವರ್ಷ, ಋತು, ಮಾಸ, ಪಕ್ಷ ಎಲ್ಲಕ್ಕೂ ನಾಂದಿಯಾಗಿ ಇಡೀ ಸಂವತ್ಸರಕ್ಕೆ ಮುನ್ನುಡಿಯಾಗಿ ಬರುವ ಯುಗಾದಿಗೆ ಋಷಿ ಮುನಿಗಳು ಸಹ ವಿಶೇಷ ಗಮನ ಕೊಡುತ್ತಿದ್ದರಂತೆ. ಇಷ್ಟೆಲ್ಲಾ ಇತಿಹಾಸ ಮಹತ್ವ ಹೊಂದಿರುವ ದಿನ ಸೃಷ್ಟಿಕರ್ತ ನೀಡಿರುವಾಗ ನಮ್ಮ ಪ್ರಕೃತಿ ಮಾತೆ ಅದಕ್ಕೆ ಮೆರಗನ್ನು ನೀಡಿದ್ದಾಳೆ.

ಯುಗಾದಿ ವಸಂತ ಋತುವಿನ ಆಗಮನಕ್ಕೆ ಹೊಸ್ತಿಲು, ವಸಂತ ಋತುವಿಗಿಂತ ಮೊದಲು ಬರುವ ಶಿಶಿರ ಋತುವಿನ ಹೊಡೆತಕ್ಕೆ ಸಿಕ್ಕಿ ಜೀವ ಸಂಕುಲ ನಲುಗುತ್ತದೆ. ಶಿಶಿರ ಕಳೆದು ವಸಂತ ಬಂದ ಕೂಡಲೇ ನಿಸರ್ಗದಲ್ಲಿ ನವ ಚೈತನ್ಯ ಪುಟಿದೇಳುತ್ತದೆ. ಗಿಡಮರಗಳು ಜೀವಕಳೆಯಿಂದ ಪಲ್ಲವಿಸುತ್ತದೆ. ಇದೇ ಪ್ರಕೃತಿ ವೈಶಿಷ್ಟ್ಯ. ಇಂತಹ ವಿಶಿಷ್ಟತೆಯಲ್ಲಿ ಮನುಷ್ಯನ ದೈನಂದಿನ ಪರಿಸರಕ್ಕೆ ಹೊಂದಿಕೊಳ್ಳುವಂತಹ ಕಾರ್ಯ ನಡೆಸಬೇಕಾಗುತ್ತದೆ. ಒಡೆದು ಬಿರುಕುಗೊಂಡ ಚರ್ಮಕ್ಕೆ ಎಣ್ಣೆಯನ್ನು ಹಚ್ಚಿ ಅಭ್ಯಂಜನ ಮಾಡುವುದು ಯುಗಾದಿಯ ವಿಶೇಷ. ತಂಪು ಮಿಶ್ರಿತ ಬಿಸಿಲಿಗೆ ಚರ್ಮ ಬಿರಿಯುತ್ತದೆ. ಆದರೆ ದೆಹಲಿಯ ಕೊರೆಯುವ ಚಳಿಯಲ್ಲಿ ಅಭ್ಯಂಜನ ಕ್ಷಣ ಭಯವೆನಿಸುತ್ತದೆ. ಎಣ್ಣೆ ಸ್ನಾನ ಮುಗಿಸಿ ಹೊಸ ಬಟ್ಟೆಯನ್ನು ಧರಿಸಿ ದೇವರ ಪೂಜೆ ಮಾಡಿ ಹೊಸ ವರ್ಷ ಆರಂಭಿಸುವ ಸಲುವಾಗಿ ಪರಿವಾರದೊಂದಿಗೆ ಕುಳಿತು ಪಂಚಾಂಗ ಓದುವುದು, ವರ್ಷದ ಒಳಿತು–ಕೆಡಕು ತಿಳಿಯುವುದು, ನಂತರ ಹೋಳಿಗೆಯ ಊಟ ಮಾಡುವುದು. ಹಬ್ಬದ ವಿಶೇಷ ಪ್ರಸಾದ ಬೇವು ಬೆಲ್ಲದ ಪಚನ, ಎಷ್ಟು ಸಮಂಜಸವೆಂದರೆ ಚಳಿ ಬಿಡುತ್ತಾ ಬೇಸಿಗೆ ಆರಂಭದ ಸಂಕ್ರಮಣ ಕಾಲದಲ್ಲಿ ಅನಾರೋಗ್ಯಗಳಿಗೆ ದಾರಿ ಮಾಡಿ ಕೊಟ್ಟಂತಾಗುತ್ತದೆ. ಆಗ ಬೇವಿನ ಚಿಗುರು ತಿನ್ನುವುದು ರೋಗ ನಿರೋಧಕದ ಶಕ್ತಿ ದೊರೆತಂತಾಗುತ್ತದೆ. ಬೇವು ಕಹಿಯಿರುವುದರಿಂದ ಬೆಲ್ಲದ ಜೊತೆ ತಿನ್ನುವುದು. ಬೇವು ಬೆಲ್ಲ ಬದುಕಿನ ಒಳಿತು ಕೆಡಕುಗಳಿಗೆ ಸ್ಪಂದಿಸುವ, ಎರಡನ್ನೂ ಜೀವನದಲ್ಲಿ ಸರಿತೂಗಿಸಿಕೊಂಡು ಸಮರಸವೇ ಜೀವನ ಎನ್ನುತ್ತಾ ಸಿಹಿ ಕಹಿಯನ್ನು ಸೇವಿಸುವುದೆಂದು ಸಂಪ್ರದಾಯ ಹೇಳುತ್ತದೆ.

ಊಟ, ಹೊಸ ವರ್ಷದ ಪಂಚಾಂಗ ಪಠಣ ನಂತರ ಗಂಡಸರು, ಹೆಂಗಸರು ಆಟೋಟಗಳಲ್ಲಿ ತೊಡಗುತ್ತಾರೆ. ಹಳ್ಳಿಯ ಜನರು ತಮ್ಮ ಪ್ರಾದೇಶಿಕ ಆಟಗಳನ್ನು ಆಡುತ್ತಾರೆ. ಆ ದಿನವನ್ನು ವರ್ಣಮಯವಾಗಿ ಕಳೆಯುತ್ತಾರೆ.

ಹಬ್ಬ ಎಂದರೆ ಸೀಮಿತ ಅರ್ಥ ಕೊಡದೇ ವ್ಯಾಪಕವಾಗಿ ಅನುಸರಿಸಿಕೊಂಡು ಬಂದಿರುವ ಹಲವಾರು ಸಂಸ್ಕೃತಿಗಳ ಮೇಳೈಸುವಿಕೆಯಾಗಿದೆ. ಯುಗಾದಿ ಹಬ್ಬ ಮುಂಚೆ ಆಚರಿಸುವಂತೆ ಈಗಿಲ್ಲ. ಕಾಲ, ವಾತಾವರಣ, ಪರಿಸ್ಥಿತಿಗಳಿಗನ್ವಯವಾಗಿ ಸರಿದೂಗಿಸಿಕೊಂಡು ತನ್ನತನ ಬಿಡದೆ ಮುಂದುವರಿಸಿಕೊಂಡು ಹೋಗುವುದು ಯುಗಾದಿಯ ಅರ್ಥ. ಪ್ರಸ್ತುತ ಪರಿಸ್ಥಿತಿಗೆ ಅನ್ವರ್ಥವಾಗಿದೆ ಎಂದರೆ ತಪ್ಪಾಗಲಾರದು. ಹಣ್ಣೆಲೆ ಉದುರಿ ಚಿಗುರೆಲೆಗೆ ಸ್ವಾಗತಿಸುವ ಹಂತದಲ್ಲಿ ಚಿಗುರೆಲೆಯು ಹೊಸಹೊಸ ಅಭಿರುಚಿಗೆ ಸ್ವಾಗತಿಸುವ ಹಣ್ಣೆಲೆಯು ಮಾರ್ಗದಲ್ಲಿಯೇ ಸಾಗುವುದಾಗಿದೆ.

ಎಲ್ಲರಿಗೂ ವಿಜಯ ನಾಮ ಸಂವತ್ಸರದ ಯುಗಾದಿಯ ಹಾರ್ದಿಕ ಶುಭಾಶಯಗಳು

❑ ಲಾವಣ್ಯ ಬಸವರಾಜ

## ಯುಗಾದಿಯ ಶುಭಾಶಯಗಳು

**ವಿ**ವೇಚನೆಯಿಂದ ಪ್ರಕೃತಿದತ್ತ ಜೀವಗಣಗಳನ್ನು
**ಜ**ಗತ್ತಿನ ಸಂಪತ್ತೆಂದು ಅರಿತುಕೊಂಡು
**ಯ**ಥಾಶಕ್ತಿ ಕಾಪಾಡಿ, ರಕ್ಷಿಸುತ್ತಾ
**ನಾ**ನು ನನ್ನದು ಎನ್ನದೆ ಎಲ್ಲರೂ
**ಮ**ನೋಜ್ಞರಾಗಿ ಒಂದಾಗಿ ಬಾಳೋಣ
**ಸಂ**ಯಮ–ಸಂಸ್ಕೃತಿ–ಸಂಸ್ಕಾರ–ಸಂಪ್ರದಾಯಗಳ ಸಂಗಮವಾಗಿ
**ವ**ರಿಷ್ಠ–ವರೇಣ್ಯರ ರೀತಿ–ನೀತಿ ನಮ್ಮೆಲ್ಲರಿಗೂ ಮಾರ್ಗದರ್ಶಕವಾಗಲಿ; ವಾ–
**ತ್ಸ**ಲ್ಯ ಪೂರಕವಾಗಿ ಕಿಶೋರರ ಬೆಳವಣಿಗೆಗೆ
**ರ**ಮ್ಯರಂಜಿತ ಬಾಳಿಗೆ, ಯುವ ಪೀಳಿಗೆ ದೀಕ್ಷೆತೊಟ್ಟು
**ದ**ಕ್ಷತೆಯಿಂದ, ಮಹತ್ವಾಕಾಂಕ್ಷೆ ಯಿಂದ
**ಶು**ದ್ಧ–ಪರಿಸರವನ್ನು ರಚಿಸಲಿ!
**ಭಾ**ವಾವೇಶಕ್ಕೊಳಗಾಗದೆ ಅಭಿಮಾನದಿಂದ ಭಾವುಕರಾಗಿ
**ಶ**ಕ್ತಿ–ಯುಕ್ತಿಯಿಂದ, ಸದ್ಭಾವನೆಯಿಂದ
**ಯ**ತ್ನ–ಪ್ರಯತ್ನದಿಂದ ನಾಡಿನ ಹೆಮ್ಮೆಯ ಧೀಮಂತರಾಗಲಿ!!
**ಗ**ಳಿಸಿದ್ದನ್ನು ಕಾಪಾಡಿಕೊಂಡು, ಪರಸ್ಪರ ಹಂಚಿಕೊಂಡು ಮುಗು–
**ಳು** ನಗುತ್ತಾ ಸರ್ವಜೀವಿಗಳ ಸುಖಕ್ಕಾಗಿ ಮಿಡಿಯಲಿ–ದುಡಿಯಲಿ!!!

ಸರ್ವೇಜನೋ ಸುಖಿನಾ ಭವಂತು!!!!

ಡಾ.ಅಹಲ್ಯಾ ಚಿಂತಾಮಣಿ

# ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿ – 2013 ಟ್ರೋಫಿ ವಿಜೇತರಾದ ಬೆಳ್ಳಿಯಪ್ಪ ಗ್ರೂಪ್



ವಿಜೇತರಾದ ಬೆಳ್ಳಿಯಪ್ಪ ಗ್ರೂಪ್ ತಂಡ

ಪ್ರತಿ ವರ್ಷದಂತೆ ಈ ಬಾರಿಯೂ ಕೂಡಾ ದೆಹಲಿ ಕರ್ನಾಟಕ ಸಂಘದಿಂದ ಜನಪ್ರಿಯವಾದ ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿಯನ್ನು ಆಯೋಜಿಸಲಾಯಿತು. ಮಾರ್ಚ್ 17ರಂದು ಸಿವಿಲ್ ಸರ್ವೀಸಸ್ ಅಥಾರಿಟಿ ಗ್ರೌಂಡ್ಸ್‌ನಲ್ಲಿ ಮೊದಲ ಪಂದ್ಯ ಹೊಯ್ಸಳ ಕ್ರಿಕೆಟ್ ಗುರ್‌ಗಾಂ ಮತ್ತು ಜನಕಪುರಿ ಕನ್ನಡ ಕೂಟ ನಡುವೆ ನಡೆಯಿತು. ಇದರಲ್ಲಿ ಹೊಯ್ಸಳ ಕ್ರಿಕೆಟ್ ಗುರ್‌ಗಾಂ ಜಯಗಳಿಸಿತು. ಎರಡನೇ ಪಂದ್ಯದಲ್ಲಿ ಗೋಕರ್ಣ ಮಂಡಳ ಹಾಗೂ ಗಣೇಶ್ ಮಿತ್ರ ಮಂಡಳಿಯ ನಡುವೆ ನಡೆದ ಪಂದ್ಯದಲ್ಲಿ ಗಣೇಶ್ ಮಿತ್ರ ಮಂಡಳಿ ಜಯಗಳಿಸಿತು. ಮೂರನೇ ಪಂದ್ಯದಲ್ಲಿ ಬೆಳ್ಳಿಯಪ್ಪ ಗ್ರೂಪ್ ಹಾಗೂ ಜೆ.ಎಸ್. ಎಸ್. ಆರ್‌ಡಬ್ಲ್ಯೂ.ಎ, ನೋಯ್ಡಾ ನಡುವೆ ನಡೆದ ಪಂದ್ಯದಲ್ಲಿ ಬೆಳ್ಳಿಯಪ್ಪ ಗ್ರೂಪ್ ಜಯಗಳಿಸಿತು. ನಾಲ್ಕನೇ ಪಂದ್ಯದಲ್ಲಿ ಕೆ.ಬಿ.ಎಲ್ ವಾರಿಯರ್ಸ್ ಹಾಗೂ ಕರ್ನಾಟಕ ಗುರ್‌ಗಾಂ ನಡುವೆ ನಡೆದ ಪಂದ್ಯದಲ್ಲಿ ಕೆ.ಬಿ.ಎಲ್ ವಾರಿಯರ್ಸ್ ಜಯಗಳಿಸಿದರು.

ಮಾರ್ಚ್ 23ರಂದು ವಸಂತ್ ಕುಂಜ್‌ನ ಕಥೂರಿಯಾ ಪಬ್ಲಿಕ್ ಸ್ಕೂಲ್ ಗ್ರೌಂಡ್‌ನಲ್ಲಿ ನಡೆದ ಮೊದಲ ಪಂದ್ಯದಲ್ಲಿ ಸ್ಟೂಡೆಂಟ್ಸ್ ಇಲೆವನ್ ಮತ್ತು ಬೆಳ್ಳಿಯಪ್ಪ ಗ್ರೂಪ್ ನಡುವೆ ನಡೆದ ಪಂದ್ಯದಲ್ಲಿ ಬೆಳ್ಳಿಯಪ್ಪ ಗ್ರೂಪ್ ವಿಜಯಗಳಿಸಿತು. ಎರಡನೇ ಪಂದ್ಯ ಗಣೇಶ್ ಮಿತ್ರ ಮಂಡಳಿ ಮತ್ತು ತುಳುನಾಡು ತುಳುಸಿರಿ ನಡುವೆ ನಡೆದ ಪಂದ್ಯದಲ್ಲಿ ಗಣೇಶ್ ಮಿತ್ರ ಮಂಡಳಿ ಜಯಗಳಿಸಿತು. ಮೂರನೇ ಪಂದ್ಯ ಸೌತ್ ಕೆನರಾ ಕ್ಲಬ್ ಹಾಗೂ ಹೊಯ್ಸಳ ಕ್ರಿಕೆಟರ್ಸ್ ಗುರ್‌ಗಾಂ ನಡುವೆ ನಡೆದು ಸೌತ್ ಕೆನರಾ ಕ್ರಿಕೆಟ್ ಕ್ಲಬ್ ಜಯಗಳಿಸಿತು.

ಮಾರ್ಚ್ 24ರಂದು ನಡೆದ ಮೊದಲ ಪಂದ್ಯದಲ್ಲಿ ಕೆ.ಬಿ.ಎಲ್. ವಾರಿಯರ್ಸ್ ಹಾಗೂ ಕರ್ನಾಟಕ ಭವನ ಕ್ರಿಕೆಟ್ ಕ್ಲಬ್ ನಡುವೆ ನಡೆದ ಪಂದ್ಯದಲ್ಲಿ ಕೆ.ಬಿ.ಎಲ್. ವಾರಿಯರ್ಸ್ ಜಯಗಳಿಸಿತು. ಸೆಮಿಫೈನಲ್‌ನಲ್ಲಿ ಸೌತ್ ಕೆನರಾ ಕ್ಲಬ್ ಹಾಗೂ ಗಣೇಶ್ ಮಿತ್ರ ಮಂಡಳಿಯ ನಡುವೆ ನಡೆದ ಪಂದ್ಯದಲ್ಲಿ ಸೌತ್‌ಕೆನರಾ ಕ್ರಿಕೆಟ್ ಕ್ಲಬ್ ಜಯಗಳಿಸಿ ಫೈನಲ್ ಪ್ರವೇಶಿಸಿತು. ಬೆಳ್ಳಿಯಪ್ಪ ಗ್ರೂಪ್ ಮತ್ತು ಕೆ.ಬಿ.ಎಲ್..ವಾರಿಯರ್ಸ್ ನಡುವೆ ನಡೆದ ಪಂದ್ಯದಲ್ಲಿ ಬೆಳ್ಳಿಯಪ್ಪ ಗ್ರೂಪ್ ಫೈನಲ್ ಪ್ರವೇಶಿಸಿತು.

ಸೌತ್‌ಕೆನರಾ ಕ್ರಿಕೆಟ್ ಕ್ಲಬ್ ಹಾಗೂ ಬೆಳ್ಳಿಯಪ್ಪ ಗ್ರೂಪ್ ನಡುವೆ ನಡೆದ ಫೈನಲ್ ಪಂದ್ಯಾವಳಿಯಲ್ಲಿ ಬೆಳ್ಳಿಯಪ್ಪ ಗ್ರೂಪ್ ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿಯ ಟ್ರೋಫಿಯನ್ನು ತನ್ನದಾಗಿಸಿಕೊಂಡಿತು.

**ಸೆಮಿಫೈನಲ್**

ಸೌತ್ ಕೆನರಾ ಕ್ಲಬ್ (82/5) ಗಣೇಶ್ ಮಿತ್ರ ಮಂಡಳಿ (55/9)
ಕೆ.ಬಿ.ಎಲ್. ವಾರಿಯರ್ಸ್ (102/2) ಬೆಳ್ಳಿಯಪ್ಪ ಗ್ರೂಪ್ (103/4)

**ಫೈನಲ್**

ಸೌತ್ ಕೆನರಾ ಕ್ಲಬ್ (95/7) ಬೆಳ್ಳಿಯಪ್ಪ ಗ್ರೂಪ್ (98/2)



ರನ್ನರ್ಸ್ ಅಪ್ ಸೌತ್ ಕೆನರಾ ಕ್ಲಬ್ ತಂಡ

ಪ್ರತಿ ಸಿಕ್ಸರ್ ಗಳಿಸಿದ ಆಟಗಾರರಿಗೆ ತಲಾ ರೂ.25/–ರಂತೆ ಬಹುಮಾನವನ್ನು ಡಾ.ಬಿ.ವಿ.ಅಡ್ಕೋಳಿ ಅವರು, ಅರ್ಧ ಶತಕ ಗಳಿಸಿದ ಆಟಗಾರನಿಗೆ ತಲಾ ರೂ 100/–ರಂತೆ ಬಹುಮಾನವನ್ನು ಶಶಿಕಾಂತ್ ಪಾಟೀಲ್ ಅವರು ಪ್ರಾಯೋಜಿಸಿ ಆಟಗಾರರನ್ನು ಪ್ರೋತ್ಸಾಹಿಸಿದರು.

ಕ್ರಿಕೆಟ್ ಪಂದ್ಯಾವಳಿಯ ಯಶಸ್ವಿ ಆಯೋಜನೆಗೆ ಸಹಕರಿಸಿದ ಎಲ್ಲರಿಗೂ ಕ್ರೀಡಾ ಸಮಿತಿಯ ಪರವಾಗಿ ವಂದನೆಗಳು.

❑ ಎನ್.ಆರ್.ಶ್ರೀನಾಥ್

## ಉಚಿತ ವೈದ್ಯಕೀಯ ತಪಾಸಣೆ

ಏಪ್ರಿಲ್ 28ರ ಭಾನುವಾರದಂದು ಡಾ. ಭೀಮಭಟ್ ಅವರಿಂದ ಉಚಿತ ವೈದ್ಯಕೀಯ ತಪಾಸಣೆ ನಡೆಯಲಿದೆ. ದೆಹಲಿ ಕನ್ನಡಿಗರು ಈ ವೈದ್ಯಕೀಯ ಸೇವೆಯನ್ನು ಸದುಪಯೋಗಪಡಿಸಿಕೊಳ್ಳಬೇಕಾಗಿ ವಿನಂತಿ.

Siddhi Packers & Movers
For safe & timely deliveries of personal effects & vehicles
Please Contact
M/s Siddhi Packers & Movers
Delhi – 9811143566
Mumbai – 9967058466
Bangalore – 9900322677

# ಮನಸೆಳೆದ ಯಕ್ಷಗಾನ ಹಾಗೂ ಮಕ್ಕಳ ವೈವಿಧ್ಯಮಯ ಕಾರ್ಯಕ್ರಮ





ಮಂಗಳೂರಿನ ಯಕ್ಷಮಂಜೂಷ ತಂಡವು ಮಾರ್ಚ್ 23ರಂದು ಸಂಜೆ ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ 'ಸುಂದೋಪಸುಂದ ಕಾಳಗ' ಯಕ್ಷಗಾನ ಪ್ರದರ್ಶನ ನೀಡಿತು. ಹಾಸ್ಯಭರಿತವಾದ ಈ ಕಥಾ ಪ್ರಸಂಗದಲ್ಲಿ ತಿಲೋತ್ತಮೆ ಪಾತ್ರ ವಹಿಸಿದ ವಿದ್ಯಾ ಕೋಳ್ಯೂರು, ಸುಂದ ಹಾಗೂ ಉಪಸುಂದ ಪಾತ್ರಧಾರಿಗಳ ನೈಜ ಅಭಿನಯ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಯಿತು. ಬಿಸ್ಮಿಲ್ಲಾ ಖಾನ್ ಯುವ ಪುರಸ್ಕಾರ ವಿಜೇತೆ ವಿದ್ಯಾ ಕೋಳ್ಯೂರು ಅವರ ದಕ್ಷ ನಿರ್ದೇಶನದಲ್ಲಿ ಭಾಗವತರಾಗಿ ಗಿರೀಶ್ ರೈ ಕಕ್ಕೆ ಪದವು, ಚಂಡೆಯಲ್ಲಿ ದೇವಾನಂದ ಭಟ್ ಬೆಳುವಾಯಿ ಹಾಗೂ ಮದ್ದಳೆಯಲ್ಲಿ ಚಂದ್ರಶೇಖರ್ ಅವರುಗಳು ಉತ್ತಮ ಪ್ರದರ್ಶನ ನೀಡುವಲ್ಲಿ ಯಶಸ್ವಿಯಾದರು. ಈ ಕಾರ್ಯಕ್ರಮವನ್ನು ಖಜಾಂಚಿ ಕೆ.ಆರ್.ರಾಮಮೂರ್ತಿ ನಿರ್ವಹಿಸಿದರು.

ಆನಂತರ ದೆಹಲಿ ಕರ್ನಾಟಕ ಸಂಘದ ಸದಸ್ಯರ ಮಕ್ಕಳಿಂದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮವನ್ನು ಹೇಮಲತ ಗುಡ್ಡೇಗೌಡ ಅವರು ನಿರ್ವಹಿಸಿದರು.



ನವ್ಯಾಮಿನಿ ಬಂಗೇರ



ಭವ್ಯ



ವಿಶ್ರಾಂತ್



ಐಶ್ವರ್ಯ ಮೇಟಿ



ಆತ್ರೇಯ ದೀಪಕ್



ಮಧುಶ್ರೀ ವಿಜಯ್ ಕುಮಾರ್ ಮತ್ತು ನಿಧಿ ಪಾಪೇಗೌಡ




ಅಂಕಿತ ದೇವ್ ಮತ್ತು ಅಮಿತ ದೇವ್



ವಾಸುಕಿ



ಪ್ರಿಯಾಂಕ, ಯಶಸ್ವಿನಿ, ರಚನ, ಪ್ರೇರಣ



ಕನ್ನಿಕಾ ಭಟ್

# ನಿರ್ಭಯ ಬದುಕಿನ ಆಶಯಗಳ ಮಹಿಳಾ ದಿನಾಚರಣೆ



"ಹಲವಾರು ದಶಕಗಳ ಕಾಲದ ಮಹಿಳೆಯರ ನಿರಂತರ ಹೋರಾಟದ ಫಲವಾಗಿ, ಮಹಿಳೆಯರು ಇಂದು ಎಲ್ಲ ಕ್ಷೇತ್ರಗಳಲ್ಲೂ ಗಮನಾರ್ಹ ಹೆಜ್ಜೆ ಗುರುತುಗಳನ್ನು ಮೂಡಿಸುತ್ತಿದ್ದಾರೆ; ತಮ್ಮ ಅಸ್ತಿತ್ವವನ್ನು ನಿರೂಪಿಸುತ್ತಿದ್ದಾರೆ. ಈ ದಿಟ್ಟ ಹೋರಾಟಕ್ಕೆ ಧಕ್ಕೆ ತರುವಂತೆ ಅವಳ ಸಬಲತೆ ಮತ್ತು ಆತ್ಮ ಘನತೆಗಳನ್ನು ತುಳಿಯುವ ನಿಟ್ಟಿನಲ್ಲಿ ಲೈಂಗಿಕ ಆಕ್ರಮಣ, ದೌರ್ಜನ್ಯ ಅವ್ಯಾಹತವಾಗಿ ಸಾಗುತ್ತಿರುವುದು ನಿಜಕ್ಕೂ ಆತಂಕಕಾರಿ ಬೆಳವಣಿಗೆಯಾಗಿದೆ. ಅತ್ಯಾಚಾರ/ಲೈಂಗಿಕ ದೌರ್ಜನ್ಯ, ಹೆಣ್ಣು ಧರಿಸುವ ಬಟ್ಟೆಯ ಕಾರಣದಿಂದ ನಡೆಯುವುದಿಲ್ಲ. ನೈತಿಕವಾಗಿ ಬೆತ್ತಲಾಗಿರುವ ಗಂಡುಗಳ ಕಾರಣದಿಂದ ನಡೆಯುತ್ತದೆ. ಹೆಣ್ಣನ್ನು ಮನುಷ್ಯಳೆಂದು, ಸಹಜೀವಿಯೆಂದು, ತನ್ನಂತೆ ಎಲ್ಲಾ ಹಕ್ಕುಗಳನ್ನು ಹೊಂದಿರುವ ನಾಗರೀಕಳೆಂದು ಸಮಾಜ ಪರಿಗಣಿಸುವಂತೆ ಮಾಡುವುದು ಮಾತ್ರ ಇದಕ್ಕೆ ಪರಿಹಾರ" – ಈ ನಮ್ಮ ಕೋರಿಕೆಯೊಡನೆ ಈ ಬಾರಿಯ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ದೆಹಲಿ ಕರ್ನಾಟಕ ಸಂಘದಲ್ಲಿ ಆಚರಿಸಲಾಯಿತು. ಸ್ನೇಹಾ, ದೆಹಲಿ ಲೇಡಿಸ್ ಕನ್ನಡ ಅಸೋಷಿಯೇಷನ್, ಜನಕಪುರಿ ಮಹಿಳಾ ಮಂಡಳಿ ಹಾಗೂ ಸಮಸ್ತ ದೆಹಲಿ ಮಹಿಳೆಯರ ಸಹಯೋಗದಿಂದ ಮಾರ್ಚ್ 24ರಂದು ದೆಹಲಿ ಕರ್ನಾಟಕ ಸಂಘ ಹಮ್ಮಿಕೊಂಡಿದ್ದ ಅರ್ಥಪೂರ್ಣ ಮಹಿಳಾ ದಿನಾಚರಣೆಯನ್ನು ಕಳೆದ ಡಿಸೆಂಬರ್ 16ರಂದು ಸಾಮೂಹಿಕ ಅತ್ಯಾಚಾರಕ್ಕೆ ಒಳಗಾಗಿ ಜೀವತೆತ್ತ 'ನಿರ್ಭಯ'ಳಿಗೆ ಸಮರ್ಪಿಸಲಾಯಿತು.

ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಡಾ.ನಳಿನಿ ಭಟ್, ಸಲಹೆಗಾರರು, ಪರಿಸರ ಮತ್ತು ಅರಣ್ಯ ಸಚಿವಾಲಯ, ಹಾಗೂ ಗೀತಾ ರಾವ್ ಎಕ್ಸಿಕ್ಯುಟಿವ್ ಡೈರೆಕ್ಟರ್ (ಫೈನಾನ್ಸ್), ಬಿಎಸ್.ಎನ್.ಎಲ್ ಅವರು ಆಗಮಿಸಿದ್ದರು. ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಷನ್ ಸದಸ್ಯೆಯರಿಂದ ದಿ.ಬಸವಪ್ಪ ಶಾಸ್ತ್ರಿ ವಿರಚಿತ 'ಕಾಯೌ ಶ್ರೀ ಗೌರಿ' ಪ್ರಾರ್ಥನೆಯ ಮೂಲಕ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಮಹಿಳಾ ದಿನಾಚರಣೆ ಕೇವಲ ಸಾಂಕೇತಿಕವಾಗದೆ, ಪ್ರತಿನಿತ್ಯ ಮಹಿಳೆಯರ ಗೌರವದ, ಪ್ರೀತಿಯ, ಸುರಕ್ಷಿತ ದಿನಗಳಾಗಿ ಬದಲಾಗಲಿ ಎಂದು ಶುಭ ಹಾರೈಸುತ್ತಾ ಮಹಿಳಾ ದಿನಾಚರಣೆಯ ಮಹತ್ವ ಹಾಗೂ ಆಶಯಗಳೊಂದಿಗೆ ಮಹಿಳಾ ಉಪಸಮಿತಿಯ ಅಧ್ಯಕ್ಷೆ ಸರೋಜಾ ಮಾಧವ ಅವರು ಸ್ವಾಗತಿಸಿದರು. ಸಂಘದ ಅಧ್ಯಕ್ಷ ಡಾ.ವೆಂಕಟಾಚಲ ಹೆಗಡೆ ಅವರು 'ಪುರುಷ ಪ್ರಧಾನ ಸಮಾಜದಿಂದ ಸಮಾನತೆಯತ್ತ ಸಾಗುತ್ತಿರುವ ಮಹಿಳೆಯರಿಂದ ಮಾತ್ರ ಸಮಾಜ ಪರಿಪೂರ್ಣತೆಯನ್ನು ಸಾಧಿಸಲು ಸಾಧ್ಯ. ಇದಕ್ಕಾಗಿ ಹೆಚ್ಚು ಹೆಚ್ಚು ಮಹಿಳೆಯರು ಮುಂದೆ ಬರಬೇಕು' ಎಂಬುದಾಗಿ ತಿಳಿಸುತ್ತಾ ಮಹಿಳಾ ದಿನಾಚರಣೆ ಕೇವಲ ಸಂಭ್ರಮ, ಸಡಗರದ ದಿನವಾಗದೇ ಸಾರ್ಥಕ ಸಾಧನೆಯ ಹೋರಾಟವಾಗಬೇಕು ಎಂದರು.

ಗೋಕರ್ಣ, ಶಿರಸಿಯಲ್ಲಿ ತಮ್ಮ ಬಾಲ್ಯವನ್ನು ಕಳೆದ ನಳಿನಿ ಭಟ್ ಅವರು ಭೌತಶಾಸ್ತ್ರದಲ್ಲಿ ಸ್ನಾತಕೋತ್ತರ ಪದವೀಧರೆ ಹಾಗೂ ಪರಿಸರ ವಿಜ್ಞಾನದಲ್ಲಿ ಡಾಕ್ಟರೇಟ್ ಪಡೆದಿದ್ದಾರೆ. ಪರಿಸರಕ್ಕೆ ಸಂಬಂದಿಸಿದಂತೆ ಬ್ಯಾಂಕಾಕ್, ವಿಯೆನ್ನಾ, ಆಸ್ಟ್ರಿಯಾದಲ್ಲಿ ತರಬೇತಿ ಪಡೆದಿರುವ ನಳಿನಿ ಭಟ್ ಅವರು ಕಳೆದ ಮೂರು ದಶಕಗಳಿಂದ ಈ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಪರಿಸರ ಮಾಲಿನ್ಯ ನಿಯಂತ್ರಣ, ಪರಿಸರ ಗುಣಮಟ್ಟ ಪಾಲನೆ, ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ಹಲವಾರು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಲೇಖನಗಳನ್ನು ಬರೆದಿದ್ದಾರೆ. "ಇಂದು ಎಲ್ಲ ಕ್ಷೇತ್ರಗಳಲ್ಲೂ ಮಹಿಳೆಯರು ಯಶಸ್ವಿಯಾಗಿ ಸೇವೆ ಸಲ್ಲಿಸುತ್ತಿರುವುದು ಸಂತಸದ ಸಂಗತಿ. ಹೊರಗೆ ದುಡಿಯುವ ಮಹಿಳೆಯರಿಗಿಂತಲೂ ಗೃಹಿಣಿಯರ ಜವಾಬ್ದಾರಿ ಹೆಚ್ಚು ಮತ್ತು ಕಷ್ಟದಾಯಕ. ಯಶಸ್ವಿ ಕುಟುಂಬವನ್ನು ಪಾಲಿಸುವ ಗೃಹಿಣಿಯ ಕೊಡುಗೆ ಅಪಾರ ಮತ್ತು ಅಭಿನಂದನೀಯ" ಎಂದ ಅವರು ದುಡಿಯುವ ಮಹಿಳೆಯರು ಕರ್ತವ್ಯದ ಜೊತೆ ಜೊತೆಗೆ ಕುಟುಂಬದೊಡನೆ ಕಾಲ ಕಳೆಯುವುದು ಅತ್ಯವಶ್ಯಕ ಎಂದು ಅಭಿಪ್ರಾಯಪಟ್ಟರು.

ಹಿಂದಿ ಸಾಹಿತ್ಯದ ಜೊತೆಗೆ ಹಣಕಾಸು ಅಧ್ಯಯನ ಮಾಡಿರುವ ಗೀತಾರಾವ್ ಅವರು 9ನೆಯ ತರಗತಿಯವರೆಗೂ ದೆಹಲಿಯಲ್ಲೇ ವಿದ್ಯಾಭ್ಯಾಸ ಮಾಡಿದವರು. ಅವರ ತಾಯಿ ದಿವಂಗತ ಉಮಾದೇವಿ ಶಂಕರ್ ರಾವ್ ಅವರು ಮಕ್ಕಳ ಕತೆಗಳನ್ನು ಬರೆದಿರುವ ಕನ್ನಡದ ಲೇಖಕಿ. ತಂದೆ ದಿವಂಗತ ಎನ್.ಕೆ.ಶಂಕರರಾವ್ ಅವರು 60ರ ದಶಕದಲ್ಲಿ ಏರ್‌ಲೈನ್ಸ್ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾಗ ಅಂದಿನ ದೆಹಲಿ ಕರ್ನಾಟಕ ಸಂಘದ ಖಜಾಂಚಿಯಾಗಿ ಸೇವೆ ಸಲ್ಲಿಸಿದ ಹಿರಿಯ ಸಂಸ್ಥಾಪಕ ಸದಸ್ಯರು. ತಮ್ಮ ಬಾಲ್ಯದ ದಿನಗಳಲ್ಲಿ ಕರ್ನಾಟಕ ಸಂಘದ ಬಯಲು ರಂಗಮಂದಿರದಲ್ಲಿ ಪಂಡರಿಬಾಯಿಯವರ ಕಪ್ಪು ಬಿಳುಪು ಚಿತ್ರಗಳನ್ನು ನೋಡಿದ ದಿನಗಳನ್ನು ಸ್ಮರಿಸಿದ ಗೀತಾ ರಾವ್ ಅವರು ಇಂದು ಬೃಹತ್ತಾಗಿ ಬೆಳೆದಿರುವ ಸಂಘದ ಕಟ್ಟಡವನ್ನು ಕಂಡು ಸಂತಸ ವ್ಯಕ್ತಪಡಿಸಿದರು. "ಬದುಕಿನಲ್ಲಿ ಮಹತ್ವಪೂರ್ಣ ನಿರ್ಣಯಗಳನ್ನು ಕೈಗೊಳ್ಳುವ ಗುರುತರ ಹೊಣೆ ಮಹಿಳೆಯರದ್ದು. ಕುಟುಂಬ ಹಾಗೂ ವೃತ್ತಿ ಜೀವನಗಳೆರಡನ್ನೂ ಸಮರ್ಪಕವಾಗಿ ಸರಿತೂಗಿಸುವ ಮಹಿಳೆಯರ ಕಾಣಿಕೆ ಅಪೂರ್ವ ಹಾಗೂ ಶ್ಲಾಘನೀಯ" ಎಂದ ಗೀತಾ ಅವರು ತಾಯಿಯಾಗಿ, ಸೋದರಿಯಾಗಿ, ಮಗಳಾಗಿ ಮಮತೆ, ವಾತ್ಸಲ್ಯ, ಪ್ರೀತಿ ತೋರುವ ಮಹಿಳೆಯರಿಗೆ 3 ಚಿಯರ್ಸ್ ಎಂದು ಅಭಿನಂದಿಸಿದರು.

ಇದೇ ಸಂದರ್ಭದಲ್ಲಿ 9 ವರ್ಷಗಳ ದೆಹಲಿ ವಾಸದ ನಂತರ ಬೆಂಗಳೂರಿಗೆ ಮರಳುತ್ತಿರುವ ಸಂಘದ ಸಕ್ರಿಯ ಸದಸ್ಯರಾದ ರಾಧಿಕಾ ರಾವ್ ಹಾಗೂ ಪ್ರಭಾತ್ ದಂಪತಿಗಳಿಗೆ ಆತ್ಮೀಯ ಬೀಳ್ಕೊಡುಗೆ ನೀಡಲಾಯಿತು. ಇತ್ತೀಚೆಗೆ ಮುಂಬಯಿ ಕರ್ನಾಟಕ ಸಂಘದ ನಾಟಕೋತ್ಸವ ಸ್ಪರ್ಧೆಯಲ್ಲಿ ಭಾಗವಹಿಸಿದ 'ಕನಸು' ನಾಟಕ ತಂಡದ ಕಲಾವಿದರನ್ನು ಅಭಿನಂದಿಸಲಾಯಿತು.



ರಾಧಿಕಾ ರಾವ್ ದಂಪತಿಗಳಿಗೆ ಬೀಳ್ಕೊಡುಗೆ

ಮಹಿಳಾ ದಿನಾಚರಣೆಯ ಅಂಗವಾಗಿ ಕಲಾವಿದೆಯರಾದ ಜ್ಯೋತಿ ಪೋದ್ದಾರ್ ಹಾಗೂ ಶಾಲನ್ ಮುರಗೋಡ ಅವರ ಕಲಾ ಚಿತ್ರಗಳನ್ನು ಆರ್ಟ್ ಗ್ಯಾಲರಿಯಲ್ಲಿ ಪ್ರದರ್ಶಿಸಲಾಯಿತು.

ಬೆಂಗಳೂರಿನ ಆರಾಧನಾ ನೃತ್ಯ ತಂಡ 'ಕೃಷ್ಣ ಕರ್ಣಾಮೃತ' ನೃತ್ಯ ರೂಪಕ ಪ್ರಸ್ತುತಪಡಿಸಿತು. ವಿದ್ವಾನ್ ನಾಗಭೂಷಣನ್ ಅವರ ನಿರ್ದೇಶನದ ನುರಿತ ಕಲಾವಿದರ ನೃತ್ಯ ಪ್ರದರ್ಶನ ಪ್ರಶಂಸೆಗೆ ಪಾತ್ರವಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸ್ನೇಹಾ, ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್ ಸಂಸ್ಥೆಗಾಗಿ ಈ ನೃತ್ಯ ಕಾರ್ಯಕ್ರಮವನ್ನು ಪ್ರಾಯೋಜಿಸಿತ್ತು.

ಕಾರ್ಯಕ್ರಮದ ಕೊನೆಗೆ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯೆ ಹಾಗೂ ಮಹಿಳಾ ಉಪಸಮಿತಿಯ ಸಂಚಾಲಕಿ ಹೇಮಲತ ಗುಡ್ಡೇಗೌಡ ವಂದನಾರ್ಪಣೆ ಸಲ್ಲಿಸಿದರು. ಸಂಘದ ಉಪಾಧ್ಯಕ್ಷೆ ಉಷಾ ಭರತಾದ್ರಿ ಕಾರ್ಯಕ್ರಮ ನಿರೂಪಿಸಿದರು. ನಂತರ ಮಹಿಳೆಯರ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮವನ್ನು ಸರೋಜ ಮಾಧವ ಅವರು ನಡೆಸಿಕೊಟ್ಟರು.

❑ ಉಷಾ ಭರತಾದ್ರಿ



ಕನಸು ನಾಟಕ ತಂಡ



ಸಮೂಹ ಗೀತೆ



ಲಾಕ್ ಔಟ್ ಅಲ್ಲ ನಾಕ್ ಔಟ್ ಪ್ರಹಸನ



ಕರ್ನಾಟಕ ಭವನದ ಸದಸ್ಯೆಯರಿಂದ ಜಾನಪದ ಗೀತೆ



ವಿದ್ಯಾಭಟ್

# ಮಹಿಳಾ ದಿನಾಚರಣೆಯ ವೈವಿ

ಮಂಜುಳಾ ನಾಗರಾಜ್, ಹೇಮಲತ ಗುಡ್ಡೇಗೌಡ, ರ
ಬಸವರಾಜ್, ಡೀನಾ ಜೋಯ್ಸ್, ಭಾರತಿ ನಾಗರಾ
ಇವರಿಂದ ಜಾನಪದ ಹಾಡುಗಳು–ಹಾಡಿರಿ ರಾಗಗಳ
ಗೌಡ ಸಮಾಜದ ಸದಸ್ಯೆಯರಾದ ಜಿ.ಎಂ.ಭಾರತಿ, ಹೆ
ಗೌಡ ಇವರಿಂದ ಜಾನಪದ ಗೀತೆ ಹಾಗೂ ಗಿರಿಜಾ
ನೃತ್ಯ ರೂಪಕ, ಗೋಕರ್ಣ ಮಂಡಳಿಯ ಸದಸ್ಯೆ ಶ್ರ
ಭವನದ ಸದಸ್ಯೆಯರಾದ ಪೂಜಾ ರಾವ್, ಪ್ರೇಮಾ
ಮೀನಾಕ್ಷಿ ಮಹಾಲಿಂಗಪ್ಪ, ಶಿಲ್ಪಾ, ವನಿತಾ, ಶೀಲಾ ಆನ
ಹನುಮಂತಪ್ಪ ಅವರುಗಳಿಂದ ಕೋಲು ಕೋಲನ್ನ ಕೊ
ಗೀತೆ, ಮತ್ತು ಪೂಜಾ ಪ್ರದೀಪ್, ಶಕುಂತಲಾ ನಾಯಕ
ಕೊಡಗನ ಕೋಳಿ ನುಂಗಿತ್ತಾ ನೃತ್ಯರೂಪಕ, ಕರ್ನಾಟ
ಮಹಿಳಾ ಮಂಡಳಿಯ ಸದಸ್ಯೆಯರಾದ ಜಯಶ್ರೀ
ಪ್ರಶಾಂತಿ, ರಾಜೇಶ್ವರಿ ಪ್ರಕಾಶ್, ಕಲ್ಪನಾ ದೇಶಪಾಂ
'ದೀಪವು ನಿನ್ನದೇ' ಹಾಗೂ ಗುರುಗಾಂ ಸದಸ್ಯೆ ಶ್ರೀಮ
ಕಾರ್ಯಕ್ರಮ ಜರಗಿತು. 'ಬಲಾದಲ್ಲಿ ದೆಹಲಿ ಕರ್ನಾಟ
ಆಶೀಶ್ ಹಾರ್ಮೋನಿಯಂನಲ್ಲಿ ಸಾಥ್ ನೀಡಿದರು.
ಸ್ನೇಹಾ, ದೆಹಲಿ ಕನ್ನಡ ಲೇಡಿಸ್ ಅಸೋಸಿಯೇ
ಶ್ಯಾಮಸುಂದರ್, ಸ್ವರ್ಣಲತಾ ಮೃತ್ಯುಂಜಯ, ಹೇಮ
ಔಟ್ ಅಲ್ಲ, ನಾಕ್ ಔಟ್' ಪ್ರದರ್ಶಿತವಾಯಿತು.



ರಜನಿ ಪಚ್ಚಾಪುರ ಅವರಿಂದ ಕನ್ನಡ ಗೀತೆ



ಒಕ್ಕಲಿಗ ಗೌಡ ಸಮಾಜದಿಂದ ನೃತ್ಯ ರೂಪಕ

## ...್ಯಮಯ ಸಾಂಸ್ಕೃತಿಕ ಕಾರ್ಯಕ್ರಮ

...ೇಣುಕಾ ನಿಡಗುಂದಿ, ರಾಜೇಶ್ವರಿ ಪ್ರಕಾಶ್, ಜಯಶ್ರೀ ...ಜ್, ನೇತ್ರಾ, ಜ್ಯೋತಿ ಜಗದೀಶ್, ಜ್ಯೋತಿ ಶಂಭು ...ೆ ಮತ್ತು ಶಿವನು ಬಿಕ್ಷಕೆ ಬಂದ.., ದೆಹಲಿ ಒಕ್ಕಲಿಗ ...ೇಮಲತ ಗುಡ್ಡೇಗೌಡ, ಚೈತ್ರ ಸುರೇಶ್ ಗೌಡ, ಪ್ರೇಮಾ ...ಶ್ರೀನಿವಾಸ್ ಮತ್ತು ಚೈತ್ರ ಸುರೇಶ್ ಗೌಡ ಅವರಿಂದ ...ೇಮತಿ ವಿದ್ಯಾಭಟ್ ಅವರಿಂದ ಹಾಡು, ಕರ್ನಾಟಕ ... ಗೌಡ, ಜ್ಯೋತಿ ಜಗದೀಶ್, ಶಕುಂತಲಾ ನಾಯಕ್, ...ಂದ್‌ರಾಮ್, ಜ್ಯೋತಿ ರಾಧಾಕೃಷ್ಣ, ಸುಪ್ರೀತ, ಅನಿತಾ ...ೀಲು ಹಾಗೂ ಮುಂಜಾನೆದ್ದು ಕುಂಬಾರಣ್ಣ ಜಾನಪದ ...ಕ್, ಸಿಂಚನಾ, ಪ್ರೇಮಾ ಸೌಂದರ್ಯ ಅವರುಗಳಿಂದ ...ಟಕ ಭವನದ ಸದಸ್ಯೆ ಪದ್ಮಾರಿಂದ ನೃತ್ಯ, ಜನಕಪುರಿ ...ಬಸವರಾಜ್, ನಯನ ಮಾನಕಾಪುರೆ, ಡಾ.ಸಾಯಿ ...ಡೆ, ಸವಿತಾ ಇನಾಂದಾರ್ ಅವರಿಂದ ನೃತ್ಯರೂಪಕ ...ತಿ ರಜನಿ ಪಚ್ಚಾಪುರ ಅವರಿಂದ ಕನ್ನಡ ಗೀತೆಗಳು ...ಕ ಸಂಘದ ಸದಸ್ಯ ಮಂಜುನಾಥ್ ನಾಯ್ಕ್ ಹಾಗೂ

...ಶನ್‌ನ ಸದಸ್ಯೆಯರಾದ ರಾಧಾ ಕೌಜಲಗಿ, ಆಶಾ ...ಲತ ಗುಡ್ಡೇಗೌಡ ಅವರಿಂದ ಹಾಸ್ಯ ಪ್ರಹಸನ 'ಲಾಕ್


ಪೂಜಾ ರಾವ್


ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್ ಸದಸ್ಯೆಯರಿಂದ ಪ್ರಾರ್ಥನೆ


ಕರ್ನಾಟಕ ಭವನದ ಸದಸ್ಯೆಯರಿಂದ ನೃತ್ಯ ರೂಪಕ


ಒಕ್ಕಲಿಗ ಗೌಡ ಸಮಾಜದಿಂದ ಜಾನಪದ ಗೀತೆ


ಜನಕಪುರಿ ಮಹಿಳಾ ಮಂಡಳಿಯಿಂದ ನೃತ್ಯ ರೂಪಕ



ಪದ್ಮಾರಿಂದ ನೃತ್ಯ


ಆರಾಧನ ನೃತ್ಯ ತಂಡದಿಂದ ನೃತ್ಯ ರೂಪಕ

# ಆದರ್ಶ ದಂಪತಿಗಳು

ಭಾರತ ಸರಕಾರದ ಅಲ್ಪ ಸಂಖ್ಯಾತರ ವ್ಯವಹಾರ ಸಚಿವರಾದ ಶ್ರೀ ಕೆ.ರೆಹಮಾನ್ ಖಾನ್ ಅವರು ಚಿಕ್ಕಂದಿನಿಂದಲೇ ಕ್ರಿಯಾಶೀಲರಾಗಿದ್ದು ಊರಿನ ಎಲ್ಲ ಸಣ್ಣ ಪುಟ್ಟ ಕೆಲಸಗಳಿಗೆ ಅತ್ಯಂತ ಕಾಳಜಿಯಿಂದ ನಿರ್ವಹಿಸುತ್ತಿದ್ದರು. ಸದಾ ಹಸನ್ಮುಖರಾದ ಇವರು ಎಲ್ಲರನ್ನು ನಗುನಗಿಸುತ್ತ ಎಲ್ಲ ಸಮುದಾಯದವರ ಪ್ರೀತಿಗೆ ಪಾತ್ರರಾಗಿ ಜೀವನ ಸಾಗಿಸುವ ಸಹೃದಯಿ. ಸುಶಿಕ್ಷಿತ ಶಿಕ್ಷಣವನ್ನು ಪಡೆದು ಚಾರ್ಟೆಡ್ ಅಕೌಂಟೆಂಟ್‌ರಾಗಿ ಸಮಾಜದ ಅಭಿವೃದ್ಧಿಯ ಚಿಂತನೆಗೈಯುವ ಮುಸ್ಲಿಂ ಸಮುದಾಯದ ಕರ್ನಾಟಕ ಪ್ರದೇಶದ ಏಕೈಕ ವ್ಯಕ್ತಿ ಎಂದು ಹೇಳಬಹುದು.

ಚಾರ್ಟೆಡ್ ಅಕೌಂಟೆಂಟ್ ಕೋರ್ಸಿನ ಕೊನೆಯ ವರ್ಷದಲ್ಲಿ ಶ್ರೀಮತಿ ಆಯಿಸಾ ರೆಹಮಾನ್‌ರವರ ಸೌಭಾಗ್ಯದ ಬಾಗಿಲು ತೆರೆಯಿತು. ಸುವರ್ಣ ಕರ್ನಾಟಕ ರಾಜ್ಯೋತ್ಸವ ಶುಭಾರಂಭದ ದಿನಾಂಕ 8.11.1964ರಂದು ಮಂಡ್ಯ ಜಿಲ್ಲೆಯಲ್ಲಿ ಮದುವೆಯ ಕಾರ್ಯಕ್ರಮ ಬಹು ವಿಜೃಂಭಣೆಯಿಂದ ಆಚರಿಸಲಾಯಿತು. ಶ್ರೀಮತಿಯವರು ಕಾಲಿಟ್ಟ ಮನೆಯಲ್ಲಿ ಶಾಂತಿ ಸೌಹಾರ್ದನೆಯ ವೃಷ್ಟಿಯಾಯಿತು. ಕೈಹಿಡಿದ ಪತಿಯ ಜೀವನವು ದಿನೇ ದಿನೇ ಉನ್ನತ ಮಟ್ಟದ ಮೆಟ್ಟಲೇರಲು ಅನುವು ಮಾಡಿಕೊಟ್ಟಿತು. ಮಾನಂಡ್ರೆ ಕಂಪೆನಿಯಲ್ಲಿ ಕೆಲಸ ಮಾಡಿದ ಇವರು ಇಂದು ಅದೇ ಕಂಪೆನಿ 'ಕೆ.ಆರ್.ರೆಹಮಾನ್ ಖಾನ್ ಕಂಪೆನಿ' ಎಂದು ಪುನರ್ ನಾಮಕರಣವಾಗಿ ಕಾರ್ಯ ನಿರ್ವಹಿಸುತ್ತಿರುವುದು ಕೈ ಹಿಡಿದ ಸತಿಯ ಸಂಸ್ಕಾರದ ಫಲವೆಂದು ಅವರು ಹೇಳುವುದರಲ್ಲಿ ಸಂಶಯವಿಲ್ಲ.

ಜ್ಯೋತಿಗೆ ಜ್ಯೋತಿ ಮುಟ್ಟಿ ಭವ್ಯದ ಬೆಳಕಾಗಿ ಬೆಳಗುವ ಶ್ರೀಮತಿ ಆಯಿಸಾರವರ ಜೀವನ ಸಾರ್ಥಕವಾಗಿದೆ. ಎಲೆಮರೆಯ ಕಾಯಿಯಂತೆ, ಬೂದಿ ಮುಚ್ಚಿದ ಕೆಂಡದಂತೆ ಮನೆಯ ಎಲ್ಲ ಸಣ್ಣ ಪುಟ್ಟ ಜವಾಬ್ದಾರಿ ವಹಿಸಿಕೊಂಡು ಪತಿಯ ಉಚ್ಚ ವಿಚಾರಕ್ಕೆ ಧಕ್ಕೆ ತಗಲದಂತೆ ಸಮಾಜ ಬಾಂಧವರಲ್ಲಿ ಅಪಾರ ಪ್ರೇಮವನ್ನಿಟ್ಟುಕೊಂಡು ಗುರು ಹಿರಿಯರ ಜೊತೆ ಅತ್ತೆ ಮಾವಂದಿರ ಜೊತೆಯಲ್ಲಿ ಆದರ ತೋರುವ ಆರಾಧಕರಾಗಿದ್ದಾರೆ. ಅತಿಥಿ ದೇವೋ ಭವದ ಮಂತ್ರವನ್ನಡಗಿಸಿಕೊಂಡು ಇವರು ಬಂದ ಅತಿಥಿಗಳ ಆದರ ಸತ್ಕಾರ, ವಸತಿ ಊಟೋಪಚಾರ ಹಾಗೂ ಅವರ ಆಗುಹೋಗುಗಳ ಬಗ್ಗೆ ಸವಿಸ್ತಾರವಾಗಿ ವಿಚಾರಿಸಿ ಸಹಾಯ ಮಾಡುವ ಪ್ರವೃತ್ತಿಯನ್ನಿಟ್ಟುಕೊಂಡಿದ್ದಾರೆ. ಪತಿಯವರ ಹೆಜ್ಜೆಯಲ್ಲಿ ಹೆಜ್ಜೆಯನ್ನಿಟ್ಟು ಅವರ ಆಜ್ಞೆಯ ಪಾಲಕರಾಗಿ ಚಾಚೂ ತಪ್ಪದೇ ನಿಸ್ವಾರ್ಥವಾಗಿ ಸೇವೆ ಮಾಡುವುದೇ ನನ್ನ ಸೌಭಾಗ್ಯವೆಂದು ಸಂತೋಷ ಪಡುತ್ತಾರೆ.

ಶ್ರೀ ರೆಹಮಾನ್ ಖಾನ್ ಅವರು ಸಾಮಾಜಿಕ ಪ್ರಜ್ಞೆಯುಳ್ಳವರಾಗಿ ಅನೇಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ವಿದ್ಯಾದಾನ ಮಾಡುತ್ತಿರುವ ಶಿಕ್ಷಣ ಪ್ರೇಮಿಯಾಗಿರುತ್ತಾರೆ. ಇವರು ಸರ್ವಧರ್ಮ ಸಮನ್ವಯಿಯಾಗಿ ಹಿಂದುಳಿದ ಹಾಗೂ ದೀನದಲಿತರ ಸೇವೆ ಮಾಡುವುದೇ ಪರಮಾನಂದ ಎಂಬ ಉದಾತ್ತ ಧ್ಯೇಯವುಳ್ಳವರಾಗಿದ್ದಾರೆ. ತಮ್ಮ ಕಚೇರಿಯಲ್ಲಿ ಎಲ್ಲ ಸಮುದಾಯದ ಅಧಿಕಾರಿಗಳನ್ನಿಟ್ಟುಕೊಂಡು ಎಲ್ಲರ ಹಿತರಕ್ಷಣೆ ಕಾಪಾಡಿಕೊಂಡು ದೇಶದ ಏಕತೆಗೆ ನಾಂದಿಯಾಗಿದ್ದಾರೆ. ತಮ್ಮ ದಿನನಿತ್ಯದ ಕಾರ್ಯಕ್ರಮಗಳನ್ನು ದೀರ್ಘವಾಗಿ ಆಲೋಚಿಸಿ ಕ್ರಮ ತೆಗೆದುಕೊಳ್ಳುವ ಅಭ್ಯಾಸವನ್ನಿಟ್ಟುಕೊಂಡವರಾಗಿದ್ದಾರೆ. ಸಮಯಪ್ರಜ್ಞರಾದ ಇವರು ತಮ್ಮ ಸಮಯ ವ್ಯರ್ಥ ಮಾಡದೆ ಕೊಟ್ಟ ಮಾತಿಗೆ ತಕ್ಕಂತೆ ನಡೆದುಕೊಳ್ಳುವವರು, ಯಾರ ಮನವನ್ನು ನೋಯಿಸದೆ ಅವರ ಏಳಿಗೆಗೆ ತಲೆ ಬಾಗುವವರು, ಧಾರ್ಮಿಕ ಸ್ವಭಾವದವರು, ಬಡವರ ಆರಾಧಕರು, ನಿಷ್ಕಲ್ಮಶ ಚಿಂತಕರಾಗಿ ಸೇವೆ ನಿರ್ವಹಿಸುವ ಪ್ರವೃತ್ತಿ ಇವರದಾಗಿದೆ.

ಶ್ರೀಮತಿ ಆಯಿಸಾರವರು ಮನೆಯ ಹಿರಿಯರ ಕಣ್ಮಣಿಯಾಗಿ ಪತಿಗೆ ತಕ್ಕ ಸತಿಯಾಗಿ ಪತಿಯ ಸುಖ-ದು:ಖದಲ್ಲಿ ಸಮಭಾಗಿಯಾಗಿ ಕೆಲಸ ಮಾಡುತ್ತ ಎಲ್ಲ ಬಾಂಧವರ ಪ್ರೀತಿಗೆ ಪಾತ್ರರಾಗಿದ್ದಾರೆ. ಇವರು ಸಾಮಾಜಿಕ ಕಾರ್ಯಕರ್ತೆಯಾಗಿರದಿದ್ದರೂ ಪತಿಯ ಎಲ್ಲ ಸಾಧನೆಗೆ ಸಾಕ್ಷಿಯಾಗಿ ನಿಂತಿದ್ದಾರೆ. 'ಸತಿಪತಿ ಮಾಡಿದ ಭಕ್ತಿ ಹಿತ ಒಪ್ಪುವುದು ಶಿವಂಗೆ' ಎಂಬಂತೆ ಸದಾ ದೇವರಲ್ಲಿ ಭಕ್ತಿ ವಿಶ್ವಾಸ ಹಾಗೂ ಪ್ರೀತಿಯನ್ನಿಟ್ಟ ಇವರ ಬಾಳು ಬದುಕು ಬಂಗಾರವಾಗಲಿ.

ಶ್ರೀಯುತರು ಪಂಚತತ್ವಗಳ ಪರಿಪಾಲನೆ ಮಾಡಿಕೊಂಡು ಪಂಚ ನಮಾಜವನ್ನು ಜಪಿಸುತ್ತ ಪಂಚ ಮಕ್ಕಳ ಏಳಿಗೆಗೆ ನಾಂದಿ ಹಾಕುತ್ತ, ಪಂಚ್ ಅಂಗುಲಿಗಳಿಂದ ದಾನ ನೀಡುತ್ತ ಪಂಚದಶಕಗಳಿಂದ ದುಡಿಯುತ್ತ ನಿಮ್ಮ ಕೈಹಿಡಿದ ಸತಿಯ ಪಂಚದಶಕಗಳ ಸೇವಾಭಾವದ ಫಲವಾಗಿ, ಪಂಚಾಮೃತದಲ್ಲಿ ಸವಿಜೇನು ಸವಿಯುವಂತೆ, ನಿಮ್ಮ ಪ್ರಮಾಣಿಕ ಸಂಘಟನಾ ಶಕ್ತಿಗೆ ಪಂಚ ಶ್ರೇಷ್ಠ ಸ್ಥಾನಗಳು ನಿಮ್ಮನ್ನು ಬಯಸದೆ ಹಿಂಬಾಲಿಸಿವೆ. 1) ಕರ್ನಾಟಕ ರಾಜ್ಯದ ಅಲ್ಪ ಸಂಖ್ಯಾತ ಆಯೋಗದ ಅಧ್ಯಕ್ಷರಾಗಿ 2) ಸತತವಾಗಿ ನಾಲ್ಕು ಬಾರಿ ರಾಜ್ಯ ಸಭೆಯ ಸದಸ್ಯರಾಗಿ 3) ಭಾರತ ಸರಕಾರದ ರಾಸಾಯನಿಕ ಮತ್ತು ರಸಗೊಬ್ಬರ ಖಾತೆಯ ಮಂತ್ರಿಯಾಗಿ 4) ಎರಡು ಬಾರಿ ರಾಜ್ಯ ಸಭೆಯ ಉಪಸಭಾಪತಿಯಾಗಿ, ಹಂಗಾಮಿ ಉಪರಾಷ್ಟ್ರಪತಿಯಾಗಿ 5) ಭಾರತ ಸರಕಾರದ ಅಲ್ಪಸಂಖ್ಯಾತರ ವ್ಯವಹಾರಗಳ ಸಚಿವರಾಗಿ ಪಂಚಭೂತದ ಪರಿಕಲ್ಪನೆ ಇಟ್ಟುಕೊಂಡು ಇವರ ಪಂಚಗುಣಗಳಾದ ಸರಳತೆ, ಪ್ರಾಮಾಣಿಕತೆ, ಕಾಯಕಪ್ರೇಮಿ, ತಾಳ್ಮೆ ಮತ್ತು ಸಹಕಾರಗಳ ಮನೋಭಾವನೆಯನ್ನು ಮೈಗೂಡಿಸಿಕೊಂಡು ರಾಷ್ಟ್ರ ಮತ್ತು ಅಂತರ್‌ರಾಷ್ಟ್ರೀಯ ಸಮಾಜಕ್ಕೆ ನಿರಂತರವಾಗಿ ಕೊಡುಗೆ ನೀಡುತ್ತಾ ಬಂದಿದ್ದಾರೆ. ಇಂದು ಅವರು ಉನ್ನತ ಮಟ್ಟದ ಸಚಿವರಾಗಿದ್ದರೂ ಸಹ ಕೆಳವರ್ಗದ ಕಲ್ಯಾಣಕ್ಕಾಗಿ ಹಾಗು ತಮ್ಮಲ್ಲಿ ಸೇವೆ ಮಾಡುವ ಬಡಬಗ್ಗರನ್ನು ಮುಕ್ತ ಮನಸ್ಸಿನಿಂದ ಸರಕಾರಿ ನೌಕರರನ್ನಾಗಿ ಮಾಡಿದ ಶ್ರೇಯಸ್ಸು ಇವರದ್ದಾಗಿದೆ.

ಚೈತ್ರ ಮಾಸದ ಏಪ್ರಿಲ್ ತಿಂಗಳ ವಿಜಯ ನಾಮ ಸಂವತ್ಸರದ ಶುಭ ಅವಸರದ ಈ ತಿಂಗಳಲ್ಲಿ ಮಹಾ ವಿಭೂತಿ ಪುರುಷರಾದ ಮಹಾವೀರ, ಅಲ್ಲಮ ಪ್ರಭು, ಅಕ್ಕಮಹಾದೇವಿ, ಅಂಬೇಡ್ಕರ್ ಜಯಂತೋತ್ಸವ ಸಂದರ್ಭದಲ್ಲಿ ಆದರ್ಶ ದಂಪತಿಗಳಾದ ಶ್ರೀ ಕೆ.ರೆಹಮಾನ್ ಖಾನ್‌ರವರ ಹುಟ್ಟು ಹಬ್ಬವು ಶುಕ್ರವಾರ 5.4.2013ರಂದು ಹಾಗೂ ಅವರ ಪತ್ನಿ ಶ್ರೀಮತಿ ಆಯಿಸಾ ರೆಹಮಾನ್ ಖಾನ್‌ರವರ ಹುಟ್ಟು ಹಬ್ಬವನ್ನು 11.4.2013 ರಂದು ಆಚರಿಸಲಾಗುವುದು. ಯುಗಾದಿ ಹಬ್ಬದ ಹೊಸ ವರುಷದ ಪರ್ವದಲ್ಲಿ ಜನ್ಮ ತಾಳಿದ ಈ ದಂಪತಿಗಳ ಪೂರ್ವದ ಪುಣ್ಯದ ಫಲವೆಂದು ಹೇಳಬಹುದು. ಇವರ ಹುಟ್ಟು ಹಬ್ಬಗಳು ವರುಷ ವರುಷ ಮರಳಿ ಬರುತ್ತಿರಲಿ. ಸಂತಸದ ಹೊಳೆ ಹರಿಯುತ್ತಿರಲಿ. ಪತಿಗೆ ತಕ್ಕ ಸತಿಯಾಗಿ, ಸಾಮಾಜಿಕ, ರಾಜಕೀಯ, ಶೈಕ್ಷಣಿಕ, ಆರ್ಥಿಕ ಕ್ಷೇತ್ರಗಳಲ್ಲಿ ದುಡಿಯುವ ಶಕ್ತಿ ನೀಡಲಿ, ನಿಮ್ಮ ಆದರ್ಶ ಜೀವನವು ಮುಂದಿನ ಪೀಳಿಗೆಗೆ ಮಾದರಿಯಾಗಲಿ ಎಂದು ಹಾರೈಸುವೆ.

❑ ವಿ.ವಿ.ಬಿರಾದಾರ

# ಕನ್ನಡ ಸಾರಸ್ವತ ಲೋಕದ ಅಶ್ವತ್ಥವೃಕ್ಷ – ಡಿ.ವಿ ಗುಂಡಪ್ಪನವರ 126ನೇ ಜನ್ಮ ದಿನಾಚರಣೆ



ಈ ಶತಮಾನ ಕಂಡ ಭಾರತೀಯ ಸಾಹಿತ್ಯ ಕ್ಷೇತ್ರದ ಅಶ್ವತ್ಥ ವೃಕ್ಷವೆಂದೇ ಪ್ರಶಂಸೆಗೆ ಪಾತ್ರರಾದ ಡಿ.ವಿ.ಗುಂಡಪ್ಪನವರ 126 ನೇ ಜನ್ಮ ದಿನಾಚರಣೆಯನ್ನು ಮಾರ್ಚ್ 24ರ ಭಾನುವಾರ ದೆಹಲಿ ಕರ್ನಾಟಕ ಸಂಘದ ಸೆಮಿನಾರ್ ಹಾಲಿನಲ್ಲಿ ದೆಹಲಿ ಕರ್ನಾಟಕ ಸಂಘ ಮತ್ತು ಮೈಸೂರು ಸಂಗೀತ ವಿದ್ಯಾಲಯ, ಮುಂಬಯಿ ಆಯೋಜಿಸಿದ ಡಿ.ವಿ.ಜಿ ಅವರ ಸಂಸ್ಮರಣೆ –ವಿಚಾರಗೋಷ್ಠಿಯನ್ನು ಸಂಗೀತ ವಿದುಷಿ ಶ್ರೀಮತಿ ಉಮಾ ನಾಗಭೂಷಣ ಅವರು ಡಿವಿಜಿ ಅವರ ಗೀತೆಯೊಂದಿಗೆ ಚಾಲನೆ ನೀಡಿದರು. ರಾಜಧಾನಿಯಲ್ಲಿ ಮಹಾನ್ ಚೇತನ ಡಿವಿಜಿ ಅವರ ವಿಚಾರಗೋಷ್ಠಿಯನ್ನು ನಡೆಸಬೇಕೆಂಬ ಕನಸನ್ನು ಹೊತ್ತ ಮುಂಬೈ ಕನ್ನಡ ಸಂಘದ ಸಕ್ರಿಯ ಸದಸ್ಯ ಹಾಗೂ ಸಂಘಟಕರಾದ ಶ್ರೀ ನಾಗಭೂಷಣ್ ಅವರು ಅತ್ಯಂತ ಪ್ರೀತಿಯಿಂದ ಮುಂದಾಗಿ ಬಂದು ಡಿವಿಜಿ ಅವರ ವಿಚಾರ ಗೋಷ್ಠಿಯನ್ನು ಹಮ್ಮಿಕೊಳ್ಳುವಲ್ಲಿ ಪ್ರೇರಣೆಯಾದರು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ.ವೆಂಕಟಾಚಲ ಹೆಗಡೆ ಅವರು ಪ್ರಬಂಧ ಮಂಡಿಸಲಿದ್ದ ಎಂ.ಬಿ.ನಟರಾಜ್ ಹಾಗೂ ಡಾ.ಟಿ.ಎಸ್.ಸತ್ಯನಾಥ ಅವರಿಗೆ ಪುಷ್ಪಗುಚ್ಛ ನೀಡಿ ಸ್ವಾಗತಿಸಿದರು. ಪತ್ರಿಕೋದ್ಯಮ, ಸಾಹಿತ್ಯ, ಸಾಮಾಜಿಕ ಜೀವನ ಈ ಮೂರು ಕ್ಷೇತ್ರಗಳಲ್ಲಿ ಅನನ್ಯ ಸಾಧನೆ ಮಾಡಿದವರು ಡಿವಿಜಿ. ಕನ್ನಡ ಸಾರಸ್ವತ ಲೋಕದ ಅಶ್ವತ್ಥ ವೃಕ್ಷದಂತೆ ಬಾಳಿದ ಡಿ.ವಿ.ಗುಂಡಪ್ಪನವರ ಬದುಕು ಮತ್ತು ಬರಹಗಳು ಇಂದಿಗೂ ನಮಗೆ ಬೆಳಕಾಗಿ ಒದಗುವಂಥದ್ದು ಎಂದು ಮಾತನಾಡಿದ ನ್ಯಾಷನಲ್ ಕಾಲೇಜು, ಶಿವಮೊಗ್ಗ, ಕನ್ನಡ ವಿಭಾಗದ ಮುಖ್ಯಸ್ಥರಾಗಿ ನಿವೃತ್ತರಾದ ಎಂ.ಬಿ,ನಟರಾಜ್ ಅವರು ಡಿವಿಜಿ ಅವರ ಬದುಕು–ಬರಹದ ಕುರಿತು ಮಾತನಾಡಿದರು.

ಅತ್ಯಂತ ಬಡತನವನ್ನು ಉಂಡು ಬಾಳಿದ ಡಿವಿಜಿ ಅವರು ತಾವೇ ಕಟ್ಟಿ ಬೆಳೆಸಿದ ತಮ್ಮ ಗೋಖಲೆ ಸಾರ್ವಜನಿಕ ಸಂಸ್ಥೆ, 'ಮಂಕುತಿಮ್ಮನ ಕಗ್ಗ' 'ಭಗವದ್ಗೀತಾ ತಾತ್ಪರ್ಯ' ಹಾಗೂ 'ಜ್ಞಾಪಕ ಚಿತ್ರಶಾಲೆ' ಸಂಪುಟಗಳ ಮೂಲಕ ಕನ್ನಡವನ್ನು, ಕನ್ನಡಿಗನನ್ನು ಬೆಳೆಸಿದ್ದಾರೆ. ಡಿ ವಿ ಜಿ ಅವರ ವಿದ್ವತ್ತು ಹಾಗೂ ಚಿಂತನೆ ಕಂಡವರು ಅವರು ಒಬ್ಬ ಋಷಿ ಎಂದಿದ್ದಾರೆ. ಅವರ ಸಾಹಿತ್ಯ ಬಾಳಿಗೊಂದು ನಂಬಿಕೆಯನ್ನೂ, ಭರವಸೆಯನ್ನೂ ಕೊಟ್ಟಿದೆ. ಹಾ.ಮಾ.ನಾಯಕರು 'ಡಿ ವಿ ಜಿ ಅವರದು ಸತ್ಯ ಶಿವ ಸೌಂದರ್ಯಗಳು ಸಮಹಿತವಾದ ಸಾಹಿತ್ಯ' ಎಂದಿದ್ದಾರೆ. ಬದುಕು ಬರಹಗಳೆರಡರ ನಡುವೆ ಸಮನ್ವಯ ಸಾಧಿಸಿದ, ಬರೆದಂತೆಯೇ ಬದುಕಿದ ಋಷಿಸದೃಶ ವ್ಯಕ್ತಿತ್ವ ಡಿ.ವಿ.ಜಿಯವರದು.

ಡಿ ವಿ ಜಿ ಅವರು 1887, ಮಾರ್ಚ್ 17 ರಂದು ಕೋಲಾರ ಜಿಲ್ಲೆಯ ಮುಳಬಾಗಿಲು ತಾಲೂಕಿನ ದೇವನಹಳ್ಳಿಯಲ್ಲಿ ಜನಿಸಿದರು. ಅವರ ಪೂರ್ವಿಕರು ತಮಿಳುನಾಡಿನ ತಿರುಚಿನಾಪಳ್ಳಿಯ ಕಡೆಯವರು. ಅವರ ತಂದೆ ವೆಂಕಟರಮಣಯ್ಯ, ತಾಯಿ ಅಲಮೇಲಮ್ಮ. ಅವರ ಮುತ್ತಜ್ಜ ಕೋಲಾರ ಜಿಲ್ಲೆಯ ಮುಳಬಾಗಿಲಿಗೆ ವಲಸೆ ಬಂದವರು. ಶೇಕದಾರ ಕುಟುಂಬದ ಗುಂಡಪ್ಪನವರು 1898 ರಲ್ಲಿ ಕನ್ನಡ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಪಾಸಾದರು. ಖಾಸಗಿಯಾಗಿ ಇಂಗ್ಲಿಷ್, ಸಂಸ್ಕೃತವನ್ನು ಅಭ್ಯಾಸ ಮಾಡಿದರು. ಮುಂದೆ ಸಂಬಂಧಿಕರೊಬ್ಬರ ಸಹಾಯದಿಂದ ಮೈಸೂರಿನ ಮಹಾರಾಜ ಪ್ರೌಢಶಾಲೆಯಲ್ಲಿ ಶಿಕ್ಷಣ ಪಡೆದರು. ಆದರೆ 1905 ರಲ್ಲಿ ಮೆಟ್ರಿಕ್ಯುಲೇಷನ್ ನಲ್ಲಿ ತೇರ್ಗಡೆಯಾಗಲಿಲ್ಲ. ಅಲ್ಲಿಗೆ ಶಾಲಾ ಶಿಕ್ಷಣವನ್ನು ನಿಲ್ಲಿಸಿದರು. ಪ್ರೌಢಶಾಲೆಯಲ್ಲಿ ಓದುವಾಗಲೇ ಗುಂಡಪ್ಪನವರಿಗೆ ಮದುವೆಯಾಯಿತು. ಹೆಂಡತಿ ಭಾಗೀರಥಮ್ಮ. ಮುಂದೆ ಮುಳಬಾಗಿಲಿನ ಒಂದು ಶಾಲೆಯಲ್ಲಿ ಬದಲಿ ಅಧ್ಯಾಪಕರಾಗಿ ಕೆಲ ಕಾಲ ಕೆಲಸ ಮಾಡಿದರು. ಅದೇ ಅವರ ವೃತ್ತಿ ಜೀವನದ ನಾಂದಿ. ಆದರೂ ಅಲ್ಲಿರಲಾಗಲಿಲ್ಲ. ವೃತ್ತಿ ಬಿಟ್ಟು ಮುಂದೆ ಕೋಲಾರದ ಚಿನ್ನದ ಗಣಿಯಲ್ಲಿ, ಸೋಡಾ ಫ್ಯಾಕ್ಟರಿಯಲ್ಲಿ, ಕೆಲಸ ಮಾಡಿದರು. ನಂತರ ಬೆಂಗಳೂರಿಗೆ ಬಂದು ಕೆಲಸಕ್ಕಾಗಿ ಎಲ್ಲೆಂದರಲ್ಲಿ ಅಲೆದರು. ನಂತರ ಒಂದು ಜಟಕಾ ಗಾಡಿಗೆ ಬಣ್ಣ ಬಳಿಯುವ ಒಂದು ಸಣ್ಣ ಫ್ಯಾಕ್ಟರಿಯಲ್ಲಿ ಕೆಲಸಕ್ಕೆ ಸೇರಿಕೊಂಡರು. ಕೆಲವು ದಿನದಲ್ಲಿ ಆ ಕಾರ್ಖಾನೆಯೂ ಮುಚ್ಚಿ ಹೋಯಿತು.

ಡಿ.ವಿ.ಜಿ ಯವರಿಗೆ ಆಗ ವಯಸ್ಸು ಹದಿನೇಳು. ಅಷ್ಟು ಚಿಕ್ಕ ವಯಸ್ಸಿಗೇ ಅವರು ಇಂಗ್ಲೀಷ್ ನಲ್ಲಿ ನಿರರ್ಗಳ ವಾಗಿ ಮಾತನಾಡುತ್ತಿದ್ದರು, ಬರೆಯುತ್ತಿದ್ದರು.ಜೀವನ ನಿರ್ವಹಣೆಗಾಗಿ ಏನಾದರೂ ಮಾಡಬೇಕಿದ್ದ ಗುಂಡಪ್ಪನವರು 'ಸೂರ್ಯೋದಯ ಪ್ರಕಾಶಿಕ' ಪತ್ರಿಕೆಯಲ್ಲಿ ಬಾತ್ಮೀದಾರರಾಗಿ ಸೇರಿಕೊಂಡರು. ಹೆಚ್ಚು ಕಾಲ ಈ ಪತ್ರಿಕೆ ನಡೆಯಲಿಲ್ಲ.ಈವನಿಂಗ್ ಮೇಲ್,ಮೈಸೂರು ಸ್ಟ್ಯಾಂಡರ್ಡ್ ಮುಂತಾದ ಪತ್ರಿಕೆಗಳಿಗೆ ಇಂಗ್ಲೀಷ್ ಮತ್ತು ಕನ್ನಡದಲ್ಲಿ ಲೇಖನಗಳನ್ನು ಬರೆಯಲು ಪ್ರಾರಂಭಿಸಿದರು. 'ವೀರಕೇಸರಿ' ಯಲ್ಲಿ ಕಾರ್ಯ ನಿರ್ವಹಿಸಲು ಮದ್ರಾಸ್ ಗೆ ಹೋದಾಗ ಅಲ್ಲಿ 'ಹಿಂದೂ' ಪತ್ರಿಕೆಗೆ ಬರೆದರು. ನಂತರ 'ಮೈಸೂರು ಟೈಮ್ಸ್' ಇಂಗ್ಲಿಷ್ ಪತ್ರಿಕೆಯ ಸಹಾಯಕ ಸಂಪಾದಕರಾದರು. ನವರತ್ನ ಕೃಷ್ಣಸ್ವಾಮಿ ಎಂಬ ಸ್ನೇಹಿತರ ಜತೆ ಸೇರಿ ಕನ್ನಡದ ಮೊದಲ ದಿನಪತ್ರಿಕೆ 'ಭಾರತಿ' ಯನ್ನು ಆರಂಭಿಸಿದಾಗ ಡಿ.ವಿ.ಜಿ ಯವರ ವಯಸ್ಸು ಕೇವಲ ಹದಿನೆಂಟು. ಮುಂದೆ ವೃತ್ತಪತ್ರಿಕೆಗಳಿಗೆ ಮಾರಕವಾದ ಕಾನೂನೊಂದನ್ನು ಸರ್ಕಾರ ಜಾರಿಗೆ ತಂದಾಗ ಅದನ್ನು ಪ್ರತಿಭಟಿಸಿ ಡಿ.ವಿ.ಜಿ ತಮ್ಮ ಭಾರತಿ ಪತ್ರಿಕೆಯನ್ನು ನಿಲ್ಲಿಸಿಬಿಟ್ಟರು.

ದಿವಾನ್ ರಂಗಾಚಾರ್ಯ ಅವರ ಬಗ್ಗೆ ಇಂಗ್ಲಿಷ್ ನಲ್ಲಿ ಬರೆದ ಲೇಖನ ಡಿ ವಿ ಜಿ ಅವರ ಬದುಕಲ್ಲಿ ಹೊಸ ತಿರುವು ಪಡೆಯಿತು. ಮುಂದೆ ಪುಸ್ತಕ ರೂಪಕ್ಕೆ ತರಲು ಹಲವು ಮಾರ್ಪಾಡು ಮಾಡಿದರು. ಇದು 'ದಿವಾನ್ ರಂಗಾಚಾರ್ಲು' ಎಂಬ ಪುಸ್ತಕವಾಗಿ ಪ್ರಕಟವಾಗುತ್ತಿದ್ದಂತೆ ಡಿ.ವಿ.ಜಿ ಯವರಿಗೆ ಅಪಾರ ಖ್ಯಾತಿಯನ್ನು ತಂದುಕೊಟ್ಟಿತು.ಆಗ ಡಿ.ವಿ.ಜಿ ಯವರ ವಯಸ್ಸು ಕೇವಲ ಇಪ್ಪತ್ತೆರಡು. ಆಗ ಮುಖ್ಯ ಇಂಜಿನಿಯರ್ ಆಗಿದ್ದ ಸರ್ ಎಂ.ವಿಶ್ವೇಶ್ವರಯ್ಯನವರು ಈ ಪುಸ್ತಕ ಓದಿ ತುಂಬಾ ಮೆಚ್ಚಿಕೊಂಡರು. ನಂತರ ಲೇಖನ, ಪರಿಚಯದ ಜೊತೆ ಕಾವ್ಯ ಕೃಷಿ ಪ್ರಧಾನವಾಯಿತು. ಅನುವಾದ ಸಾಹಿತ್ಯದ ಮೂಲಕ ಡಿ ವಿ ಜಿ ಉತ್ತಮ ಹೆಸರು ಪಡೆದರು. ರಾಜಕೀಯ ವಿಶ್ಲೇಷಣೆ, ತತ್ತ್ವಶಾಸ್ತ್ರ, ಧಾರ್ಮಿಕ ವಿಚಾರಗಳು, ಪ್ರಬಂಧ ಬರಹ, ಬೇರೆ ಬೇರೆ ಮಗ್ಗಲುಗಳಾದವು ಎಂದು ಡಿವಿಜಿ ಅವರ ಬದುಕಿನ ಎಳೆ ಎಳೆಗಳನ್ನು ಬಿಚ್ಚಿಟ್ಟ ನಟರಾಜ್ ಅವರು ಮಂಕುತಿಮ್ಮನ ಕಗ್ಗದ ಕೆಲವು ಕಗ್ಗಗಳನ್ನು ವಾಚಿಸಿ ವಿವರಿಸಿದರು. ಶಾಸ್ತ್ರ ಪ್ರಕ್ರಿಯೆಗಳನ್ನು ತೆಗೆದುಕೊಂಡು ತಮ್ಮ ಬರವಣಿಗೆಯಲ್ಲಿ ಅವನ್ನು ತರ್ಕದ ನೆಲೆಯಲ್ಲಿ ವಿಶ್ಲೇಸಿಸದೇ ಅವೆಲ್ಲದರ ಸರಳ ಸಾರವನ್ನು ನಮಗೆ ಒದಗಿಸಿ ಕೊಟ್ಟವರು ಎಂದು ಮನಮುಟ್ಟುವಂತೆ ನಟರಾಜ್ ವಿವರಿಸಿದರು.

ನಂತರ ಮಾತನಾಡಿದ ದೆಹಲಿ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರಾದ ಡಾ.ಟಿ.ಎಸ್.ಸತ್ಯನಾಥ ಅವರು ಡಿವಿಜಿ ಅವರ ಸಂಸ್ಕೃತಿ ಪರಿಕಲ್ಪನೆ ಹಾಗೂ ಸಂಸ್ಕೃತಿಯ ವಿವಿಧರೂಪಗಳ ಬಗ್ಗೆ ಮಾತನಾಡಿದರು –.'ಸಂಸ್ಕೃತಿ' ಶಬ್ದವು ಇಂಗ್ಲಿಷಿನ 'ಕಲ್ಚರ್' ಎಂಬುದಕ್ಕೆ ಪರ್ಯಾಯವಾಗಿ ಭಾರತದಲ್ಲಿ 20ನೇ ಶತಮಾನದಲ್ಲಿ ರೂಪುಗೊಂಡ ಪರ್ಯಾಯ ಪದ. ಭಾರತದಲ್ಲಿ ಸಂಸ್ಕೃತಿ ಶಬ್ದವು 'ಬೆಳೆವಿಕೆ' ಎನ್ನುವ ಅರ್ಥದ ಘಟ್ಟವನ್ನು ಕಾಣಲೇ ಇಲ್ಲ. ಡಿವಿಜಿಯವರ ಪ್ರಕಾರ ಸಂಸ್ಕೃತಿ ಎಂದರೆ ಬೆಳೆಯುವಿಕೆಯ ಕ್ರಿಯೆಯೇ ಅಲ್ಲ. ಬೆಳೆವಿಕೆಯು ಪ್ರಕೃತಿ. ಸಂಸ್ಕೃತಿಯೆಂಬುದು ಪ್ರಕೃತಿಯಿಂದ ಸಂಸ್ಕರಣಗೊಂಡ ಸಾರ. ಇದೇ ರೀತಿ ಇಡೀ ನಾಡಿಗೆ ಏಕರೂಪಿಯಾದ ಒಂದು ಸಂಸ್ಕೃತಿ ಇರುವುದಿಲ್ಲ. ಅದರೊಳಗೆ



ಪ್ರಾದೇಶಿಕ, ಜಾತೀಯ, ಧಾರ್ಮಿಕ, ಬುಡಕಟ್ಟಿನ ರೂಪಗಳಿರುತ್ತವೆ. ಭಾರತದಂತಹ ದೇಶದಲ್ಲಿ ಇದು ಸಹಜ. ಇದನ್ನು ಸಂಸ್ಕೃತಿಯ ಬಹುರೂಪಿ ಗುಣ ಎನ್ನಬಹುದು. .ಸಂಸ್ಕೃತಿ ಪರಿಕಲ್ಪನೆ ಮೂಲತಃ ಒಂದು ರಾಜಕೀಯ, ಆರ್ಥಿಕ, ಸಾಮಾಜಿಕವಾದ ಲೋಕದೃಷ್ಟಿಯನ್ನು ಸೂಚಿಸುವ ಸೈದ್ಧಾಂತಿಕ ಪರಿಭಾಷೆ. .ಸಾಂಸ್ಕೃತಿಕ ಅಧ್ಯಯನ ಮಾಡುತ್ತಲೆ ಸಂಸ್ಕತಿ ಚಿಂತನೆ ರೂಪು ತಳೆಯಬಹುದು. ಪರಿಕಲ್ಪನಾತ್ಮಕವಾಗಿ ಸಂಸ್ಕೃತಿ ಚಿಂತನೆ ಮಾಡುವವರು ಅಧ್ಯಯನ ಮಾಡದೆಯೂ ಇರಬಹುದು. ಮ್ಯಾಥ್ಯೂ ಆರ್ನಲ್ಡ್, ಡಿವಿಜಿ ಇವರು ಮುಖ್ಯವಾಗಿ ಸಂಸ್ಕೃತಿ ಚಿಂತಕರು ಎಂದು ವಿವರಿಸಿದ ಸತ್ಯನಾಥ್ ಸಂಸ್ಕೃತಿಗೆ ವ್ಯಾಖ್ಯೆ ರೂಪಿಸುವ ಚಿಂತಕರು ಹಾಗೂ ಮತ್ತೊಬ್ಬರು ರೂಪಿಸಿದ ವ್ಯಾಖ್ಯೆಗೆ ಮಾಹಿತಿಗೆ ಅನ್ವಯಿಸಿ ವಿಶ್ಲೇಷಣೆ ಮಾಡುವ ಸಾಂಸ್ಕೃತಿಕ ಅಧ್ಯಯನಕಾರರು ಎಂಬ ವಿಂಗಡಣೆ ಪಶ್ಚಿಮದಲ್ಲಿದೆ. ಕನ್ನಡದಲ್ಲಿಲ್ಲ. ನಮ್ಮಲ್ಲಿ ಸಂಸ್ಕೃತಿ ಚಿಂತನೆ ಹಾಗೂ ಸಾಂಸ್ಕೃತಿಕ ಅಧ್ಯಯನಗಳು ಸಾಮಾನ್ಯವಾಗಿ ಒಟ್ಟಿಗೆ ಬರುತ್ತವೆ. ಮಾಸ್ತಿ ಹಾಗೂ ದೇವುಡು ಸಾಂಸ್ಕೃತಿಕ ಅಧ್ಯಯನಕಾರರು. ಆದರೆ ಜತೆಯಲ್ಲೇ ಸಂಸ್ಕೃತಿ ಚಿಂತನೆ ಕೂಡ ಮಾಡುತ್ತಾರೆ. ಇದು ಕನ್ನಡದ ವಿಶೇಷತೆ. ಇವರಿಗೆ ಹೋಲಿಸಿದರೆ, ಡಿವಿಜಿ ಕೇವಲ ಸಂಸ್ಕೃತಿ ಚಿಂತಕರು. ಇದು ಸಂಸ್ಕೃತಿ ಚಿಂತನೆ ಹಾಗೂ ಸಾಂಸ್ಕೃತಿಕ ಅಧ್ಯಯನಗಳ ನಡುವಣ ಭಿನ್ನತೆ ಹಾಗೂ ಸಂಬಂಧದ ಸಂಕೀರ್ಣ ಸ್ವರೂಪ ಎಂಬ ವಿಷಯದ ಮೇಲೆ ಗಹನವಾದ ವಿಚಾರಗಳನ್ನು ಡಾ.ಸತ್ಯನಾಥ್ ವಿಶ್ಲೇಷಿಸಿದರು.

ಡಿವಿಜಿಯವರು ಒಂದು ಮಹಾ ಸಮುದ್ರದ ಹಾಗೆ ಅವರ ಬಗ್ಗೆ ಮಾತನಾಡಲು ಎರಡು ದಿನಗಳ ಗೋಷ್ಠಿಯೂ ಸಾಲದೆಂದು ಗೋಷ್ಠಿಯ ಅಧ್ಯಕ್ಷತೆ ವಹಿಸಿದ ಸಂಘದ ಅಧ್ಯಕ್ಷ ಡಾ.ವೆಂಕಟಾಚಲ ಹೆಗಡೆ ಅವರು ಅಭಿಪ್ರಾಯಪಟ್ಟರು. ವಿಚಾರಗೋಷ್ಠಿಯ ವಿಚಾರವನ್ನು ಮನಸಲ್ಲಿಟ್ಟುಕೊಂಡು ಕಾಳಜೀಪೂರ್ವಕವಾಗಿ ಸಂಘಟಿಸಿದ ನಾಗಭೂಷಣ್ ಅವರನ್ನೂ ಹಾಗೂ ಪ್ರಬಂಧ ಮಂಡಿಸಿದ ಇಬ್ಬರು ವಿದ್ವಾಂಸರ ವಿಚಾರಧಾರೆಗಳನ್ನು ಸಮೀಕರಿಸುತ್ತ ಅಭಿನಂದಿಸಿದರು.

ನಂತರ ಸಂಗೀತ ವಿದುಷಿ ಶ್ರೀಮತಿ ಉಮಾ ನಾಗಭೂಷಣ ಅವರು ಸುಶ್ರಾವ್ಯವಾಗಿ 'ಕಗ್ಗ'ದ ನುಡಿಗಟ್ಟುಗಳನ್ನೂ ಹಾಗೂ ಅಂತಃಪುರ ಗೀತೆಗಳನ್ನು ಹಾಡಿದರು. ಮುಂಬೈಯಲ್ಲಿ ಕಳೆದ 32 ವರ್ಷಗಳಿಂದ ಮೈಸೂರು ಸಂಗೀತ ವಿದ್ಯಾಲಯವನ್ನು ನಡೆಸುತ್ತ ನೂರಾರು ವಿದ್ಯಾರ್ಥಿಗಳಿಗೆ ಸಂಗೀತವನ್ನು ಕಲಿಸುತ್ತಿರುವ ಉಮಾ ನಾಗಭೂಷಣ್ ಅವರಿಗೆ 2012 ಸಾಲಿನ ಕರ್ನಾಟಕ ಕಲಾಶ್ರೀ ಪ್ರಶಸ್ತಿಯನ್ನು ನೀಡಿ ರಾಜ್ಯ ಸರ್ಕಾರ ಗೌರವಿಸಿದೆ. ಇದೇ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಡಾ.ವೆಂಕಟಾಚಲ ಹೆಗಡೆ ಅವರು ಪುಷ್ಪಗುಚ್ಛ ಹಾಗೂ ಸ್ಮರಣಿಕೆ ನೀಡಿ ನಾಗಭೂಷಣ್ ದಂಪತಿಗಳನ್ನು ಅಭಿನಂದಿಸಿದರು. ಸಾಹಿತ್ಯ ಸಮಿತಿಯ ಸಂಚಾಲಕ ಪಿ.ಸಿ.ಶ್ರೀನಿವಾಸ್ ಅವರು ಎಂ.ಬಿ.ನಟರಾಜ್ ಅವರಿಗೆ ಸ್ಮರಣಿಕೆಯನ್ನು ಸಲ್ಲಿಸುತ್ತ ವಂದನಾರ್ಪಣೆ ಸಲ್ಲಿಸಿದರು. ಸಾಹಿತ್ಯ ಸಮಿತಿಯ ಸಂಚಾಲಕಿ ರೇಣುಕಾ ನಿಡಗುಂದಿ ಕಾರ್ಯಕ್ರಮ ನಿರ್ವಹಿಸಿದರು.

❑ ರೇಣುಕಾ ನಿಡಗುಂದಿ

## ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್‌ನಿಂದ ಮಹಿಳಾ ದಿನಾಚರಣೆ



ಸ್ನೇಹಾ, ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್ ವತಿಯಿಂದ ಮಾರ್ಚ್ 20ರಂದು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಯೋಜಿಸಲಾಗಿತ್ತು. ಆತ್ಮೀಯವಾದ ಈ ಸಮಾರಂಭಕ್ಕೆ ಖ್ಯಾತ ಲೇಖಕಿ, ಅಂಕಣಕಾರ್ತಿ ಪುಷ್ಪಾ ಗಿರಿಮಾಜಿ ಅವರು ಆಗಮಿಸಿದ್ದರು. ಗ್ರಾಹಕರ ಕಾನೂನು, ಸಮಸ್ಯೆ, ಪರಿಹಾರ ಕುರಿತಂತೆ ವಿಶೇಷ ತಜ್ಞರಾಗಿ ತಮ್ಮ ಅಂಕಣಗಳ ಮೂಲಕ ಗ್ರಾಹಕರಿಗೆ ಜಾಗೃತಿ ಮೂಡಿಸುತ್ತಿರುವ ಪುಷ್ಪಾ ಗಿರಿಮಾಜಿ ಅವರನ್ನು ಲೇಡಿಸ್ ಅಸೋಸಿಯೇಶನ್ ಅಧ್ಯಕ್ಷೆ ಸ್ವರ್ಣಲತ ಮೃತ್ಯುಂಜಯ ಸ್ವಾಗತಿಸಿದರು. ಪುಷ್ಪಾ ಅವರನ್ನು ಕಾರ್ಯದರ್ಶಿ ಸುಗುಣ ನಾಗೇಶ್ ಅವರು ಪರಿಚಯಿಸಿದರು. "ದಿನನಿತ್ಯದ ಬದುಕಿನ ಎಲ್ಲ ಘಟ್ಟಗಳಲ್ಲಿಯೂ ಒಂದಲ್ಲ ಒಂದು ರೀತಿಯಿಂದ ಸಮಸ್ಯೆಯನ್ನು ನಾವು ಎದುರಿಸುತ್ತೇವೆ. ಆದರೆ ಅದರ ವಿರುದ್ಧ ಹೋರಾಡದೇ ಎಲ್ಲವನ್ನೂ ದಾಕ್ಷಿಣ್ಯದಿಂದ ಒಪ್ಪಿಕೊಳ್ಳುತ್ತೇವೆ. ಯಾವುದೇ ಸಂಕೋಚವಿಲ್ಲದೇ ಎಲ್ಲವನ್ನೂ ಕೇಳಿ ಖಚಿತ ಪಡಿಸಿಕೊಳ್ಳಬೇಕು. ಔಷಧಿ, ಆಹಾರ, ಒಡವೆ, ವಸ್ತ್ರ, ಪೀಠೋಪಕರಣ, ಇನ್ನಿತರೆ ಏನನ್ನೂ ಕೊಳ್ಳುವಾಗ ರಸೀದಿ ಪಡೆಯುವುದು ಅತ್ಯವಶ್ಯಕ. ಗೃಹ ಬಳಕೆಯ ಖರೀದಿಯನ್ನು ಹೆಚ್ಚಿನಂಶ ಮಹಿಳೆಯರೇ ಮಾಡುವುದರಿಂದ ಇದರ ಬಗ್ಗೆ ತಿಳುವಳಿಕೆ ಅತ್ಯಗತ್ಯ" ಎಂದ ಪುಷ್ಪಾ ಅವರು ವಿವರಿಸಿದರು. ಪ್ಯಾಕಿಂಗ್ ಆಗಿರುವ ಆಹಾರ ಪದಾರ್ಥಗಳ ತಯಾರಿಕೆ ಹಾಗೂ ಅಂತಿಮ ದಿನಾಂಕವನ್ನು ಗಮನಿಸುವುದು, ಪ್ಯಾಕೆಟ್‌ನಲ್ಲಿರುವ ಪದಾರ್ಥಗಳ ವಿವರ ತಿಳಿದುಕೊಳ್ಳುವುದು ಬಹು ಅವಶ್ಯಕ. ಔಷಧಿ ವಿಚಾರದಲ್ಲಿ ವಿಶೇಷ ಎಚ್ಚರಿಗೆ ವಹಿಸದಿದ್ದರೆ ಆರೋಗ್ಯಕ್ಕೆ ಹಾನಿ ಹಾಗೂ ಮಾರಣಾಂತಿಕ ಅಪಾಯವಾಗುವ ಸಾಧ್ಯತೆ ಇದೆ ಎನ್ನುವ ಎಚ್ಚರಿಕೆಯನ್ನು ಅವರು ನೀಡಿದರು. ಮೋಸ ಮಾಡುವ, ತಪ್ಪು ಮಾಹಿತಿ ನೀಡುವ ಜಾಹೀರಾತುಗಳ ವಿರುದ್ಧ ಹೋರಾಟ ಮಾಡಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಖರೀದಿಯ ಬಿಲ್ ಅತ್ಯಗತ್ಯ. ಇದಿಲ್ಲದೇ ಯಾವುದೇ ಗ್ರಾಹಕ ಸಮಸ್ಯೆಗಾಗಿ ಹೋರಾಟ ಮಾಡುವುದು ಅಸಾಧ್ಯ. ಕೆಲವೊಮ್ಮೆ ನಿರ್ಲಕ್ಷ್ಯದಿಂದ ಬಿಲ್ ತೆಗೆದುಕೊಳ್ಳದಿದ್ದರೆ ಸಾಕ್ಷಿಯಿಲ್ಲದೇ ಗ್ರಾಹಕ ನ್ಯಾಯಾಲಯಕ್ಕೆ ದೂರು ಸಲ್ಲಿಸುವುದು ಸಾಧ್ಯವಾಗುವುದಿಲ್ಲ ಎಂದ ಪುಷ್ಪಾ ಅವರು ಗ್ರಾಹಕರ ದೂರು, ಗ್ರಾಹಕ ಸಂರಕ್ಷಣೆ ಕಾನೂನು, ಗ್ರಾಹಕ ನ್ಯಾಯಾಲಯ ಮೊದಲಾದ ವಿಷಯಗಳ ಬಗ್ಗೆ ಸವಿವರವಾದ ತಿಳುವಳಿಕೆಯನ್ನು ನೀಡಿದರು. ಸದಸ್ಯೆಯರ ಹಲವಾರು ಪ್ರಶ್ನೆಗಳಿಗೆ ಸೂಕ್ತ ಸಲಹೆ ಹಾಗೂ ಉಪಯುಕ್ತ ಮಾಹಿತಿಗಳನ್ನು ನೀಡಿದರು. ಉಪಾಧ್ಯಕ್ಷೆ ಆಶಾ ಕಾರಿಯಪ್ಪ ಹೂಗುಚ್ಛ ನೀಡಿ ಸ್ವಾಗತಿಸಿದರು. ಜಂಟಿ ಕಾರ್ಯದರ್ಶಿ ನಾಗವೇಣಿ ಹೆಗಡಿ ಕಿರು ಕಾಣಿಕೆ ನೀಡಿದರು. ಖಜಾಂಚಿ ರಾಜೇಶ್ವರಿ ಕಲ್ಲೂರ್ ವಂದನಾರ್ಪಣೆ ಸಲ್ಲಿಸಿದರು.



ಇದೇ ಸಂದರ್ಭದಲ್ಲಿ ಕಳೆದ 9 ವರ್ಷಗಳಿಂದ ಲೇಡಿಸ್ ಅಸೋಸಿಯೇಷನ್‌ನ ಸಕ್ರಿಯ ಸದಸ್ಯೆಯಾಗಿ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದ ರಾಧಿಕಾ ರಾವ್ ಇದೀಗ ಬೆಂಗಳೂರಿಗೆ ತೆರಳುತ್ತಿರುವ ಕಾರಣ ಅವರಿಗೆ ಆತ್ಮೀಯ ಬೀಳ್ಕೊಡುಗೆ ನೀಡಲಾಯಿತು. ಅಭಿನಂದನೆ ಸ್ವೀಕರಿಸಿದ ರಾಧಿಕಾ ರಾವ್ ಅವರು ಲೇಡಿಸ್ ಅಸೋಸಿಯೇಶನ್ ಜತೆಗಿನ ತಮ್ಮ ಆತ್ಮೀಯ ಒಡನಾಟವನ್ನು ಪ್ರೀತಿಯಿಂದ ಸ್ಮರಿಸುತ್ತಾ, ಸ್ನೇಹ ತೋರಿದ ಎಲ್ಲರಿಗೂ ಆಪ್ಯಾಯತೆಯಿಂದ ವಂದಿಸಿದರು. ದೆಹಲಿ ಕರ್ನಾಟಕ ಸಂಘ ಹಾಗೂ ಲೇಡಿಸ್ ಅಸೋಸಿಯೇಶನ್ ಜತೆಗಿನ ಬಾಂಧವ್ಯ ಅವಿಸ್ಮರಣೀಯ ಎಂದರು.

❑ ಸುಗುಣ ನಾಗೇಶ್

# ಗ್ರಾಹಕ ಕಾನೂನು ತಜ್ಞೆ ಪುಷ್ಪ ಗಿರಿಮಾಜಿ



ಕಳೆದ 30 ವರ್ಷಗಳಿಂದ ಗ್ರಾಹಕ ವ್ಯವಹಾರಗಳ ಮೇಲೆ ವ್ಯಾಪಕವಾಗಿ ಹಾಗೂ ನಿರಂತರವಾಗಿ ಬರೆದ ಏಕೈಕ ಭಾರತೀಯ ಪತ್ರಕರ್ತೆ ಎಂಬ ಹೆಗ್ಗಳಿಕೆ ಪುಷ್ಪಾ ಗಿರಿಮಾಜಿ ಅವರದ್ದು. ಲೇಖಕಿ, ಹಾಗೂ ಅಂಕಣಗಾರ್ತಿಯಾಗಿ ಪುಷ್ಪಾ ಅವರು ಗ್ರಾಹಕ ಕಾನೂನು (Consumer Law) ಮತ್ತು ಗ್ರಾಹಕ ಹಕ್ಕುಗಳ ಸಮಸ್ಯೆ (Consumer Rights) ಕ್ಷೇತ್ರದಲ್ಲಿ ಪ್ರಮುಖವಾದ ಸೇವೆ ಸಲ್ಲಿಸುತ್ತಿದ್ದಾರೆ. ಭಾರತೀಯ ಪತ್ರಿಕೋದ್ಯಮದಲ್ಲಿ ಗ್ರಾಹಕ ವಕಾಲತ್ತು ಸೇವೆಯಲ್ಲಿ ಮುಂಚೂಣಿಯಲ್ಲಿರುವ ಪುಷ್ಪಾ ಅವರು ಬೆಂಗಳೂರು ವಿಶ್ವವಿದ್ಯಾಲಯದಿಂದ ಬಿ.ಎಸ್.ಸಿ. ಪದವೀಧರೆ.

1983ರಲ್ಲಿ ಗ್ರಾಹಕ ಹಕ್ಕುಗಳ ರಕ್ಷಣೆಗಾಗಿ ತಮ್ಮ ಹೋರಾಟವನ್ನು 'ಇಂಡಿಯನ್ ಎಕ್ಸ್‌ಪ್ರೆಸ್' ದಿನಪತ್ರಿಕೆಯಲ್ಲಿ ಅಂಕಣವನ್ನು ಬರೆಯುವುದರ ಮೂಲಕ ಪ್ರಾರಂಭಿಸಿದರು. ಅವರ "What? Which? How Much?" ಹಾಗೂ "Check out" ಅಂಕಣಗಳು ಓದುಗರಿಗೆ ಚಿರಪರಿಚಿತ. ಗ್ರಾಹಕರಿಗೆ ಸಂಬಂಧಪಟ್ಟಂತೆ ಆರೋಗ್ಯ, ಬ್ಯಾಂಕಿಂಗ್, ಆಹಾರ ಎಲ್ಲ ಕ್ಷೇತ್ರಗಳಲ್ಲೂ ತಮ್ಮ ಅಮೂಲ್ಯ ಸೇವೆ ಸಲ್ಲಿಸಿದ್ದಾರೆ. ಹೆಚ್ಚು ಹೆಚ್ಚು ಓದುಗರನ್ನು ತಲುಪುವ ಸಲುವಾಗಿ ಅವರು 1991ರಲ್ಲಿ ಇಂಡಿಯನ್ ಎಕ್ಸ್‌ಪ್ರೆಸ್‌ನಿಂದ ಹೊರಬಂದರು. ಈಗ ಅವರು 'ಹಿಂದೂಸ್ತಾನ್ ಟೈಮ್ಸ್' ಪತ್ರಿಕೆಯಲ್ಲಿ ಗ್ರಾಹಕರ ಪ್ರಶ್ನೆಗಳಿಗೆ, ಸಮಸ್ಯೆಗಳಿಗೆ ಸೂಕ್ತ ಸಲಹೆ, ಸೂಚನೆಗಳನ್ನು ನೀಡುತ್ತಾ ಖ್ಯಾತರಾಗಿದ್ದಾರೆ. ಅಷ್ಟೇ ಅಲ್ಲದೇ ಹಲವಾರು ಪತ್ರಿಕೆಗಳಲ್ಲಿ ಗ್ರಾಹಕ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಅಂಕಣ ಹಾಗೂ ಲೇಖನಗಳನ್ನು ಬರೆಯುತ್ತಿರುವುದನ್ನು ನಾವು ಕಾಣಬಹುದು. 'ಗ್ರಾಹಕರ ಹಕ್ಕು' ಅಂದ ಕೂಡಲೇ ಬರುವ ಮೊಟ್ಟ ಮೊದಲ ಹೆಸರು – ಪುಷ್ಪಾ ಗಿರಿಮಾಜಿ.

ಇಲ್ಲಿ ಅವರ ಹೋರಾಟದ ಒಂದು ಉದಾಹರಣೆಯನ್ನು ಕೊಡುವುದಾದರೆ – 1982ರಲ್ಲಿ ಅವರು ಬೆಂಗಳೂರಿನಲ್ಲಿ ಕಲುಷಿತ ನೀರನ್ನು ಕುಡಿದ ಪರಿಣಾಮವಾಗಿ 'ಹೆಪಟೈಟಿಸ್' ನಿಂದಾಗಿ ಮೃತಪಟ್ಟ 20 ವ್ಯಕ್ತಿಗಳ ಪರವಾಗಿ ಸತತವಾಗಿ ಲೇಖನಗಳ ಸರಣಿಯನ್ನು ಬರೆದರು. ಅಲ್ಲದೇ ಇದರ ಸಲುವಾಗಿ ಕರ್ನಾಟಕ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದರು. ಇದರಿಂದಾಗಿ ಸರ್ಕಾರ ನೀರಿನ ಪರೀಕ್ಷೆ ಸೌಲಭ್ಯ ಹಾಗೂ ಸೋರುತ್ತಿದ್ದ ನೀರಿನ ಕೊಳವೆಗಳನ್ನು ಬದಲಾಯಿಸುವ ಕ್ರಮವನ್ನು ಕೈಗೊಂಡಿತು. ಇಂತಹ ನೂರಾರು ಹೋರಾಟಗಳಿಂದ ಗ್ರಾಹಕರಿಗೆ ಸೂಕ್ತ ಪರಿಹಾರವನ್ನು ದೊರಕಿಸುವಲ್ಲಿ ಪುಷ್ಪಾ ಅವರು ನಿರಂತರ ಹೋರಾಟ ನಡೆಸಿದ್ದಾರೆ ಹಾಗೂ ನಡೆಸುತ್ತಿದ್ದಾರೆ.

ಪೆಂಗ್ವಿನ್ ಪ್ರಕಾಶನದಲ್ಲಿ "Consumer Rights for everyone" ಎಂಬ ಗ್ರಾಹಕರ ಕಾನೂನು ಕುರಿತಾದ ಪುಸ್ತಕವನ್ನು ಪ್ರಕಟಿಸಿದ್ದಾರೆ. "Misleading Advertisement" ಹಾಗೂ "Making News, Breaking News, Her own way" ಕೃತಿಗಳಲ್ಲಿ ಒಂದು ಅಧ್ಯಾಯವನ್ನು ಬರೆದಿದ್ದಾರೆ. ಇದುವರೆಗೂ ಸಾವಿರಾರು ಲೇಖನಗಳನ್ನು ಬರೆದಿದ್ದಾರೆ. ಅಲ್ಲದೇ ವಿಮೆ, ಬ್ಯಾಂಕಿಂಗ್, ದೂರಸಂಪರ್ಕ, ಆರೋಗ್ಯ, ಸಾರ್ವಜನಿಕ ಸುರಕ್ಷತೆ ಹಾಗೂ ಗ್ರಾಹಕ ರಕ್ಷಣೆ ಕ್ಷೇತ್ರಗಳಿಗೆ ಸಂಬಂಧಿಸಿದ ರಾಷ್ಟ್ರೀಯ ಹಾಗೂ ಅಂತರ ರಾಷ್ಟ್ರೀಯ ವಿಚಾರ ಸಂಕಿರಣಗಳಲ್ಲಿ ತಮ್ಮ ವಿದ್ವತ್‌ಪೂರ್ಣವಾದ ನೂರಾರು ಪ್ರಬಂಧಗಳನ್ನು ಮಂಡಿಸಿದ್ದಾರೆ.

ಗ್ರಾಹಕ ರಕ್ಷಣೆ ಕ್ಷೇತ್ರದಲ್ಲಿನ ಅವರ ಪರಿಣತಿಯನ್ನು ಗುರುತಿಸಿ ಅವರನ್ನು ಹಲವಾರು ಪ್ರತಿಷ್ಠಿತ ಸಂಸ್ಥೆಗಳ ಸಮಿತಿಗಳಿಗೆ ಆಯ್ಕೆ ಮಾಡಿದ್ದಾರೆ. IRDA ನೇಮಿಸಿದ ಹಲವು ವಿಶೇಷ ಸಮಿತಿಗಳಿಗೆ, ಎಲ್.ಐ.ಸಿ. ಬೋರ್ಡಿನ ಸಲಹಾ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. Bureau of Indian Standardsನ ಕಾರ್ಯಕಾರಿ ಸಮಿತಿಯ ಸದಸ್ಯೆಯಾಗಿ 6 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ.

ಪ್ರಸ್ತುತ ಪುಷ್ಪಾ ಅವರು ಅಮೇರಿಕಾದ "Consumer Advisory Council" ಸದಸ್ಯೆಯಾಗಿ ಹಾಗೂ ರೋಗಿಗಳ ಸುರಕ್ಷತೆಗಾಗಿ ಆರೋಗ್ಯ ಸಚಿವಾಲಯದ ಸಮಿತಿಯ ಸದಸ್ಯೆಯಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ.

ಇವರ ಗಣನೀಯ ಸೇವೆಗಾಗಿ ಹಲವಾರು ಪ್ರಶಸ್ತಿ, ಪುರಸ್ಕಾರಗಳು ಲಭಿಸಿವೆ. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಎಂ.ಆರ್.ಪೈ ಸ್ಮಾರಕ ಪ್ರಶಸ್ತಿ, ಚಮೇಲಿದೇವಿ ಜೈನ್ ಪ್ರಶಸ್ತಿ, American Society of Newspaper Editor ನ ಫೆಲೋಶಿಪ್, ಭಾರತ ಮಾಧ್ಯಮ ಪ್ರಶಸ್ತಿ, ಗ್ರಾಹಕ ವ್ಯವಹಾರಗಳ ಸಚಿವಾಲಯದ ರಾಷ್ಟ್ರೀಯ ಪುರಸ್ಕಾರ ಮೊದಲಾದವನ್ನು ಪಡೆದಿದ್ದಾರೆ.

ಪುಷ್ಪಾ ಅವರ ಪತಿ ಎ.ಸೂರ್ಯಪ್ರಕಾಶ್ ಅವರೂ ಕೂಡ ಖ್ಯಾತ ಲೇಖಕ ಹಾಗೂ ಪತ್ರಕರ್ತ. ಹಾಸನ ಜಿಲ್ಲೆಯ ಅರಕಲಗೂಡಿನವರಾದ ಸೂರ್ಯಪ್ರಕಾಶ್ ಅವರು Indian Politics & Constitutional and Parliamentary issues ಕ್ಷೇತ್ರದಲ್ಲಿ ಪರಿಣತರು. ಅವರು ಮಾಧ್ಯಮ ಕಾನೂನು ಬಗ್ಗೆ ಪಯನಿಯರ್ ಮೀಡಿಯಾ ಸ್ಕೂಲ್‌ನಲ್ಲಿ ಕಲಿಸುತ್ತಿದ್ದಾರೆ.

❑ ಉಷಾ ಭರತಾದ್ರಿ


**Saujanya Printing Press**

**A HOUSE OF QUALITY PRINTING**

**D-47, Okhla Industrial Area, Phase-I,**
**New Delhi - 110 020**
**Phone : 40520770, 26815778**
**Mobile : 9811104398, 9811604398**
**e-mail : saujanyapp2010@gmail.com / hpgp2006@gmail.com**

**ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ**
**ಬಹುವರ್ಣದ ಸುಸಜ್ಜಿತ ಮುದ್ರಣಾಲಯ**

**ಸೌಜನ್ಯ ಪ್ರಿಂಟಿಂಗ್ ಪ್ರೆಸ್** ಮತ್ತು **ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್**

ನಾವು ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು, ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡುತ್ತೇವೆ.

ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು, ಬೈಂಡಿಂಗ್ ಕೆಲಸಗಳಿಗಾಗಿ ನಮ್ಮನ್ನು ದಯವಿಟ್ಟು ಸಂಪರ್ಕಿಸಿರಿ.

**ಮುದ್ರಣವೂ ಒಂದು ಕಲೆ, ಅದುವೇ ನಮ್ಮ ನೆಲೆ**

# ಸಂಘ ಶಕ್ತಿ




ಮಾರ್ಚ್ 31, ದೇಶದಲ್ಲೆಲ್ಲಾ ಮಹತ್ವದ ದಿನ. ಹಣಕಾಸು ವರ್ಷದ ಕೊನೆಯ ದಿನ. ಎಲ್ಲೆಲ್ಲೂ ಕ್ಲೋಸಿಂಗ್‌ಗಳು. ಬ್ಯಾಲೆನ್ಸ್ ಟ್ಯಾಲಿ ಮಾಡೋದು ತೆರಿಗೆ ಪಾವತಿಸೋದು... ಎಲ್ಲಕ್ಕೂ ಕೊನೆಯ ದಿನ. ಆದರೆ ದೆಹಲಿ ಕರ್ನಾಟಕ ಸಂಘಕ್ಕೆ ಹೊಸ ಯುಗದ ಉಗಮ. ಸಂಘದ ಸಂವಿಧಾನದ ಸಮಗ್ರ ತಿದ್ದುಪಡಿಗಾಗಿ, ಸರ್ವಸದಸ್ಯರ ಸಭೆ, ತಕರಾರು ಹಾಗು ಸಮ್ಮತ–ಒಮ್ಮತ ಚರ್ಚೆಯ ದಿನ. ದಿನದ ಕೊನೆಯಲ್ಲಿ ಸಭೆಗೆ ಬಂದಿದ್ದ ಪ್ರತಿಯೊಬ್ಬರೂ ನೆಮ್ಮದಿಯಿಂದ ಹಾಗೂ ಸಾರ್ಥಕ್ಯ ಭಾವದಿಂದ ಮನೆಗೆ ಹೋದ ದಿನ.

ಸಂಘದ ಸಂವಿಧಾನ ತಿದ್ದುಪಡಿ ಆಗಿದ್ದುದು ಸೆಪ್ಟಂಬರ್ 1990ರಲ್ಲಿ. ಅಲ್ಲಿಂದ ಇಲ್ಲಿ ತನಕ ಸಾಕಷ್ಟು ಬೆಳವಣಿಗೆಗಳಾಗಿವೆ. ವಸ್ತು ಸ್ಥಿತಿ ಬದಲಾಗಿದೆ. ಸಂಘ ಬೃಹತ್ತಾಗಿ ಬೆಳೆದಿದೆ. ಬೆಳೆದಂತೆ ನಿಯಮ ಬದಲಾಗುತ್ತದೆ. ಪುಟ್ಟ ಮಗುವಿನ ಡ್ರೆಸ್ ಕೋಡ್ ಬೇರೆ, ಬೆಳೆದು ದೊಡ್ಡವರಾದಾಗಿನ ಡ್ರೆಸ್ ಕೋಡ್ ಬೇರೆ! ಸಂಸ್ಥೆಯೊಂದರ ಅವಧಿಯಲ್ಲೂ ಅದೇ ರೀತಿಯ ಬದಲಾವಣೆಗಳನ್ನು ಮಾಡಬೇಕಾಗುತ್ತದೆ. ಆದರೆ ಧ್ಯೇಯ ಧೋರಣೆಯಲ್ಲಿ ಬದಲಾವಣೆ ಇಲ್ಲ. ಧ್ಯೇಯೋದ್ದೇಶಕ್ಕಾಗಿ ಸಂಘ ಮುಂದುವರಿಯುವ ರೀತಿ, ಅದಕ್ಕೆ ಬರಬಹುದಾದ ತೊಂದರೆಗಳನ್ನು ಪರಿಗಣಿಸಿ, ಸಂಘದ ನಿಯಮಾವಳಿಗಳಲ್ಲಿ ಸಾಕಷ್ಟು ತಿದ್ದುಪಡಿಯನ್ನು ಮಾಡಿದ ಹಾಗೂ ಆ ಸಭೆಯಲ್ಲಿ ಭಾಗವಹಿಸಿದ ಪ್ರತಿಯೊಬ್ಬರೂ ಹೆಮ್ಮೆ ಪಡುವ ದಿನ 31 ಮಾರ್ಚ್ 2013.

ಡಾ.ವೆಂಕಟಾಚಲ ಹೆಗಡೆಯವರ ತಂಡ ತಿದ್ದುಪಡಿಗಳಾಗಬೇಕಾದ್ದನ್ನು ಮಂಡಿಸಿದ್ದು ಮಾತ್ರ. ಪ್ರಸ್ತುತ ಕಾರ್ಯಕಾರಿ ಸಮಿತಿಯ ಅವಧಿ ಮುಗಿದಿದೆ ಎಂಬುದು ಕೆಲವರ ವಾದವಾಗಿತ್ತು., ಸಂವಿಧಾನ ತಿದ್ದುಪಡಿಯನ್ನು ಮುಂದಿನ ಸಮಿತಿ ಮಾಡಲಿ ಎಂಬ ವಾದವನ್ನು ಮಂಡಿಸಿದ್ದರು. ಆದರೆ ತಿದ್ದುಪಡಿ ಮಾಡುವುದು ಸಮಿತಿಯಲ್ಲವಲ್ಲ! ತಿದ್ದುಪಡಿ ಮಾಡುವುದು ಸರ್ವ ಸದಸ್ಯರ ಸಭೆ ಎಂಬ ಅರಿವನ್ನು ಮೂಡಿಸಿದವರು ಹಿರಿಯ ನ್ಯಾಯವಾದಿ ಶ್ರೀ ಕೆ.ಎನ್.ಭಟ್‌ರವರು.

ಸಭೆಯ ಪ್ರಾರಂಭದ ಬಿಗುತನ ಮಧ್ಯಾಹ್ನದ ನಂತರ ಮಾಯವಾಗಿತ್ತು. ಏಕೆಂದರೆ, ಉದ್ದೇಶ ಒಳ್ಳೆಯದು ಎಂಬ ಅರಿವು ಎಲ್ಲರಲ್ಲೂ ಮೂಡಿತ್ತು. ಪಟ್ಟಭದ್ರ ಹಿತಾಸಕ್ತಿಗಳ ಪಿತೂರಿ ಏನಾದರೂ ಇದೆಯೇ ಎಂದು ಕೂಲಂಕುಷವಾಗಿ ಪರಿಶೀಲಿಸಲು ಬಂದವರೂ ಸಹ, ಅದರ ಹಿಂದಿನ ಉದ್ದೇಶ ಹಾಗು ಮಂಡನೆಯ ವೈಖರಿಯಿಂದ ಸಂತುಷ್ಟರಾಗಿದ್ದರು. ಅಧ್ಯಕ್ಷ ಡಾ.ವೆಂಕಟಾಚಲ ಹೆಗಡೆ ಹಾಗೂ ಸಂವಿಧಾನ ತಿದ್ದುಪಡಿ ಸಮಿತಿಯ ಅಧ್ಯಕ್ಷ ಶ್ರೀ ಆರ್.ಭರತಾದ್ರಿಯವರ ನೇತೃತ್ವದಲ್ಲಿ ಸಂವಿಧಾನ ತಿದ್ದುಪಡಿಯ ಮೊದಲ ವಿಶೇಷ ಸರ್ವ ಸದಸ್ಯರ ಸಭೆ ಸುಖಾಂತ್ಯಗೊಂಡಿದೆ.

ಸದಸ್ಯತ್ವ ಶುಲ್ಕ ಹೆಚ್ಚಳ, ಸದಸ್ಯತ್ವ ಪಡೆಯುವ ವಿಧಿವಿಧಾನ, ಚುನಾವಣೆಯಲ್ಲಿ ಸ್ಪರ್ಧಿಸುವ ಅರ್ಹತೆ, ಹಣಕಾಸು ವಿಷಯಗಳಲ್ಲಿ ಅನುಸರಿಸಬೇಕಾದ ನೀತಿ–ನಿಯಮಾವಳಿಗಳು, ಹಣಕಾಸು, ನಿಯಂತ್ರಣ ಹಾಗೂ ಜವಾಬ್ದಾರಿ ಕುರಿತಂತೆ ಹಾಗೂ ಕಾವಲು ಸಮಿತಿಗೆ ಸಂವೈಧಾನಿಕ ತಳಹದಿ ಇವೇ ಮುಂತಾದ ವಿಷಯಗಳನ್ನು ಒಳಗೊಂಡಂತೆ ಸಂವಿಧಾನದ ಸಮಗ್ರ ತಿದ್ದುಪಡಿ ನಡೆಯಿತು. ಮೇ ಮೊದಲ ವಾರದಲ್ಲಿ ಇನ್ನೊಂದು ವಿಶೇಷ ಸರ್ವಸದಸ್ಯರ ಸಭೆ ನಡೆಯಲಿದೆ. ಕಳೆದ ಬಾರಿಯ ಸಭೆಯ ನಡವಳಿಕೆಯನ್ನು ಅನುಮೋದಿಸುವುದರ ಜೊತೆಗೆ, ತಿದ್ದುಪಡಿಯ ಭಾಷೆಯ ಬಗ್ಗೆ ಮತ್ತೊಮ್ಮೆ ಗಮನ ಹರಿಸಿ, ಸಾಧ್ಯವಾದಷ್ಟು ಕಡೆ ಸ್ಪಷ್ಟತೆ ತರುವ ಕೆಲಸವಾಗಬೇಕಾಗಿದೆ.

ಅಧ್ಯಕ್ಷರೇ ತಿಳಿಸಿದಂತೆ, ಸೆಪ್ಟಂಬರ್ ಮುಂಚಿತವಾಗಿ ಚುನಾವಣೆಗಳು ಮುಗಿದು ಹೋಗಿ ಹೊಸ ಸಮಿತಿ ಅಸ್ತಿತ್ವಕ್ಕೆ ಬರಲಿದೆ.

ಇನ್ನು ಮೂರೇ ತಿಂಗಳುಗಳಲ್ಲಿ ಸಂಘದ ಎಲ್ಲಾ ಸಾಲ–ಸೋಲಗಳೂ ಮುಗಿಯುವ ಹಿನ್ನೆಲೆಯಲ್ಲಿ ಈ ತಿದ್ದುಪಡಿಗೆ ವಿಶೇಷ ಮಹತ್ವ ಬಂದಿದೆ. ಹಾಗೂ ದೆಹಲಿ ಕರ್ನಾಟಕ ಸಂಘ ತನ್ನ ಧ್ಯೇಯ ಧೋರಣೆಗಳಿಗಾಗಿ ಮುಂದುವರಿಯುವ ಹಾದಿ ಸುಗಮವಾಗಿದೆ. ಸಂಘಕ್ಕೆ ಹೆಚ್ಚಿನ ಶಕ್ತಿ ಬಂದಿದೆ. ಕೊನೆಗೊಂದು ಮಾತು. ಜಾಗತೀಕರಣದ ಪ್ರಭಾವ ನಮ್ಮ ದೇಶದ ಮೇಲೆ ಬೀಳುವುದರೊಂದಿಗೆ, ನಾವೂ ಸಹ ಪಾಶ್ಚಾತ್ಯರ ದಿಕ್ಕಿನಲ್ಲಿ ಸಾಗುತ್ತಿದ್ದೇವೆ. ಮೌಲ್ಯಗಳು, ಸವಾಲುಗಳು, ಸವಲತ್ತುಗಳು ಹಾಗೂ ಸಾಮಾಜಿಕ ಬದಲಾವಣೆಗಳ ಹೆಸರಲ್ಲಿ ಕೊನೆಗೂ ಸೊರಗುವುದು ವೃದ್ಧರು, ಮತ್ತು ಮಕ್ಕಳು. ಆದ್ದರಿಂದಲೇ, ದೆಹಲಿ ಅಥವಾ ಅದರ ಆಸುಪಾಸಿನಲ್ಲಿ ವೃದ್ಧರಿಗಾಗಿ ಒಂದು ಆಶ್ರಮ, ಮನೆ, ಆಧ್ಯಾತ್ಮಿಕ ಚಟುವಟಿಕೆಗಳಿಗಾಗಿ ಸೌಕರ್ಯಗಳು, ಆರೋಗ್ಯ ಸವಲತ್ತುಗಳು, ಮನೋರಂಜನೆ ಇತ್ಯಾದಿ ಸೌಲಭ್ಯಗಳಿರುವಂತಹ ಒಂದು ಯೋಜನೆಯ ಬಗ್ಗೆ ಚಿಂತಿಸುವ ಸಮಯ ಇದು. ಸಂಘದ ಸಾಲ ಸೋಲಗಳೆಲ್ಲ ಮುಗಿದಿವೆ. ವರ್ಷಕ್ಕೆ ಏನಿಲ್ಲವೆಂದರೂ ಒಂದು ಕೋಟಿ ರೂಪಾಯಿಗಳ ಆದಾಯ ಬರಲಿದೆ. ಸಾಂಸ್ಕೃತಿಕ ಕಾರ್ಯಕ್ರಮಗಳು ಸಾಕಷ್ಟು ನಡೆಯುತ್ತಿವೆ. ಆದರೆ, ನಮ್ಮ ಸಾಮಾಜಿಕ ಜವಾಬ್ದಾರಿಯನ್ನು ಪರಿಗಣಿಸಿ, ದೆಹಲಿ ಅಥವಾ ಆಸುಪಾಸಿನಲ್ಲಿ ಒಂದು ವೃದ್ಧಾಶ್ರಮವನ್ನು ಕಟ್ಟಿದರೆ, ದೆಹಲಿಯಲ್ಲಿರುವ ಅನೇಕ ದಶಕಗಳಿಂದ ಬಂದ ಹಿರಿಯರಿಗೆ ಅನುಕೂಲವಾಗಬಹುದು. ಸಂಘ ಒಂದು ಅರ್ಥಪೂರ್ಣ ಚಟುವಟಿಕೆಯಲ್ಲಿ ತೊಡಗಿ ಮತ್ತೊಮ್ಮೆ ಎಲ್ಲಾ ಸಂಘ ಸಂಸ್ಥೆಗಳಿಗೆ ಆದರ್ಶಪ್ರಾಯವಾಗಬಹುದು. ಸಂಘಕ್ಕೆ ಶಕ್ತಿಯಿದೆ. ಸಾಂಸ್ಕೃತಿಕ, ಸಾಹಿತ್ಯಿಕ ಚಟುವಟಿಕೆಗಳನ್ನು ಸಂಘ ಸಾಕಷ್ಟು ನಡೆಸುತ್ತಿದೆ, ಇನ್ನು ಕೆಲವೊಂದು ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಬಹುದಾಗಿದೆ. ದೂರದೃಷ್ಟಿ ಬೇಕು ಅಷ್ಟೆ. ಎಷ್ಟಾದರೂ ಕಲಿಯುಗದಲ್ಲಿ 'ಸಂಘ ಶಕ್ತಿ'ಯೇ ಮೇಲು ಅಲ್ಲವೇ?

❑ ಸರವು ಕೃಷ್ಣ ಭಟ್





# ಕಾಯಕ ಯೋಗದ ನೇತಾರ ದಾಸಿಮಯ್ಯ

**ಏಪ್ರಿಲ್ 15ರಂದು ದೇವರ ದಾಸಿಮಯ್ಯ ಅವರ ಜಯಂತಿ. ಈ ಸಂದರ್ಭದಲ್ಲಿ ಇಂತಹ ಮಹಾನ್ ವ್ಯಕ್ತಿಗಳ ಪುನರಾವಲೋಕನ ಅತ್ಯಗತ್ಯ...**



ಕಾಯಕ ಯೋಗದ ದರ್ಶನವನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿದ ಜನಸಾಮಾನ್ಯರ ನಡುವಿನ ಮೊದಲ ಮಹಾನ್ ಸಂತ ದೇವರ ದಾಸಿಮಯ್ಯ. ಮುದನೂರಿನಲ್ಲಿ ಜನಿಸಿದ ಈ ಕಾಯಕಯೋಗಿಯದು. ಇಂದಿನ ಸಂದರ್ಭದಲ್ಲಿ ನೆನೆಯಲೇಬೇಕಾದ ವ್ಯಕ್ತಿತ್ವ.

ದೇವರ ದಾಸಿಮಯ್ಯ ಭಾರತದ ಸಾಂಸ್ಕೃತಿಕ ಮತ್ತು ಧಾರ್ಮಿಕ ಇತಿಹಾಸದ ಆಕಾಶದ ಅತ್ಯಂತ ಪ್ರಕಾಶಮಾನವಾದ ನಕ್ಷತ್ರ. ಕರ್ನಾಟಕದ ಚರಿತ್ರೆಯಲ್ಲಿ ಮಾದಾರ ಚನ್ನಯ್ಯನ ಹಾಗೆ ದಾಸಿಮಯ್ಯನೂ ಶಿವಶರಣ ಸಂಸ್ಕೃತಿಯ ಮೊಟ್ಟ ಮೊದಲ ರೂವಾರಿ. ಹನ್ನೆರಡನೆ ಶತಮಾನದ ನಂತರ ಕನ್ನಡ ನುಡಿಗಟ್ಟನ್ನು ಗಾಢವಾಗಿ ಪ್ರಭಾವಿಸಿದ ವಚನವೆಂಬ ಉಕ್ತಿಕ್ರಮದ ಪ್ರವರ್ತಕ. ವಿಶ್ವದ ಇತಿಹಾಸದಲ್ಲೇ ಅಪರೂಪವಾದ ಕಾಯಕ ಯೋಗದ ನೇಕಾರ.

ಹನ್ನೆರಡನೆ ಶತವಮಾನದ ಹಲವು ವಚನಕಾರರಿಂದ ಕೀರ್ತಿತನಾದ ಬಸವಣ್ಣನಿಂದ ಕೀರ್ತಿತನಾಗಿದ್ದಾನೆ ದಾಸಿಮಯ್ಯ. ಸಿದ್ಧರಾಮ ಮತ್ತು ಸಕಲೇಶ ಮಾದರಸರೂ ಆತನನ್ನು ಸ್ಮರಿಸಿದ್ದಾರೆ.

ಆದರೆ ದಾಸಿಮಯ್ಯನ ಬದುಕಿನ ಬಗೆಗಿನ ಐತಿಹಾಸಿಕ ವಿವರಗಳು ತೀರಾ ಕಡಿಮೆ. ಈಗಿನ ಗುಲ್ಬರ್ಗ ಜಿಲ್ಲೆಯ ಸುರಪುರ ತಾಲೂಕಿನ ಮುದನೂರು ಆತನ ಹುಟ್ಟೂರು

ಅಂದಿನ ಕಾಲದಲ್ಲಿ ಅದು ಬಹು ದೊಡ್ಡ ಧಾರ್ಮಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಆಗುಹೋಗುಗಳ ನೆಲೆಯಾಗಿರಲಿಕ್ಕೆ ಸಾಕು. ನೀರಿನ ಬುಗ್ಗೆಗಳು ಅಧಿಕ ಸಂಖ್ಯೆಯಲ್ಲಿದ್ದ ಕಾರಣ ಮುದಿನೀರು ಎಂದು ಹೆಸರುಗೊಂಡು ಮುಂದೆ ಮುದನೂರಾಗಿ ಬದಲಾಗಿರಬಹುದು. ನೇಕಾರರ ಕುಟುಂಬದಲ್ಲಿ ಹುಟ್ಟಿದ ದಾಸಿಮಯ್ಯ ಆ ಕಾಯಕವನ್ನೇ ಮುಂದುವರಿಸಿರಬೇಕು.

ಆ ಊರಿನ ಪ್ರಸಿದ್ಧ ದೇವಸ್ಥಾನ ರಾಮನಾಥನಿಗೆ ಮೀಸಲು. ಆ ರಾಮನಾಥ ದಾಸಿಮಯ್ಯನ ವಚನಗಳ ಅಂಕಿತದವನಾಗಿದ್ದಾನೆ. ವೈವಾಹಿಕ ಜೀವನ ದಾಸಿಮಯ್ಯನ ಬದುಕಿನ ಮುಖ್ಯ ಭಾಗ. ಆತನ ಭಕ್ತಿ ಹೆಣ್ಣನ್ನು ಮಾಯೆಯೆಂದು ಕರೆಯುವ ಗಂಡುಭಕ್ತಿಯಲ್ಲ. ಅಥವಾ ಗಂಡನನ್ನು ತೊರೆಯಿಸುವ ಹೆಣ್ಣು ಭಕ್ತಿಯೂ ಅಲ್ಲ.

ಅದು ಸತಿಪತಿಗಳೊಂದಾದ ಭಕ್ತಿ. ಆತನ ಹೆಂಡತಿ ದುಗ್ಗಳೆ ಇಚ್ಛೆಯನರಿತ ಸತಿ. ಜೈನ ಮತಾನುಯಾಯಿಯಾಗಿದ್ದ ಚಾಲುಕ್ಯ ದೊರೆ ಜಯಸಿಂಹನ ರಾಣಿ ಸುಗ್ಗಳೆಗೆ ನೇಕಾರ ಕುಲದ ದಾಸಿಮಯ್ಯ ಗುರುವಾದದ್ದು ಮೀರಾಳಿಗೆ ಚಮ್ಮಾರ ಕುಲದ ರಾಯ್ ದಾಸ ಗುರುವಾದ ಘಟನೆಯಷ್ಟೇ ವಿಶಿಷ್ಟ. ತನ್ನ ಕಾಯಕ ಭಕ್ತಿಯನ್ನು ಬದುಕುವುದಲ್ಲದೆ ದಾಸಿಮಯ್ಯ ಇತರ ಮತಾನುಯಾಯಿಗಳ ಜೊತೆ ವಾದ ಮಾಡಿ ತನ್ನ ದರ್ಶನವನ್ನು ಸಮರ್ಥಿಸಿಕೊಳ್ಳುವ ಪುರಾವೆಗಳು ಆತನ ರಚನೆಗಳಲ್ಲಿವೆ.

ದಾಸಿಮಯ್ಯನ ಬಗ್ಗೆ ಆ ನಂತರದಲ್ಲಿ ರಚನೆಯಾದ ಪುರಾಣಗಳು ಆತನ ಖ್ಯಾತಿಯ ಪ್ರತೀಕ. ದೇವಾಂಗ ಪುರಾಣ ಆತನನ್ನು ನೇಕಾರ ಋಷಿ ದೇವಲ ಮಹರ್ಷಿಯ ಏಳನೇ ಗುರುವೆಂದು ಕೀರ್ತಿಸಿದೆ. ದಾಸಿಮಯ್ಯನ ಕುರಿತ ಪುರಾಣಗಳಲ್ಲಿ ಮೂರು ಘಟನೆಗಳಿಗೆ ವಿಶೇಷವಾದ ಒತ್ತು ಸಿಕ್ಕಿದೆ.

ಒಂದು ಆತನ ಮದುವೆಯನ್ನು ಕುರಿತದ್ದು. ತನಗೆ ತಕ್ಕ ಹೆಣ್ಣನ್ನು ಹುಡುಕುವಾಗ ದಾಸಿಮಯ್ಯ ಒಂದು ವಿಚಿತ್ರ ಪರೀಕ್ಷೆಯನ್ನು ಏರ್ಪಡಿಸುತ್ತಾನೆ. ಸೌದೆ ಮತ್ತು ನೀರನ್ನು ಬಳಸದೆ ಪಾಯಸ ಮಾಡುವಾಕೆಯನ್ನು ಮದುವೆಯಾಗುವುದಾಗಿ ಘೋಷಿಸುತ್ತಾನೆ. ಈ ಪರೀಕ್ಷೆಯನ್ನು ಗೆದ್ದುಕೊಂಡ ದುಗ್ಗಳೆಯನ್ನು ಕೈಹಿಡಿಯುತ್ತಾನೆ.

ಎರಡನೆಯದು ತವನಿಧಿಯನ್ನು ಕುರಿತದ್ದು. ಅತ್ಯದ್ಭುತವಾಗಿ ತಾನೇ ನೇಯ್ದ ಬಟ್ಟೆಯನ್ನು ಒಮ್ಮೆ ಸಂತೆಗೆ ಮಾರಲು ಒಯ್ಯುತ್ತಾನೆ. ಅಲ್ಲೊಬ್ಬ ಚಳಿಯಲ್ಲಿ ಗಡಗಡ ನಡುಗುತ್ತಿರುವ ಜಂಗಮ ಬರುತ್ತಾನೆ. ದಾಸಿಮಯ್ಯ ಭೂತದಯೆಯಿಂದ ಆ ಬಟ್ಟೆಯನ್ನು ಅವನಿಗೆ ಹೊದಿಸಲಾಗಿ ಜಂಗಮ ಅದನ್ನು ಹರಿದು ಹಾಕುತ್ತಾನೆ. ಇಷ್ಟಾದರೂ ಸಿಟ್ಟಾಗದೆ ಆತನನ್ನು ಮನೆಗೊಯ್ದು ಉಣಬಡಿಸಿದಾಗ ಜಂಗಮ ಖುಷಿಯಾಗಿ ದಾಸಿಮಯ್ಯನಿಗೆ ತವನಿಧಿಯನ್ನು ನೀಡುತ್ತಾನೆ. ಆ ನಂತರದಲ್ಲಿ ಆ ತವನಿಧಿಯಿಂದ ದಾಸಿಮಯ್ಯ ಶಿವಭಕ್ತರನ್ನು ತಣಿಸತೊಡಗುತ್ತಾನೆ, ಆದರೆ ಒಮ್ಮೆ ಅವನ ಮನಸಿನಲ್ಲಿ ಗರ್ವ ಮೂಡಿದಾಗ ಶಂಕರ ದಾಸಿಮಯ್ಯ ಅದನ್ನು ಮಾಯಮಾಡಿ, ಗರ್ವ ಇಳಿದಾಗ ದಾಸಿಮಯ್ಯನಿಗೆ ಅದನ್ನು ಮರಳಿಸುತ್ತಾನೆ.

ಮೂರನೆಯದು ರಾಣಿ ಸುಗ್ಗಳೆಯ ಮತಾಂತರಕ್ಕೆ ಸಂಬಂಧಿಸಿದ್ದು. ದಾಸಿಮಯ್ಯನ ಬಗ್ಗೆ ಇನ್ನೊಂದು ವಿವಾದವಿದೆ. ಆತನ ಹೆಸರು ದೇವರ ದಾಸಿಮಯ್ಯನೊ ಅಥವಾ ಜೇಡರ ದಾಸಿಮಯ್ಯನೊ? ಈ ಎರಡು ಹೆಸರುಗಳು ಒಬ್ಬನದೊ ಇಬ್ಬರವೊ? ಈ ಬಗ್ಗೆ ಚರ್ಚೆಯಿದೆ. ಆದರೆ ಡಿ.ಎಲ್. ನರಸಿಂಹಾಚಾರ್ ಮತ್ತು ಕೆ.ಜಿ. ನಾಗರಾಜಪ್ಪನವರು ಈ ಎರಡೂ ಹೆಸರುಗಳು ಒಬ್ಬನವೇ ಎಂದು ಸಮರ್ಥವಾಗಿ ವಾದಿಸಿದ್ದಾರೆ.

ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ದೇವರ ದಾಸಿಮಯ್ಯ ವಚನ ಪರಂಪರೆಗೆ ತಳಹದಿ ನಿರ್ಮಿಸಿದನೆಂಬುದು ಬಹುಮಟ್ಟಿಗೆ ಸರ್ವಸಮ್ಮತ. ಆದರೆ ಇಡೀ ಭಾರತೀಯ ಇತಿಹಾಸಕ್ಕೆ ಆತ ನೀಡಿದ ಕಾಣಿಕೆ ಮಹತ್ತರವಾದುದು. ಈ ಬಗ್ಗೆ ಸಾಕಷ್ಟು ಗಮನ ಹರಿದಿಲ್ಲ. ಚರ್ಚೆ ನಡೆದಿಲ್ಲ.

ಹಿಂದಿಯ ಮಾರ್ಕ್ಸ್‌ವಾದಿ ವಿದ್ವಾಂಸ ಮೆನೆಜರ್ ಪಾಂಡೆ ಅವರ ಪ್ರಕಾರ ಆಧುನಿಕಪೂರ್ವ ಭಾರತದ ಏಕಮಾತ್ರ ರಾಷ್ಟ್ರವ್ಯಾಪಿ ಸಾಮಾಜಿಕ ಆಂದೋಲನವೆಂದರೆ ಭಕ್ತಿ ಚಳವಳಿ. ಅದು ಸುರುವಾದದ್ದು ತಮಿಳುನಾಡಿನಲ್ಲಿ. ಆರನೆ ಶತಮಾನದ ಸುಮಾರಿಗೆ. ಮುಂದೆ ಅದು ದೇಶದ ನಾನಾ ಭಾಗಗಳಲ್ಲಿ ಹತ್ತೊಂಬತ್ತನೆ ಶತಮಾನದವರೆಗೆ ವ್ಯಾಪಿಸುತ್ತಾ ಆಯಾ ಪ್ರದೇಶಗಳ, ಕಾಲಗಳ ಅನುಸಾರ ಬೇರೆ ಬೇರೆ ರೂಪಗಳನ್ನು ತಾಳುತ್ತಾ ಹೋಯಿತು. ಆಯಾ ಭಾಷೆ, ಸಂಸ್ಕೃತಿ, ಸಮಾಜ, ಸಾಹಿತ್ಯಗಳನ್ನು ಬುಡ ಮಟ್ಟ ಬದಲಾಯಿಸುತ್ತಾ ಹೋಯಿತು.

ಹೊಸ ಭಾಷೆ–ಸಾಹಿತ್ಯಗಳನ್ನು ಉದ್ಘಾಟಿಸಿತು. ಕಲೆಗಳನ್ನು ನವೀಕರಿಸಿ ಜನಮುಖಿಯಾಗಿಸಿತು. ಈ ನೆಲದ ಶಾಪವಾದ ಜಾತಿ–ಕುಲಗಳ ಕಟ್ಟನ್ನು ಸಡಿಲಗೊಳಿಸಿ ಕೆಳ ಜಾತಿವರ್ಗಗಳನ್ನು ಸಬಲಗೊಳಿಸಿತು. ಗಂಡಾಳಿಕೆಯನ್ನು ಅಲ್ಲಾಡಿಸಿ ಹೆಂಗಸರ ಆತ್ಮವಿಶ್ವಾಸವನ್ನು ಹೆಚ್ಚಿಸಿತು. ಶಿಷ್ಟ ಮತ್ತು ಪರಿಶಿಷ್ಟ ಸಮುದಾಯಗಳ ಕಂದಾಚಾರಗಳನ್ನು ಖಂಡತುಂಡವಾಗಿ ಖಂಡಿಸಿ ಸರ್ವರಿಗೂ ಎಟಕುವ ಸರಳಮಾರ್ಗವನ್ನು ಜನಪ್ರಿಯಗೊಳಿಸಿತು. ಹೀಗೆ ನಾನಾ ಜಾಗಗಳಲ್ಲಿ ನಾನಾ ವಿಧದ ವಿಮೋಚನೆ ತಂದ ಭಕ್ತಿಮಾರ್ಗದಲ್ಲಿ ಮುಖ್ಯವಾಗಿ ಎರಡು ಪ್ರಕಾರಗಳು: ಸಗುಣ ಭಕ್ತಿ ಮತ್ತು ನಿರ್ಗುಣ ಭಕ್ತಿ.

ಸಗುಣ ಭಕ್ತಿ ದೇವರಿಗೆ ನಾಮರೂಪಗಳನ್ನು ಕೊಟ್ಟು, ಇಂದ್ರಿಯಗ್ರಾಹ್ಯ ಮೂರ್ತಿರೂಪದಲ್ಲಿ ಭಕ್ತಿಯನ್ನು ಅನುಸಂಧಾನ ಮಾಡುತ್ತದೆ, ತಮಿಳುನಾಡಿನ ಶೈವ ಹಾಗೂ ವೈಷ್ಣವ ಭಕ್ತಿಪಂಥಗಳು ಈ ಬಗೆಯವು. ಕರ್ನಾಟಕದ ಹರಿದಾಸ ಪಂಥವೂ ಇಂಥದು. ಸಗುಣ ಪರಂಪರೆಗೆ ದೇವಸ್ಥಾನ ಕೇಂದ್ರ. ನಿರ್ಗುಣ ಪಂಥಗಳಲ್ಲಿ ದೇಹವೇ ದೇಗುಲ. ಅಲ್ಲಿರುವ ದೇವರಿಗೆ ಕಣ್ಣಿಗೆ ಕಾಣುವ ರೂಪ ರಂಗುಗಳಿಲ್ಲ. ಕರ್ನಾಟಕದ ಶರಣ ಪಂಥ, ಕಾಶ್ಮೀರದ ಶೈವ, ಕಬೀರ ಪಂಥ, ಸಿಖ್ ಪಂಥ ಈ ಬಗೆಯವು.

ಇನ್ನು ಮಹಾರಾಷ್ಟ್ರದ ವಾರ್ಕರಿ ಪಂಥ, ಈಶಾನ್ಯದ ವೈಷ್ಣವ ಪಂಥಗಳು ಸಗುಣ–ನಿರ್ಗುಣಗಳ ಮಿಶ್ರಣ. ಸಗುಣದ ಉಗಮ ಕೃಷಿಮೂಲ ಸಮಾಜಗಳಲ್ಲಿ. ನಿರ್ಗುಣದ ಹುಟ್ಟು ಬಹುಮಟ್ಟಿಗೆ ನಗರಗಳ ಕರಕುಶಲವರ್ಗದ ನಡುವೆ. ಕಾಯಕವೇ ಕೈಲಾಸವೆಂದ ಶಿವಶರಣರ ಮತ್ತು ಉತ್ತರದ ಕಬೀರಪಂಥ ಕಸುಬುದಾರ ಸಂಸ್ಕೃತಿಗಳ ಕೊಡುಗೆ.

ತಮಿಳುನಾಡು ಆರು–ಏಳನೆ ಶತಮಾನಗಳಲ್ಲಿ ಸಗುಣಭಕ್ತಿಯ ತವರಾದರೆ, ಹನ್ನೊಂದು ಹನ್ನೆರಡನೆ ಶತಮಾನದಲ್ಲಿ ಕರ್ನಾಟಕ ನಿರ್ಗುಣ ಭಕ್ತಿಯ ಜನ್ಮಸ್ಥಾನವಾಯಿತು. ಹನ್ನೆರಡನೆ ಶತಮಾನದ ವಚನಕಾರರಲ್ಲಿ ಬಹುತೇಕರು ಕಸುಬುದಾರರು, ಕಾಯಕಜೀವಿಗಳು. ನೇಕಾರರಾಗಲಿ, ಚಮ್ಮಾರರಾಗಲಿ, ಅಂಬಿಗರಾಗಲಿ, ಆಟದವರಾಗಲಿ, ಆಯ್ದಕ್ಕಿಯವರಾಗಲಿ, ಅವರು ತಮ್ಮ ಕಸುಬನ್ನು ಕೀಳೆಂದು ಬಗೆಯದೆ ಅದನ್ನೇ ಸಾಧನೆಯ ಮಟ್ಟಕ್ಕೇರಿಸುವವರು. ಈ ದೃಷ್ಟಿಯಲ್ಲಿ ನೋಡಿದಾಗ ದೇವರ ದಾಸಿಮಯ್ಯನಿಗೆ ಭಾರತದ ಇತಿಹಾಸದಲ್ಲೂ ದೊಡ್ಡ ಜಾಗವಿದೆ. ಆತ ಕಾಯಕಯೋಗದ ದರ್ಶನವನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿದ ಜನಸಾಮಾನ್ಯರ ನಡುವಿನ ಮೊದಲ ಮಹಾನ್ ಸಂತರಲ್ಲಿ ಪ್ರಮುಖನಾಗಿದ್ದಾನೆ. ಅಲ್ಲದೆ ನಿರ್ಗುಣ ಭಕ್ತಿಯ ಮೊದಲ ನಿರ್ಮಾತೃಗಳಲ್ಲಿ ಪ್ರಮುಖನಾಗಿ ಉತ್ತರದ ಕಬೀರ ಹಾಗೂ ಸಿಖ್ ಪಂಥಗಳ ಪೂರ್ವಸೂಚನೆಯಾಗಿದ್ದಾನೆ.

ಆತನಿಗೆ ಅರಸರ ಹಂಗಿಲ್ಲ. ಅರಸರು ನೀಡುವ ಸಿರಿಗಿಂತ ಶರಣರ ನುಡಿಯೇ ಮಿಗಿಲೆನ್ನುತ್ತಾನೆ. ಇಳೆ, ಬೆಳೆ, ಜಲಗಳು ಶಿವನ ನಿರ್ಮಿತಿಗಳೆಂಬುದನ್ನು ಮರೆತು ಅರಸರನ್ನು ಹೊಗಳಿ ಹಾಡುವ ಕವಿಗಳನ್ನು ಕುನ್ನಿಗಳೆಂದು ಜರೆಯುತ್ತಾನೆ. ಆ ಮೂಲಕ ಪ್ರಜಾಸತ್ತಾತ್ಮಕ ಮೌಲ್ಯಗಳಿಗೆ ನಾಂದಿ ಹಾಡುತ್ತಾನೆ.

ದಾಸಿಮಯ್ಯನಂಥವನಿಗೆ ಹೆಣ್ಣು–ಮಣ್ಣುಗಳು ಮಾಯೆಯಲ್ಲ, ಪೃಥ್ವಿ ಸೋಜಿಗಗಳ ಆಗರ.

*ಶರಧಿಯ ಮೇಲೆ ಧರೆಯ ಕರಗದಂತಿರಿಸಿದೆ*
*ಅಂಬರಕ್ಕೆ ಗದ್ದುಗೆ ಬೋದುಗೆ ಇಲ್ಲದಂತಿರಿಸಿದೆ*

– ಹೀಗೆಂದು ಜಗತ್ತಿನ ಬೆರಗನ್ನು ಕೊಂಡಾಡುತ್ತಾನೆ.

ಒಡಲೂ ಮಾಯೆಯಲ್ಲ. ಅವನ ಅಧ್ಯಾತ್ಮ ಹೇಡಿಯ ದಾರಿಯಲ್ಲ. ಅದು ಭೌತಿಕ ಸತ್ಯಗಳ ಗಟ್ಟಿಬುನಾದಿಯ ಮೇಲೆ ನಿಂತ ನಂಬುಗೆ. ಒಡಲುಗೊಂಡು ಆಮೇಲೆ ಮಾತಾಡು ಎಂದು ಶಿವನಿಗೇ ಸವಾಲು ಹಾಕುತ್ತಾನೆ. ಹಸಿವನ್ನು ನೀಗಿಸುವವನೇ ಅವನ ಪ್ರಪಂಚದಲ್ಲಿ ನಿಜವಾದ ಗಾರುಡಿಗ. ದಾಸಿಮಯ್ಯನ ಮಾರ್ಗದಲ್ಲಿ ಹೆಂಗಸಿಗೆ ವಿಶೇಷ ಸ್ಥಾನ. ಭಕ್ತಿಯಲ್ಲಿ ಸತಿ ಪತಿ ಇಬ್ಬರೂ ಒಂದಾಗದೆ ಹೋದಲ್ಲಿ ಅಮೃತದಲ್ಲಿ ವಿಷ ಬೆರೆಸಿದಂತೆ ಅನ್ನುತ್ತಾನೆ.

ದಾಸಿಮಯ್ಯನ ಸಮಾನತೆಯ ದರ್ಶನ ವಿಶಿಷ್ಟವಾದುದು. ಅದರ ಮೂಲ ಎಲ್ಲೆಲ್ಲಿಯೂ ಶಿವನನ್ನು ಕಂಡು ಕಾಣಿಸುವ ಅನುಭಾವದಲ್ಲಿದೆ. ಮಣಿಗಣಸೂತ್ರದಂತೆ ತ್ರಿನಯನನೇ ಸರ್ವವ್ಯಾಪಿಯಾಗಿರುವಾಗ ಗಂಡಾಳಿಕೆಯ ಗರ್ವಕ್ಕಾಗಲಿ ಜಾತಿಪ್ರತಿಷ್ಠೆಗಾಗಲಿ ಎಡೆಯಿಲ್ಲ.

*ಮಡದಿಯ ಪ್ರಾಣಕ್ಕೆ ಮೊಲೆ ಮುಡಿ ಇದ್ದಿತ್ತೆ?*
*ಒಡೆಯರ ಪ್ರಾಣಕ್ಕೆ ಇದ್ದಿತ್ತೆ ಯಜ್ಞೋಪವೀತ?*
*ಕಡೆಯಲಿದ್ದ ಅಂತ್ಯಜನು ಹಿಡಿದಿದ್ದನೆ ಹಿಡಿಗೋಲ*
*ನೀನಿಕ್ಕಿದ ತೊಡಕನೀ ಲೋಕದ*
*ಜಡರೆತ್ತ ಬಲ್ಲರೈ ರಾಮನಾಥ?*

ಎಲ್ಲ ಸಮಯಗಳಲ್ಲೂ ಶಿವನಿರುವನಾಗಿ ಹೊತ್ತಾರೆ, ಅಮಾವಾಸ್ಯೆ, ಪೂರ್ಣಿಮೆಗಳನ್ನಾಧರಿಸಿದ ಜ್ಯೋತಿಷ್ಯದ ಲೆಕ್ಕಾಚಾರವೂ ಅನಗತ್ಯ. ಈ ಸರ್ವವ್ಯಾಪಿ ಶಿವನನ್ನು ಕಂಡುಕೊಳ್ಳುವ ಮಾರ್ಗ ದಾಸಿಮಯ್ಯನ ಏಕೋನಿಷ್ಠೆಯ ಭಕ್ತಿ. ಹತ್ತು ದಿಕ್ಕಿಗೆ ಹರಿಯುತ್ತಾ ದಿಕ್ಕು ತಪ್ಪಿಸುವ ಚಿತ್ತವೃತ್ತಿಗಳ ರೋಗಕ್ಕೆ ಅದು ಮದ್ದು. ಈ ಅನುಭಾವ–ಭಕ್ತಿಯ ಸಾಧನ ತಾನು ಮಾಡುವ ಕಾಯಕ:

*ಉಂಕೆಯ ನಿಗುಚಿ*
*ಸರಿಗೆಯ ಸಮಗೊಳಿಸಿ*
*ಸಮಗಾಲನಿಕ್ಕಿ ಅಣಿಯೊಳು ಏಳ ಮೆಟ್ಟಿದೆ*
*ಹಿಡಿದ ಲಾಳಿಯ ಮುಳ್ಳು ಕಂಡಿಕೆಯ ನುಂಗಿತ್ತು*
*ಈ ಸೀರೆಯ ನೆಯ್ದವ ನಾನೋ ನೀನೋ ರಾಮನಾಥ?*

ಈ ದರ್ಶನದಲ್ಲಿ ನರನೂ ಹರನೂ ಸಹ ಸೃಷ್ಟಿಕರ್ತರು. ಈ ಕಾಯಕಮೂಲವಾದ ಅದ್ವೈತ ವೇದಾಂತಿಗಳ, ತಾಂತ್ರಿಕರ ಮತ್ತು ಕಾಯಕ ಜೀವಿಗಳಲ್ಲದ ಇತರ ಭಕ್ತರ ಅದ್ವೈತಕ್ಕಿಂತ ತುಂಬಾ ಭಿನ್ನ. ದಾಸಿಮಯ್ಯಾದಿ ಕಾಯಕಜೀವಿ ಶರಣರ ದರ್ಶನದ ಕಾಳನ್ನು ಕಂದಾಚಾರೀ ಧಾರ್ಮಿಕ ಪರಂಪರೆಗಳ ಡೊಂಗಿ ದರ್ಶನಗಳಿಂದ ಬೇರ್ಪಡಿಸಿ ನೋಡಬೇಕಾಗಿದೆ.

ಇಂದು ನಾವು ಮೂಲಭೂತವಾದ ಮತ್ತು ವಿಚ್ಛಿದ್ರೀಕರಣಗಳ ನಡುವೆ ಅನಿಶ್ಚಿತತೆಯ ಕೊಂಡ ಹಾಯುತ್ತಿದ್ದೇವೆ. ಈ ಸುತ್ತುನೆಲೆಯಲ್ಲಿ ದಾಸಿಮಯ್ಯನ ಕಾಯಕಯೋಗ ದರ್ಶನಕ್ಕೆ ವಿಶೇಷ ಮಹತ್ವವಿದೆ. ಯಾಕೆಂದರೆ ಅವನ ದರ್ಶನ ಶೋಷಣಾವಾದಿ ಏರ್ಪಾಡುಗಳಿಗೆ, ಅವುಗಳನ್ನು ಪೋಷಿಸುವ ಧರ್ಮಗಳಿಗೆ ಹೊರತು. ಸಮಸ್ತ ಸೃಷ್ಟಿಯನ್ನು ಕಸದ ಬುಟ್ಟಿಯಾಗಿಸುತ್ತಿರುವ, ಸರ್ವ ಜೀವ ಜಡಗಳನ್ನು ಸ್ವಂತ ಲಾಭದ ಗುಲಾಮರಾಗಿಸುತ್ತಿರುವ ಭೌತಿಕವಾದಗಳಿಗೂ ಹೊರತು. ಅಂದಂದಿನ ದಂದುಗಗಳ ನಡುವೆಯೂ ನಿಶ್ಚಿಂತನಾಗಿ, ಸ್ವಾವಲಂಬಿಯಾಗಿ, ಸರ್ವಜೀವ ಹಿತಂಕರವಾಗಿ ಈ ಲೋಕವನ್ನು ಮಾರ್ಪಡಿಸುವ ಮಾಂತ್ರಿಕ ಶಕ್ತಿ ದಾಸಿಮಯ್ಯನ ದರ್ಶನದಲ್ಲಿದೆ. ಅದು ಅಂದಿಗೆ ಹೇಗೋ ಇಂದಿಗೂ ಬೇಕಾಗಿದೆ.

*ಒಂದೇ ಅರಿವು, ಒಂದೇ ನಡೆ*
*ಒಂದೇ ಸ್ಥಾನದೊಳಗೆ*
*ಪ್ರಸಾದದಂತವನರಿದೊಡೆ*
*ನಿಶ್ಚಿಂತ ಪರಶಿವನು ರಾಮನಾಥ*

❑ **ಡಾ.ಎಚ್.ಎಸ್. ಶಿವಪ್ರಕಾಶ್**



**ಮುದನೂರಿನ ರಾಮನಾಥ ದೇವಾಲಯ**

# ದೆಹಲಿ ಬಸವ ಇಂಟರ್ ನ್ಯಾಷನಲ್ ಸೆಂಟರ್‌ನ ಬೆಳ್ಳಿಹಬ್ಬದ ವನವಿಹಾರ

ಮಾರ್ಚ್ 17ರಂದು ಬಸವ ಇಂಟರ್ ನ್ಯಾಷನಲ್ ಸೆಂಟರ್ ನವದೆಹಲಿ, ಪ್ರತಿ ವರ್ಷ ಆಚರಿಸುತ್ತಿರುವ 'ಬಸವ ವನವಿಹಾರ'ವನ್ನು ಈ ವರ್ಷವೂ ಸಹ ನೆಹರೂ ಪಾರ್ಕಿನಲ್ಲಿ ಹಮ್ಮಿಕೊಂಡಿತ್ತು.





ಅಂಬಿಕೇಶ್ ಪಾಟೀಲ್‌ರ ಶಂಖನಾದದ ಮೂಲಕ ಕಾರ್ಯಕ್ರಮ ಪ್ರಾರಂಭವಾಯಿತು. ಪುಟಾಣಿ ರಮ್ಯ ಮಲ್ಲನ ಗೌಡರ ವಚನಗಾಯನ ಮುಖಾಂತರ ಆಟೋಟ ಸ್ಪರ್ಧೆಗಳನ್ನು ಪ್ರಾರಂಭ ಮಾಡಲಾಯಿತು. ಶಾಲನ್ ಮುರಗೋಡರವರು ಎಲ್ಲ ಆಟ ಪಾಠಗಳನ್ನು ಸಾಂಗವಾಗಿ ನೆರವೇರಿಸಿಕೊಟ್ಟರು. ಪುಟಾಣಿ ಮಕ್ಕಳ ಓಟ, ಮಹಿಳೆಯರ, ಪತಿ-ಪತ್ನಿಯರ ಹಾಗೂ ಹಿರಿಯ ನಾಗರಿಕರ ಸ್ಪರ್ಧೆಗಳೂ ಎಲ್ಲರ ಮನ ಸೆಳೆದವು. ಮಹಾನುಭಾವಿ ಬಸವಣ್ಣನವರ ವಚನಗಾಯನ ಹಾಗೂ ಭಾವಗೀತೆ ಏರ್ಪಡಿಸಲಾಗಿತ್ತು.

ಉಪರಾಷ್ಟ್ರಪತಿ ದಿವಂಗತ ಬಿ.ಡಿ.ಜತ್ತಿಯವರು ಪೋಷಿಸಿ, ಬೆಳೆಸಿದ ಬಸವ ಇಂಟರ್‌ನ್ಯಾಷನಲ್ ಸೆಂಟರ್, 1988ರಲ್ಲಿ ಶ್ರೀ ಸಿ.ಆರ್.ಹಿರೇಮಠ್ ಅವರ ಮೊದಲ ಅಧ್ಯಕ್ಷತೆಯಲ್ಲಿ ಪ್ರಾರಂಭವಾಗಿ, ಇಂದು ಬೆಳ್ಳಿಹಬ್ಬಕ್ಕೆ ಕಾಲಿಟ್ಟಿರುವುದು ಸಂತಸದ ಸಂಗತಿ. 25 ವರ್ಷಗಳಿಂದ ನಡೆಸಲಾಗುತ್ತಿರುವ ಬಸವ ಜಯಂತೋತ್ಸವ ಕಾರ್ಯಕ್ರಮದಲ್ಲಿ ಸ್ಪೀಕರ್ ನಾಗರತ್ನಮ್ಮ, ಶ್ರೀ ನಂಜುಂಡಪ್ಪ, ಶ್ರೀ ಬಾಳಪ್ಪ ಹುಕ್ಕೇರಿ, ಶ್ರೀ ಸಿದ್ದಯ್ಯ ಪುರಾಣಿಕ್, ಶ್ರೀ ವೀರೇಂದ್ರ ಪಾಟೀಲ್, ಶ್ರೀ ಮಲ್ಲಿಕಾರ್ಜುನ ಮನ್ಸೂರ್, ಶ್ರೀ ಕುಮಾರ ಸ್ವಾಮಿ ಮೊದಲಾದ ಗಣ್ಯರು ಪಾಲ್ಗೊಂಡು ಶುಭ ಹಾರೈಸಿದ್ದನ್ನು ಇಲ್ಲಿ ಸ್ಮರಿಸಲಾಯಿತು. ಸಂಸ್ಥೆಯ ಬೆಳವಣಿಗೆಗೆ ಕಾರಣರಾದ ಶ್ರೀ ಸಿ.ಆರ್.ಹಿರೇಮಠ್, ಶ್ರೀ ಎಸ್.ಎಸ್.ಜವಳಿ, ದಿವಂಗತ ಶ್ರೀ ವೀರಣ್ಣ ಐವಳ್ಳಿ, ಶ್ರೀಮತಿ ಸ್ವರ್ಣ ಐವಳ್ಳಿ, ಡಾ.ಸಸಾಲಟ್ಟಿ, ಡಾ.ಅರುಣ್ ಬಾಲಿ, ಶ್ರೀ ಅಮರನಾಥ್ ತಳವಾಡೆ, ಸಂಸದ ಶ್ರೀ ಪ್ರಭಾಕರ ಕೋರೆ, ಅರವಿಂದ ಜತ್ತಿ, ಬೈಕೆರೆ ನಾಗೇಶ್, ಜಿ.ಎಂ. ಲಿಂಗರಾಜು ಮೊದಲಾದವರ ಸೇವೆಯನ್ನು ಸ್ಮರಿಸುತ್ತಾ ವಂದನೆ ಸಲ್ಲಿಸಲಾಯಿತು.

ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಚೆನ್ನು ಎಸ್.ಮಠದ ಹಾಗೂ ಕಾರ್ಯದರ್ಶಿ ಶ್ರೀ ವಿ.ವಿ.ಬಿರಾದಾರ ಅವರು ಕಾರ್ಯಕ್ರಮದ ಕೊನೆಯಲ್ಲಿ ಆಟೋಟ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ ಮಾಡಿದರು. ಕೋಶಾಧ್ಯಕ್ಷ ಜಗದೀಶ್ ಬಂಗಾರಿ ವಾರ್ಷಿಕ ವರದಿ ಪ್ರಸ್ತುತಪಡಿಸಿದರು. ಸಂಸ್ಥೆಯ ಬೆಳವಣಿಗೆಯ ಕುರಿತಂತೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಹಲವಾರು ಸದಸ್ಯರು ತಂತಮ್ಮ ವಿಚಾರಗಳನ್ನು ಹಂಚಿಕೊಂಡರು. ಕೊನೆಯಲ್ಲಿ ತಂಬೋಲಾ ಆಡುವುದರ ಮೂಲಕ ವನವಿಹಾರದ ಕಾರ್ಯಕ್ರಮ ವಂದನಾರ್ಪಣೆಯೊಂದಿಗೆ ಮುಕ್ತಾಯವಾಯಿತು.

❑ ವಿ.ವಿ.ಬಿರಾದಾರ

# ರಾಷ್ಟ್ರಪ್ರಶಸ್ತಿ ಪುರಸ್ಕೃತ ಅತ್ಯುತ್ತಮ ಪ್ರಾದೇಶಿಕ ಚಿತ್ರ 'ಭಾರತ್ ಸ್ಟೋರ್ಸ್'



ಪಿ.ಶೇಷಾದ್ರಿ ಕನ್ನಡದ ಸದಭಿರುಚಿಯ ಚಲನಚಿತ್ರಗಳ ಪ್ರಮುಖ ನಿರ್ದೇಶಕರು. ಸತತ ಏಳು ಬಾರಿ ರಾಷ್ಟ್ರಪ್ರಶಸ್ತಿ ಪಡೆದ ಭಾರತದ ಏಕೈಕ ನಿರ್ದೇಶಕ ಎಂಬ ಅಪರೂಪದ ಸಾಧನೆ ಇವರದ್ದು.

ಶೇಷಾದ್ರಿಯವರ ಮೊದಲ ಚಿತ್ರ 'ಮುನ್ನುಡಿ' 2000ನೇ ಇಸವಿಯಲ್ಲಿ ತೆರೆಗೆ ಬಂದ ಈ ಚಿತ್ರ ಅವರಿಗೆ ಮೊದಲ ರಾಷ್ಟ್ರ ಪ್ರಶಸ್ತಿಯನ್ನು ದೊರಕಿಸಿಕೊಟ್ಟಿತು. ನಂತರ 'ಅತಿಥಿ' (2001), 'ಬೇರು' (2004), 'ತುತ್ತೂರಿ' (2005), 'ವಿಮುಕ್ತಿ' (2008) ಮತ್ತು 'ಬೆಟ್ಟದ ಜೀವ' (2010) ಇದೀಗ ಮತ್ತೆ 'ಭಾರತ್ ಸ್ಟೋರ್ಸ್' (2012)

60ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳ ಪಟ್ಟಿಯಲ್ಲಿ 'ಅತ್ಯುತ್ತಮ ಪ್ರಾದೇಶಿಕ ಚಿತ್ರ' ವಿಭಾಗದಲ್ಲಿ ಪ್ರಶಸ್ತಿ ಪಡೆದಿರುವ 'ಭಾರತ್ ಸ್ಟೋರ್ಸ್' ಚಿತ್ರದ ಜತೆಗೆ ಇದರಲ್ಲಿನ ಅಭಿನಯಕ್ಕಾಗಿ ಚಿತ್ರದಲ್ಲಿ ಗೋವಿಂದ ಶೆಟ್ಟಿಯ ಪಾತ್ರಧಾರಿ ಹೆಚ್. ಜಿ. ದತ್ತಾತ್ರೇಯ (ದತ್ತಣ್ಣ) ಅವರಿಗೆ ತೀರ್ಪುಗಾರರ ವಿಶೇಷ ಪ್ರಶಸ್ತಿ ಲಭಿಸಿದೆ. ಈ ಗೌರವ ದತ್ತಣ್ಣರವರಿಗೆ 3ನೇ ಬಾರಿ ಸಿಕ್ಕಿದೆ. ಮೊದಲ ಪ್ರಶಸ್ತಿ ಕೂಡ ಪಿ.ಶೇಷಾದ್ರಿಯವರ 'ಮುನ್ನುಡಿ' ಚಿತ್ರದಲ್ಲಿನ್ ನಟನೆಗೆ ಮತ್ತು ಎರಡನೆಯ 'ಮೌನಿ' ಚಿತ್ರದ ಅಭಿನಯಕ್ಕೆ ಸಂದಿತ್ತು.

ನಮ್ಮೂರಿನ ಶೆಟ್ಟರ ಅಂಗಡಿಯಲ್ಲಿ ಕೇವಲ ದಿನಸಿಗಳು ಮಾತ್ರ ಸಿಗುವುದಿಲ್ಲ. ಅಪ್ಪನ ಋಣವೂ ಅಲ್ಲಿದೆ. ಉದ್ರಿ ಬರೆಯುವ ಪುಸ್ತಕದಲ್ಲಿ ನಂಬಿಕೆ ಅಡಗಿದೆ. ದುಡ್ಡಿಲ್ಲದಿದ್ದರೂ, ನಾಳೆಗೆ ಆತ ನಮ್ಮ ಕಷ್ಟಕ್ಕೆ ಆಗುತ್ತೇನೆ ಎಂಬ ಭರವಸೆ ಇದೆ. ಶೆಟ್ಟರ ಅಂಗಡಿ ಅಂದರೆ, ಅದು ವ್ಯಾಪಾರದ ಸ್ಥಳವಷ್ಟೇ ಅಲ್ಲ. ಭಾವನೆಗಳ ಕೊಡುಕೊಳ್ಳುವಿಕೆ ತಾಣ. ನಾಳೆ ಅಂಗಡಿ ಬಂದ್ ಆದರೆ? ಶೆಟ್ಟಿ ನಿರುದ್ಯೋಗಿ ಆಗುತ್ತಾನೆ ಎಂಬುದು ಸರಳ ಉತ್ತರವಾದೀತು. ಆತನೊಂದಿಗೆ ಹೊರಟು ಹೋಗುವ ಎಲ್ಲ ಭಾವನೆಗಳನ್ನು ಹುಡುಕುವುದು ಎಲ್ಲಿ? ಇಂತಹ ಹುಡುಕಾಟದ ಹಾದಿಯಲ್ಲಿ ಹುಟ್ಟಿಕೊಂಡಿದ್ದೇ ಪಿ.ಶೇಷಾದ್ರಿ ನಿರ್ದೇಶನದ ಭಾರತ್ ಸ್ಟೋರ್ಸ್. ನಮ್ಮ ದೇಶದ ಚಿಲ್ಲರೆ ವ್ಯಾಪಾರಿಗಳಿಗೆ ನಿದ್ದೆಗೆಡಿಸಿರುವ ವಿದೇಶಿ ನೇರ ಬಂಡವಾಳದ ವಿಚಾರವನ್ನು ಈ ಚಿತ್ರ ಹೊತ್ತು ತಂದಿದೆ.

ದಶಕಗಳಿಂದ ವ್ಯಾಪಾರ ಮಾಡಿಕೊಂಡಿದ್ದ ಗೋವಿಂದ ಶೆಟ್ಟಿ ಎಲ್ಲರ ಮೆಚ್ಚುಗೆಯ ವ್ಯಕ್ತಿ. ಈತನೇ ಕಥಾ ನಾಯಕ. ನಂತರ ಜಾಗತೀಕರಣ, ಔದ್ಯೋಗಿಕರಣದಿಂದಾಗಿ ಈತನಿರುವ ಪ್ರದೇಶದಲ್ಲಿ ಬಜಾರ್, ಮಾಲ್‌ಗಳು ತಲೆ ಎತ್ತುತ್ತವೆ. ವ್ಯಾಪಾರದ ವೈಖರಿ ಬದಲಾಗುತ್ತದೆ. ಗ್ರಾಹಕರ ಆದ್ಯತೆಗಳು, ಅವಶ್ಯಕತೆಗಳು ಬದಲಾಗುತ್ತವೆ. ಒಂದು ದಿನ ಶೆಟ್ಟಿಯ ಭಾರತ್ ಸ್ಟೋರ್ಸ್ ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತದೆ. ವಿದೇಶದಲ್ಲಿದ್ದ ಭಾರತೀಯ ಮಹಿಳೆಯೊಬ್ಬಳು ಸ್ವದೇಶಕ್ಕೆ ಆಗಮಿಸುತ್ತಾಳೆ. ತನ್ನ ತಂದೆಗೆ ಸಹಾಯ ಮಾಡಿದ್ದ ಭಾರತ್ ಸ್ಟೋರ್ಸ್ ವ್ಯಾಪಾರಿಯನ್ನು ಹುಡುಕುತ್ತಾಳೆ. ಆ ವ್ಯಕ್ತಿಯನ್ನು ಹುಡುಕುವುದೇ ದುಸ್ತರವಾಗುತ್ತದೆ. ಗೋವಿಂದ ಶೆಟ್ಟಿಯನ್ನು ಪತ್ತೆ ಹಚ್ಚಲು ಹೊರಟವರಿಗೆ ಅಧೋಗತಿಯ ಒಂದೊಂದೇ ಪದರಗಳು ಬಿಚ್ಚಿಕೊಳ್ಳುತ್ತಾ ಹೋಗುತ್ತವೆ. ಹೀಗೆ ಕತೆ ಸಾಗುತ್ತದೆ.

'ಮುನ್ನುಡಿ' ಚಿತ್ರದೊಂದಿಗೆ ನಿರ್ದೇಶನಕ್ಕೆ ಇಳಿದ ಶೇಷಾದ್ರಿ ಅವರು, ಭಯೋತ್ಪಾದನೆ ವಿದ್ಯಮಾನವನ್ನು ಇಟ್ಟುಕೊಂಡು 'ಅತಿಥಿ' ಚಿತ್ರ ಮಾಡಿದರು. ಮಕ್ಕಳ ಸಮಸ್ಯೆಯೊಡೆಗೆ 'ತುತ್ತೂರಿ' ಊದಿದರು. ಬದುಕಿನ ಇಳಿ ಸಂಜೆಯಲ್ಲಿ 'ವಿಮುಕ್ತಿ' ಜತೆ ಮಾತಿಗಿಳಿದರು. 'ಬೆಟ್ಟದ ಜೀವ' ದಲ್ಲಿ ಪೋಷಕರ ಮತ್ತು ಮಕ್ಕಳ ನಡುವಿನ ಬಾಂಧ್ಯವನ್ನು ಸಾರಿದರು. ಹೆಮ್ಮೆಯ ವಿಚಾರವೆಂದರೆ, ಮಾಡಿದ ಏಳೂ ಸಿನಿಮಾಗಳು ರಾಷ್ಟ್ರ ಪ್ರಶಸ್ತಿ ಪಡೆದ ಭಾರತದ ಏಕೈಕ ನಿರ್ದೇಶಕ ಹೆಮ್ಮೆಯ ಪಿ.ಶೇಷಾದ್ರಿ ಎಂಬುದು ವಿಶೇಷ. ಇವರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು.

Delhi Karnataka Sangha's Abhimatha Monthly,
April - 2013, Price Rs.1/- RNI Regn. No. 53405/91, DL-SW-1/4016/13-15
Printout Date : April 8th / 9th, Postal Date :10th / 11th, Total Pages-20




Editor: Smt.Usha Bharatadri, Printed & Published by C.M. Nagaraja General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615 and printed at Saujanya Printing Press
C-95, Okhla Industrial Area, Phase-I, New Delhi-110020, Tel: 26815778, 40520770